


ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಮಾರ್ಚ್ 18 ಬುಧವಾರ 2026
ಸಂಪುಟ: 46 | ಸಂಚಿಕೆ: 327 | ಪುಟಗಳು: 12
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ಚಾಮುಂಡಿಬೆಟ್ಟಕ್ಕೆ ಖಾಸಗಿ ವಾಹನ ನಿರ್ಬಂಧಿಸಿ

ಪ್ರತ್ಯೇಕ ಸಾರಿಗೆ ಸೌಕರ್ಯ


- ಬೆಟ್ಟದ ತಪ್ಪಲಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿದ ಬಳಿಕ ಈ ವ್ಯವಸ್ಥೆ ಜಾರಿಗೆ ಚಿಂತನೆ
- ಜಿ.ಟಿ.ದೇವೇಗೌಡರ ಪ್ರಸ್ತಾಪಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾಹಿತಿ
- ಬೆಟ್ಟದ ಪ್ರಸ್ತುತ ಪಾರ್ಕಿಂಗ್ ಕಟ್ಟಡ ಮೂಲಸೌಕರ್ಯಕ್ಕೆ ಬಳಕೆ
- ಮೇಲ್ಛಾವಣಿ ಸಹಿತ ಎಸ್‌ಎಸ್ ರೇಲಿಂಗ್ಸ್, ಫ್ಯಾನ್, ಟಿವಿ, ಎಲ್‌ಇಡಿ ಅಳವಡಿಕೆ
- ವಿಶೇಷಚೇತನರು, ಹಿರಿಯರಿಗೆ ಬ್ಯಾಟರಿ ಚಾಲಿತ ವಾಹನ, ಸುಸಜ್ಜಿತ ಆಂಬುಲೆನ್ಸ್



ಮೈಸೂರು, ಮಾ.17– ಚಾಮುಂಡಿಬೆಟ್ಟ ತಪ್ಪಲಿನಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿದ ಬಳಿಕ ಬೆಟ್ಟಕ್ಕೆ ಖಾಸಗಿ ವಾಹನಗಳನ್ನು ನಿರ್ಬಂಧಿಸಿ, ಸಾರಿಗೆ ಸಂಸ್ಥೆಯ ಬಸ್ ಅಥವಾ ಪ್ರತ್ಯೇಕ ವಾಹನ ವ್ಯವಸ್ಥೆಗೆ ಚಿಂತನೆ ನಡೆದಿದೆ ಎಂದು ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು, ಚಾಮುಂಡೇಶ್ವರಿ ದೇವಿಯ ಸುಗಮ ದರ್ಶನಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸುವಂತೆ ಒತ್ತಾಯಿಸಿದರಲ್ಲದೆ, ಹಿಮವದ್ ಗೋಪಾಲ ಸ್ವಾಮಿ ಬೆಟ್ಟದ ಮಾದರಿಯಲ್ಲಿ ಚಾಮುಂಡಿ ಬೆಟ್ಟಕ್ಕೂ ಖಾಸಗಿ ವಾಹನ ನಿರ್ಬಂಧಿಸಬೇಕೆಂಬ ಪರಿಸರವಾದಿಗಳ ಮನವಿಯನ್ನು ಸರ್ಕಾರದ ಗಮನಕ್ಕೆ ತಂದರು. ಈ ವೇಳೆ ಸದನದಲ್ಲಿ ಸರ್ಕಾರದ ಪರ ಪ್ರತಿಕ್ರಿಯಿಸಿದ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ನೀವು (ಜಿಟಿಡಿ) ಮಾನ್ಯ ಮುಖ್ಯಮಂತ್ರಿಗಳ ಜೊತೆ ಉತ್ತಮ ಬಾಂಧವ್ಯ ಹೊಂದಿದ್ದೀರಿ. ಈಗಾಗಲೇ ಅವರೊಂದಿಗೆ ಚರ್ಚಿಸಿದ್ದೀರಿ. ಹಾಗಾಗಿ ಸರ್ಕಾರ ಆದಷ್ಟು ಬೇಗ ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದು ಭರವಸೆ ನೀಡಿದರು.


ಜಿ.ಟಿ.ದೇವೇಗೌಡ


ರಾಮಲಿಂಗಾರೆಡ್ಡಿ

ಸಮಗ್ರ ಅಭಿವೃದ್ಧಿ ಆಶಯ: ಜಿ.ಟಿ. ದೇವೇಗೌಡರಿಗೆ ಲಿಖಿತ ಮಾಹಿತಿ ನೀಡಿರುವ ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವ ರಾಮಲಿಂಗಾರೆಡ್ಡಿ, ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯವು ಪ್ರಮುಖ ಧಾರ್ಮಿಕ ಶ್ರದ್ಧಾ ಕೇಂದ್ರವಾಗಿದ್ದು, ದೇಶ–ವಿದೇಶಗಳಿಂದಲೂ ಭಕ್ತರು ಹಾಗೂ ಪ್ರವಾಸಿಗರು ಆಗಮಿಸುತ್ತಾರೆ. ಆಷಾಢ ಮಾಸದಲ್ಲಿ ಅದರಲ್ಲೂ ಆ ಮಾಸದ ಶುಕ್ರವಾರಗಳಂದು ಲಕ್ಷಾಂತರ ಜನ ಬೆಟ್ಟಕ್ಕೆ ಬರುತ್ತಾರೆ. ವಿಶ್ವವಿಖ್ಯಾತ ದಸರಾ ಸಂದರ್ಭದಲ್ಲೂ ಭಾರೀ ಜನದಟ್ಟಣೆ ಉಂಟಾಗುತ್ತದೆ. ಹಾಗಾಗಿ ಶ್ರೀ ಚಾಮುಂಡೇಶ್ವರಿ ದೇವಿ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚಿಸಲಾಗಿದೆ ಎಂದು ತಿಳಿಸಿದ್ದಾರೆ.

ಐದು ಎಕರೆ ಜಾಗ ಗುರುತು: ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆದ ಮುಖ್ಯಮಂತ್ರಿಗಳ ■ 6ನೇ ಪುಟಕ್ಕೆ

ಯುಗಾದಿಯಿಂದ ಯುಗಾದಿಗೆ ವರ್ಷ ಭವಿಷ್ಯ ಪುಟ–7

ಚಾಮರಾಜನಗರದ ಹಲವೆಡೆ ಆಲಿಕಲ್ಲು ಸಹಿತ ಭಾರೀ ಮಳೆ

■ ರಾಶಿರಾಶಿ ಆಲಿಕಲ್ಲು ಕಂಡು ಸಂಭ್ರಮಿಸಿದ ಜನತೆ ■ ಮಾವು, ಬಾಳೆ, ಕೋಸು, ಟಮೋಟೋ ಫಸಲು ಸೇರಿ ಇತರ ಫಸಲಿಗೆ ಹಾನಿ ■ ಸೂಕ್ತ ಪರಿಹಾರಕ್ಕೆ ಆಗ್ರಹ



ಚಾಮರಾಜನಗರ, ಮಾ.17 (ಎಸ್‌ಎಸ್)– ಬಿರು ಬಿಸಿಲಿನ ಬೇಗೆಯಿಂದ ತತ್ತರಿಸಿದ್ದ ಚಾಮರಾಜನಗರ ಜಿಲ್ಲೆಯ ಜನತೆಗೆ ವರುಣ ತಂಪೆರೆದಿದ್ದಾನೆ. ಸೋಮವಾರ ರಾತ್ರಿ ಹಾಗೂ ಮಂಗಳವಾರ ಮಧ್ಯಾಹ್ನ ಜಿಲ್ಲೆಯ ಹಲವೆಡೆ ಬಿರುಗಾಳಿ, ಗುಡುಗು ಸಹಿತ ಭಾರೀ ಆಲಿಕಲ್ಲು ಮಳೆ ಸುರಿದಿದ್ದು, ಕಾಶ್ಮೀರದ ಮಂಜು ಸುರಿದ ವಾತಾವರಣ ಸೃಷ್ಟಿಯಾಗಿತ್ತು.

ಇತ್ತ ಮಳೆಯಿಂದ ಬೇಸಿಗೆ ಬಿಸಿಲಿನಿಂದ ಕಂಗೆಟ್ಟಿದ್ದ ಜನರು ಒಂದಿಷ್ಟು ತಂಪಾದ ವಾತಾವರಣದ ಅನುಭವ ಪಡೆದಿದ್ದಾರೆ. ಅದರಲ್ಲೂ ಜಿಲ್ಲಾ ಕೇಂದ್ರ ಚಾಮರಾಜನಗರ, ವೀರನಪುರ, ನಂಜೇದೇವನಪುರ, ಕಾಳನಹುಂಡಿ, ಕರಿಯನಕಟ್ಟೆ ಹುಂಡಿ, ಯಡಪುರ, ಶಿವಪುರ, ತಾಳವಾಡಿ ಹಾಗೂ ಯಳಂದೂರು ತಾಲೂಕಿನ ಹೊಂಗನೂರು ಸೇರಿದಂತೆ ಮತ್ತಿತರ ಗ್ರಾಮಗಳಲ್ಲಿ ಆಲಿಕಲ್ಲು ಮಳೆ ಸುರಿದಿದೆ. ಈ ಆಲಿಕಲ್ಲು ಮಳೆಯಿಂದಾಗಿ ರಸ್ತೆಯ ಮೇಲೆಲ್ಲಾ ರಾಶಿ ರಾಶಿಯಾಗಿ ಆಲಿಕಲ್ಲುಗಳು ಬಿದ್ದಿದ್ದು, ಇಡೀ ರಸ್ತೆ ಹಿಮಾಲಯ ಪ್ರದೇಶದಲ್ಲಿ ಹಿಮ ಆವೃತವಾದಂತೆ ಕಾಣುತ್ತಿತ್ತು. ಚಾಮರಾಜನಗರ ಜಿಲ್ಲೆಯಲ್ಲಿ ಈ ರೀತಿಯ ಆಲಿಕಲ್ಲುಗಳು ■ 6ನೇ ಪುಟಕ್ಕೆ

ಮುಂದಿನ 4 ದಿನ ರಾಜ್ಯಾದ್ಯಂತ ಮಳೆ

ಬೆಂಗಳೂರು: ರಾಜ್ಯಾದ್ಯಂತ 4 ದಿನ ಅಲ್ಲಲ್ಲಿ ಜೋರಾದ ಗಾಳಿಯೊಂದಿಗೆ ಗುಡುಗು ಸಹಿತ ಹಗುರದಿಂದ ಸಾಧಾರಣ ಮಳೆಯಾಗಲಿದೆ. ಮಂಗಳವಾರ ಬೆಂಗಳೂರು ನಗರದ ಹಲವೆಡೆ ವರ್ಷದ ಮೊದಲ ಮಳೆಯ ಸಿಂಚನವಾಯಿತು. ನಗರದ ಕೆಲವೆಡೆ ಆಲಿಕಲ್ಲು ಸಹಿತ ಮಳೆಯಾಗಿದೆ. ಯಲಹಂಕ ಸುತ್ತಮುತ್ತ ಸಂಜೆ ಸುಮಾರು 1 ಗಂಟೆ ನಿರಂತರವಾಗಿ ಮಳೆಯಾಗಿದೆ

ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

- 36,179 ಫ್ರೆಶರ್ಸ್ ಸೇರಿದಂತೆ 39,349 ವಿದ್ಯಾರ್ಥಿಗಳು ನೋಂದಣಿ
- ಮೈಸೂರಲ್ಲಿ 43, ಗ್ರಾಮಾಂತರ ಪ್ರದೇಶದಲ್ಲಿ 93 ಪರೀಕ್ಷಾ ಕೇಂದ್ರ
- ಸಿಸಿ ಕ್ಯಾಮರಾ, ಸಿಟ್ಟಿಂಗ್, ಮೊಬೈಲ್ ಸ್ಕ್ವಾಡ್‌ನ ಕಣ್ಗಾವಲು
- ಡಿಸಿ ಕಚೇರಿಯಲ್ಲಿ ವೆಬ್‌ಕಾಸ್ಟಿಂಗ್ ಮೂಲಕ ಹದ್ದಿನ ಕಣ್ಣು

ಮೈಸೂರು, ಮಾ.17(ಎಂಟಿವೈ)– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಾಳೆ (ಮಾ.18) ಆರಂಭವಾಗಿ ಏ.2ರವರೆಗೆ ನಡೆಯಲಿದ್ದು, ಜಿಲ್ಲೆಯಲ್ಲಿ 136 ಪರೀಕ್ಷಾ ಕೇಂದ್ರದಲ್ಲಿ 39,349 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ.

ಜಿಲ್ಲಾಡಳಿತ, ಶಾಲಾ ಶಿಕ್ಷಣ ಇಲಾಖೆ ಮೈಸೂರು ಜಿಲ್ಲೆಯಲ್ಲಿ ಪರೀಕ್ಷೆ ಸುಗಮವಾಗಿ ನಡೆಯಲು ಅಗತ್ಯ ಕ್ರಮ ಕೈಗೊಳ್ಳಲಾಗಿದ್ದು, ಪರೀಕ್ಷೆಗೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಮೈಸೂರು ಜಿಲ್ಲೆಯಲ್ಲಿ 277 ಸರ್ಕಾರಿ ಶಾಲೆ, 122 ಅನುದಾನಿತ ಶಾಲೆ, 304 ಖಾಸಗಿ ಶಾಲೆ ಸೇರಿದಂತೆ ಒಟ್ಟು 703 ಶಾಲೆಗಳ 36,179 ವಿದ್ಯಾರ್ಥಿಗಳು ಈ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲಿದ್ದು, ಅವರೊಂದಿಗೆ ಶಾಲಾ ರೆಗ್ಯುಲರ್ ಪುನರಾವರ್ತಿತ 2,458 ■ 6ನೇ ಪುಟಕ್ಕೆ


ಮೈಸೂರಿನ ವಿಜಯ ವಿಠಲ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಅಂತಿಮ ಸಿದ್ಧತೆ ನಡೆದಿದೆ.

> ಜಿಲ್ಲೆಯಲ್ಲಿ 136 ಪರೀಕ್ಷಾ ಕೇಂದ್ರ ತೆರೆಯಲಾಗಿದ್ದು, ಸುಗಮ ಪರೀಕ್ಷೆಗಾಗಿ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. 3 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಪರೀಕ್ಷಾ ಕಾರ್ಯ ನಿರ್ವಹಿಸಲಿದ್ದಾರೆ. 36,179 ಫ್ರೆಶರ್ಸ್ ಸೇರಿದಂತೆ 39,349 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ನೋಂದಣಿ ಮಾಡಿಕೊಂಡಿದ್ದಾರೆ. ಪರೀಕ್ಷಾ ಕೇಂದ್ರದಲ್ಲಿ ಸಿಸಿ ಕ್ಯಾಮರಾ ಅಳವಡಿಸಿದ್ದು, ಜಿಲ್ಲಾಧಿಕಾರಿ ಕಚೇರಿಯಲ್ಲಿ ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದೆ. ಪರೀಕ್ಷಾ ಅಕ್ರಮ ತಡೆಗೆ ಸ್ಕ್ವಾಡ್ ರಚಿಸಲಾಗಿದೆ. - ಉದಯ್‌ಕುಮಾರ್, ಡಿಡಿಪಿಐ

ಮೈಸೂರಿನಲ್ಲಿ ಫ್ಲೆಕ್ಸ್, ಬ್ಯಾನರ್, ಅನಧಿಕೃತ ಜಾಹೀರಾತು ಫಲಕ ತೆರವು ತ್ವರಿತ

ಪಾಲಿಕೆ ವಲಯ ಕಚೇರಿ ಅಭಿವೃದ್ಧಿ ಅಧಿಕಾರಿಗಳ ನೇತೃತ್ವದ ತಂಡ ರಚನೆ

- ನಿರಂತರ ಕಾರ್ಯಾಚರಣೆ ನಡೆಸುತ್ತಿರುವ ಅಭಯ ಟೀಂ
- ಫ್ಲೆಕ್ಸ್, ಬ್ಯಾನರ್ ಹೆಚ್ಚಾಗಿ ಅಳವಡಿಸುವವರೇ ರಾಜಕಾರಣಿಗಳು
- ಇನ್ನು ಮುಂದೆ ಯಾರ ಒತ್ತಡಕ್ಕೂ ಮಣಿಯುವ ಅಗತ್ಯವಿಲ್ಲ
- ಕೆಲವೇ ದಿನಗಳಲ್ಲಿ ಮೈಸೂರು ಫ್ಲೆಕ್ಸ್ ಮುಕ್ತ ಮಾಡುವ ಗುರಿ


ಮೈಸೂರಿನ ದೇವರಾಜ ಅರಸ್ ರಸ್ತೆಯಲ್ಲಿ ಅಳವಡಿಸಿರುವ ಭಾರೀ ಎತ್ತರದ ಫ್ಲೆಕ್ಸ್

ಮೈಸೂರು, ಮಾ.17(ಬಿಎಲ್‌ಯು)– ಫ್ಲೆಕ್ಸ್ ಮುಕ್ತ ನಗರ ಮಾಡಲು ಮೈಸೂರು ನಗರ ಪಾಲಿಕೆಯು ಕಾರ್ಯಾಚರಣೆ ಚುರುಕುಗೊಳಿಸಿದೆ. ನಗರ ಪಾಲಿಕೆಯ ಅಭಯ ಟೀಂ ಸೇರಿದಂತೆ ವಲಯ ಕಚೇರಿಗಳ ಅಭಿವೃದ್ಧಿ ಅಧಿಕಾರಿಗಳ ನೇತೃತ್ವದ ತಂಡ ನಗರದೆಲ್ಲೆಡೆ ಮುಲಾಜಿಲ್ಲದೆ ಫ್ಲೆಕ್ಸ್, ಬ್ಯಾನರ್ ಹಾಗೂ ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸುತ್ತಿದೆ.

ವಿಶ್ವ ವಿಖ್ಯಾತ ಮೈಸೂರು ಅರಮನೆ ಸೇರಿದಂತೆ ಹಲವು ಪ್ರಸಿದ್ಧ ಪ್ರವಾಸಿ ತಾಣಗಳ ಸಂಗಮವಾಗಿರುವ ಮೈಸೂರು ನಗರಕ್ಕೆ ಪ್ರತಿ ದಿನ ದೇಶ–ವಿದೇಶಗಳ ಸಾವಿರಾರು ಪ್ರವಾಸಿಗರು ಆಗಮಿಸುತ್ತಾರೆ. ಪ್ರವಾಸಿ ತಾಣ ಸೇರಿದಂತೆ ಇತರೆ ಮಾಹಿತಿ ನೀಡುವ ಫಲಕಗಳ ಬದಲಿಗೆ ಎಲ್ಲೆಡೆ ಫ್ಲೆಕ್ಸ್, ಬ್ಯಾನರ್‌ಗಳು ರಾರಾಜಿಸುತ್ತಿವೆ.

ಪ್ರಮುಖ ರಸ್ತೆ, ವೃತ್ತಗಳು ಸೇರಿದಂತೆ ಎಲ್ಲೆಂದರೆ ಅಲ್ಲಿ ಅಳವಡಿಸುವ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್‌ಗಳಿಂದ ■ 6ನೇ ಪುಟಕ್ಕೆ

ಚೆನ್ನೈ ಫ್ಲೆಕ್ಸ್ ಫ್ರಿ ಸಿಟಿ!; ಮೈಸೂರು ಫ್ಲೆಕ್ಸ್ ಫುಲ್ ಸಿಟಿ!!

ಒಂದು ಕಾಲದಲ್ಲಿ ಫ್ಲೆಕ್ಸ್ ಫುಲ್ ಸಿಟಿಯಾಗಿದ್ದ ತಮಿಳುನಾಡು ರಾಜಧಾನಿ ಚೆನ್ನೈ ಈಗ ಫ್ಲೆಕ್ಸ್ ಫ್ರೀ ಸಿಟಿಯಾಗಿದೆ. ಫ್ಲೆಕ್ಸ್ ಫ್ರೀ ಸಿಟಿಯಾಗಿದ್ದ ಮೈಸೂರು ಈಗ ಫ್ಲೆಕ್ಸ್ ಫುಲ್ ಸಿಟಿಯಾಗಿದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಬೇಸರ ವ್ಯಕ್ತಪಡಿಸಿದರು.



ಚೆನ್ನೈನಲ್ಲಿ ಎಲ್ಲೆ ನೋಡಿದರೂ ಫ್ಲೆಕ್ಸ್, ಬ್ಯಾನರ್, ಅನಧಿಕೃತ ಜಾಹಿರಾತುಗಳು ತುಂಬಿರುತ್ತಿದ್ದವು. ಈ ಹಾವಳಿಗೆ ತಿಲಾಂಜಲಿ ಇಡಲು ಅಲ್ಲಿನ ದ ಗ್ರೇಟರ್ ಚೆನ್ನೈ ಕಾರ್ಪೊರೇಷನ್ ಕಟ್ಟುನಿಟ್ಟಿನ ಕಾನೂನು ಜಾರಿಗೊಳಿಸಿ, ಫ್ಲೆಕ್ಸ್ ಫ್ರಿ ಸಿಟಿಯಾಗಿ ಮಾಡಿತು.

ಆದರೆ ಫ್ಲೆಕ್ಸ್ ಹಾವಳಿಯಿಂದ ಮುಕ್ತವಾಗಿದ್ದ ಮೈಸೂರು ಇಂದು ಫ್ಲೆಕ್ಸ್ ಫುಲ್ ಸಿಟಿಯಾಗಿದೆ. ಈ ಸಂಬಂಧ ಜಿಲ್ಲಾಧಿಕಾರಿಗಳನ್ನು ಭೇಟಿ ■ 6ನೇ ಪುಟಕ್ಕೆ

ಮೈಸೂರು ಮಿತ್ರ ಬುಧವಾರ 18 ಮಾರ್ಚ್ 2026

ಮೈಸೂರು ಜಿಪಂ ಮಾಜಿ ಹಂಗಾಮಿ ಅಧ್ಯಕ್ಷ ಸಾ.ರಾ.ನಂದೀಶ್ ಆರೋಪ ಸುಳ್ಳು

ಕಾಂಗ್ರೆಸ್ ಮುಖಂಡರ ಸ್ಪಷ್ಟನೆ

ಮೈಸೂರು,ಮಾ.17(ಜಿಎ)–ಮೈಸೂರು ಜಿಲ್ಲೆ ಸಾಲಿಗ್ರಾಮ ತಾಲೂಕಿನ ಕೆರೆಯ ಕೋಡಿಯಿಂದ ಹಳ್ಳಿ ಮೈಸೂರು ರಸ್ತೆಯ ವರೆಗೆ ನಡೆಯುತ್ತಿರುವ ಕುಶಾಲ ನಗರ–ಬೆಂಗಳೂರು ರಾಜ್ಯ ಹೆದ್ದಾರಿಯನ್ನು ದ್ವಿಪಥ ರಸ್ತೆಯನ್ನಾಗಿ ಮಾಡುವ ಅಭಿವೃದ್ಧಿ ಕಾಮಗಾರಿ ಕುರಿತು ಕೆ.ಆರ್.ನಗರ ಶಾಸಕ ಡಿ.ರವಿಶಂಕರ್ ವಿರುದ್ಧ ಜಿಪಂ ಮಾಜಿ ಹಂಗಾಮಿ ಅಧ್ಯಕ್ಷ ಸಾ.ರಾ.ನಂದೀಶ್ ಈಚೆಗೆ ಸುದಿಗೋಷ್ಠಿಯಲ್ಲಿ ಮಾಡಿರುವ ಆರೋಪ ಸುಳ್ಳು ಎಂದು ಸಾಲಿಗ್ರಾಮ ತಾಲೂಕಿನ ಹಲವು ಕಾಂಗ್ರೆಸ್ ಮುಖಂಡರು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡ ಪ್ರಭಾಕರ್ ಮಾತನಾಡಿ, ಶಾಸಕ ಡಿ.ರವಿಶಂಕರ್ ಸದನದಲ್ಲಿ ನೀಡಿರುವ ಮಾಹಿತಿ ಸರಿ ಇದೆ. ಆದರೆ ಕೆ ಶಿಪ್ ಅಧಿಕಾರಿಗಳು ತಪ್ಪು ಮಾಹಿತಿ ನೀಡಿದ್ದಾರೆ. ವಿವಿಧ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದಂತೆ ಎರಡು ಬಾರಿ ಸಭೆ ಕರೆದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಅಭಿವೃದ್ಧಿ ಕಾರ್ಯಗಳಿಗೆ ಅವರೇ ಅಡ್ಡಿಯಾಗಿದ್ದಾರೆ ಎಂದು ದೂರಿದರು.

ಸಾ.ರಾ.ನಂದೀಶ್ ಜಿಪಂ ಸದಸ್ಯರಾಗಿದ್ದ ವೇಳೆ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಂಡಿಲ್ಲ. ಈಗ ಶಾಸಕ ರವಿಶಂಕರ್ ಕೈಗೊಂಡಿರುವ ಅಭಿವೃದ್ಧಿ ಕಾರ್ಯ ಜನತೆಗೆ ತಿಳಿದಿದೆ. ತಮ್ಮ ತೆಂಗಿನಮರಗಳನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ನೆಲಕ್ಕುರುಳಿಸಿದ್ದಾರೆ ಎಂದು ಸಾ.ರಾ.ನಂದೀಶ್ ಆರೋಪಿಸಿದ್ದಾರೆ. ಆದರೆ ಅವು ಅವರ ಜಮೀನಿನಲ್ಲಿರಲಿಲ್ಲ. ಬದಲಾಗಿ ರಸ್ತೆಯಲ್ಲಿ ನೆಡಲಾಗಿತ್ತು ಹೀಗಾಗಿ ರಸ್ತೆ ಅಭಿವೃದ್ಧಿಗಾಗಿ ಕಡಿಯಲಾಗಿದೆ ಅಷ್ಟೇ ಎಂದು ಸ್ಪಷ್ಟನೆ ನೀಡಿದರು.

ದೇವಸ್ಥಾನದ ಜಾಗಕ್ಕೂ ಕಾಂಪೌಂಡ್ ನಿರ್ಮಿಸಿಕೊಂಡಿದ್ದಾರೆ. ಪ್ರಶ್ನಿಸಿದವರ ವಿರುದ್ಧ ರೌಡಿಶೀಟರ್ ತೆರೆಸುತ್ತಾರೆ. ಇವರು ಹಾಗೂ ಇವರ ಅಣ್ಣ ಸಾಲಿಗ್ರಾಮ ಹಾಗೂ ಕೆ.ಆರ್.ನಗರ ತಾಲೂಕಿನಲ್ಲಿ ಹೆದರಿಕೆ ಹುಟ್ಟಿಸಿದ್ದಾರೆ. ಹೀಗಾಗಿ ಇವರ ವಿರುದ್ಧ ಯಾರೂ ಧ್ವನಿಯೆತ್ತುತ್ತಿಲ್ಲ ಎಂದು ದೂರಿದರು. ಗೋಷ್ಠಿಯಲ್ಲಿ ಮುಖಂಡರಾದ ಹೇಮಂತ್ ಕುಮಾರ್, ಎಸ್.ಡಿ.ಚಂದ್ರಶೇಖರ್, ಸಂತೋಷ್ ಉಪಸ್ಥಿತರಿದ್ದರು.

ಪುನೀತ್ ರಾಜಕುಮಾರ್ ಜನ್ಮದಿನಾಚರಣೆ



ಶ್ರೀರಾಮ ಗೆಳೆಯರ ಬಳಗದಿಂದ ಮಜ್ಜಿಗೆ ಮತ್ತು ಸಿಹಿಯನ್ನು ವಿತರಿಸುವ ಮೂಲಕ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ ಆಚರಿಸಲಾಯಿತು.

ಮೈಸೂರು,ಮಾ.17–ಕನ್ನಡ ಚಿತ್ರರಂಗದ ಧ್ರುವತಾರೆ, ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅವರ ಜನ್ಮದಿನೋತ್ಸವವನ್ನು ನಗರದ ಚಾಮುಂಡಿಪುರಂ ವೃತ್ತದಲ್ಲಿ ಶ್ರೀರಾಮ ಗೆಳೆಯರ ಬಳಗದಿಂದ ಮಜ್ಜಿಗೆ, ಸಿಹಿ ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಪುನೀತ್ ರಾಜಕುಮಾರ್ ಅವರು ಕೇವಲ ನಟರಾಗಿರಲಿಲ್ಲ. ಅವರು ಕೋಟ್ಯಂತರ ಕನ್ನಡಿಗರ ಪಾಲಿನ ಶಕ್ತಿಯಾಗಿದ್ದರು. ಅವರ ಸರಳತೆ ಮತ್ತು ಸಮಾಜಮುಖಿ ಚಿಂತನೆಗಳು ಇಂದಿನ ಯುವಪೀಳಿಗೆಗೆ ಮಾದರಿ ಎಂದು ಶ್ಲಾಘಿಸಿದರು.

ಶ್ರೀರಾಮ ಗೆಳೆಯರ ಬಳಗದ ಅಧ್ಯಕ್ಷ ಸಿ.ಸಂದೀಪ್ ಮಾತನಾಡಿ, ಪುನೀತ್ ರಾಜಕುಮಾರ್ ಮಾಡಿರುವ ಸೇವಾ ಕಾರ್ಯಗಳು ಪ್ರತಿಯೊಬ್ಬರಿಗೂ ಪ್ರೇರಣೆಯಾಗಿವೆ. ಅವರ ಜನ್ಮದಿನವನ್ನು ಕೇವಲ ಸಂಭ್ರಮಕ್ಕೆ ಸೀಮಿತಗೊಳಿಸದೆ, 'ಸ್ಫೂರ್ತಿ ದಿನ'ವಾಗಿ ಆಚರಿಸಲಾಗುತ್ತಿದೆ. ಜನಸಾಮಾನ್ಯರು ಅವರ ಹಾದಿಯಲ್ಲಿ ನಡೆದು ಆರೋಗ್ಯ ಶಿಬಿರ, ರಕ್ತದಾನ, ನೇತ್ರದಾನ, ಸಾಮೂಹಿಕ ವಿವಾಹ ಹಾಗೂ ಅನ್ನದಾಸೋಹದಂತಹ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಕೆ.ಆರ್.ಬ್ಯಾಂಕ್ ಬಸಪ್ಪ, ಅಪೂರ್ವ ಸುರೇಶ್, ರಾಜಣ್ಣ, ಜೋಗಿ ಮಂಜು, ವಿಕ್ರಂ, ಅಂಬಳೆ ಶಿವಣ್ಣ, ಬಸವರಾಜು ಪುರುಷೋತ್ತಮ್, ರಾಜೇಂದ್ರ ಪ್ರಭುಶಂಕರ್, ಗುರುಸ್ವಾಮಿ, ಪ್ರಕಾಶ್, ಮೋಹನ್, ಗೋಪಾಲ್‌ಅರಸ್, ನಾಗೇಂದ್ರ, ಚಂದ್ರಶೇಖರ್, ಭಾನುಕುಮಾರ್, ವಿನಯ್, ಪವನ್, ಧನುಷ್, ಚೇತನ್ ಮತ್ತಿತರರಿದ್ದರು.



ಮೈಸೂರು ಕನ್ನಡ ವೇದಿಕೆ ವತಿಯಿಂದ ಡಾ.ರಾಜಕುಮಾರ್ ಉದ್ಯಾನವನದಲ್ಲಿ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅವರ 51ನೇ ಹುಟ್ಟುಹಬ್ಬ ಆಚರಿಸಲಾಯಿತು. ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಅಪ್ಪು ಅಭಿಮಾನಿ ಸಂಘದ ಅಧ್ಯಕ್ಷ ಮಂಜುನಾಥ್, ರಾಜಕುಮಾರ್ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಎಲ್‌ಐಸಿ ಸಿದ್ದಪ್ಪ, ಹೊನಕೆರೆ ಸ್ವಾಮಿ, ಗೋವಿಂದ್‌ರಾಜ್, ನಾಗರಾಜು, ಸೋಮಣ್ಣ ಮತ್ತಿತರರು ಉಪಸ್ಥಿತರಿದ್ದರು.

ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಸಾಂಸ್ಕೃತಿಕ ಉತ್ಸವ, ನೃತ್ಯ ಪ್ರದರ್ಶನ



ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಯುಗಾದಿ ಮತ್ತು ರಂಜಾನ್ ಹಬ್ಬಗಳ ಸಾಂಸ್ಕೃತಿಕ ಉತ್ಸವಗಳು ಮತ್ತು ನೃತ್ಯ ಪ್ರದರ್ಶನ ಆಯೋಜಿಸಲಾಗಿತ್ತು.

ಮೈಸೂರು, ಮಾ. 17–ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಯುಗಾದಿ ಮತ್ತು ರಂಜಾನ್ ಹಬ್ಬಗಳ ಸಾಂಸ್ಕೃತಿಕ ಉತ್ಸವಗಳು ಮತ್ತು ನೃತ್ಯ ಪ್ರದರ್ಶನವನ್ನು ಮಾ. 19 ಮತ್ತು 21ರಂದು ಆಯೋಜಿಸುತ್ತಿದೆ. ಇದು ಯುಗಾದಿ ಮತ್ತು ರಂಜಾನ್ ಸಂದರ್ಭಗಳನ್ನು ಸಂದರ್ಶಕರಿಗೆ ವಿಶಿಷ್ಟ ಅನುಭವಗಳೊಂದಿಗೆ ಗುರುತಿಸುತ್ತದೆ.

ಮಾರ್ಚ್ 19ರಂದು ನಡೆಯುವ ಯುಗಾದಿ ಆಚರಣೆಯು ಕರ್ನಾಟಕದ ಪ್ರಾದೇಶಿಕ ಸಂಪ್ರದಾಯಗಳ ಮೇಲೆ ಕೇಂದ್ರೀಕರಿಸುತ್ತದೆ. ಯಕ್ಷಗಾನ, ಭರತನಾಟ್ಯ, ಕೋಲ್ಕತ್ತಾದಂತಹ ಶಾಸ್ತ್ರೀಯ ಮತ್ತು ಜಾನಪದ ಪ್ರದರ್ಶನಗಳ ಕ್ಯುರೇಟೆಡ್ ಶ್ರೇಣಿಯನ್ನು ಒಳಗೊಂಡಿದೆ. ಮಾಲ್ ಅನ್ನು ಹಬ್ಬದ ಅಲಂಕಾರದಿಂದ ಅಲಂಕರಿಸಲಾಗುವುದು, ಹೊಸ ವರ್ಷದ ಸಾರವನ್ನು ಪ್ರತಿಬಿಂಬಿಸುವ ಅಧಿಕೃತ ಸಾಂಸ್ಕೃತಿಕ ವಾತಾವರಣವನ್ನು ಸೃಷ್ಟಿಸುತ್ತದೆ.

ಮಾರ್ಚ್ 21ರಂದು, ಸ್ಪಾಟ್‌ಲೈಟ್ ರಂಜಾನ್–ವಿಷಯದ ಪ್ರದರ್ಶನಗಳಿಗೆ ಬದಲಾಗುತ್ತದೆ. ಮುಸ್ಲಿಂ ಸಂಸ್ಕೃತಿಯಿಂದ ಪ್ರೇರಿತವಾದ ಕಲಾತ್ಮಕ ಅಭಿವ್ಯಕ್ತಿಗಳ ವೈವಿಧ್ಯಮಯ ಮಿಶ್ರಣವನ್ನು ಪ್ರಸ್ತುತಪಡಿಸುತ್ತದೆ. ಸೂಫಿ ನೃತ್ಯ, ಕಥಕ್, ಅರೇಬಿಕ್ ಸ್ಟಿಕ್ ನೃತ್ಯ ಮತ್ತು ಸಮ್ಮಿಳನ ಕ್ರಿಯೆಗಳು ಸೇರಿದಂತೆ ಪ್ರದರ್ಶನಗಳನ್ನು ಸಂದರ್ಶಕರು ಅನುಭವಿಸಬಹುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಜಾನ್ಸನ್ ಪೌಲ್ ನಿಧನ



ಮೈಸೂರು, ಮಾ.17– ನಗರದ ವಿದ್ಯಾರಣ್ಯಪುರಂ ನಿವಾಸಿ ಜಾನ್ಸನ್ ಪೌಲ್(60) ಮಂಗಳವಾರ ಸಂಜೆ ನಿಧನರಾದರು.

ಇವರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬುಧವಾರ(ಮಾ.18) ಮಧ್ಯಾಹ್ನ 3ಕ್ಕೆ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಳ ಮೀಸಲಾತಿ ವಿವಾದ ಹಿನ್ನೆಲೆ: ನ್ಯಾ.ನಾಗಮೋಹನ್‌ದಾಸ್ ಆಯೋಗದ ವರದಿ ತಿರಸ್ಕಾರಕ್ಕೆ ಆಗ್ರಹಿಸಿ

ಮಾ.23ಕ್ಕೆ ಮೈಸೂರಲ್ಲಿ; ಮಾ.25ಕ್ಕೆ ಬೆಂಗಳೂರಲ್ಲಿ ಪ್ರತಿಭಟನೆ

ಮೈಸೂರು,ಮಾ.17(ಎಂಟಿವೈ)– ಒಳ ಮೀಸಲಾತಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್ ದಾಸ್ ಆಯೋಗ ನೀಡಿರುವ ಅವೈಜ್ಞಾನಿಕ ವರದಿಯನ್ನು ತಿರಸ್ಕರಿಸುವಂತೆ ಒತ್ತಾಯಿಸಿ ಮಾ.23ರಂದು ಮೈಸೂರು ಹಾಗೂ ಮಾ.25ರಂದು ಬೆಂಗಳೂರಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮುಖಂಡ ನಾಗವಾಲ ನರೇಂದ್ರ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಮಹಾ ಒಕ್ಕೂಟದ ವತಿಯಿಂದ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಈ ಹಿಂದಿನಿಂದಲೂ ಹೊಲೆಯ ಮತ್ತು ಮಾದಿಗರು ಸಹೋದರರೆಂದು ಭಾವಿಸಿದ್ದೆವು. ಒಳ ಮೀಸಲಾತಿ ಹಂಚಿಕೆ ಮುನ್ನೆಲೆಗೆ ಬಂದ ಮೇಲೆ ಅದು ಸುಳ್ಳೆಂಬುದು ಸಾಬೀತಾಗಿದೆ. ಸಮೀಕ್ಷೆಯಲ್ಲಿ ಹೊಲೆಯ ಜನಾಂಗದವರು ಸರಿಯಾಗಿ ಪಾಲ್ಗೊಳ್ಳದೇ ವ್ಯತ್ಯಾಸವಾಗಿದೆ. ಪ್ರಾದೇಶಿಕವಾರು ಭಿನ್ನ ಭಿನ್ನವಾಗಿ ಜಾತಿಯನ್ನು ನಮೂದಿಸಲಾಗಿದ್ದು, ಇದರಿಂದ ಸಂಖ್ಯೆಯಲ್ಲಿ ಗೊಂದಲ ಉಂಟಾಗಿ, ಸಮಸ್ಯೆ ಉಲ್ಬಣಿಸಿದೆ ಎಂದರು.

ಇದೇ ವೇಳೆ ಅತಿಥಿ ಉಪನ್ಯಾಸಕ ಡಾ.ಪ್ರತಾಪ್, ಒಳ ಮೀಸಲಾತಿಯನ್ನು ಪೂರ್ಣ ತಿರಸ್ಕರಿಸಬೇಕೆ ಅಥವಾ ವೈಜ್ಞಾನಿಕವಾಗಿ ಸರಿಪಡಿಸಿಕೊಂಡು ಮುಂದುವರಿಯಬೇಕೆ ಎಂದು ನಾಯಕರು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನರೇಂದ್ರ ಅವರು, ನಮ್ಮ ಮಕ್ಕಳ ಭವಿಷ್ಯಕ್ಕೆ ಕಂಟಕವಾಗಿರುವ ಒಳ ಮೀಸಲಾತಿಯನ್ನು ತಿರಸ್ಕರಿಸಬೇಕು ಎನ್ನುವುದು ನಮ್ಮ ಆಗ್ರಹ ಎಂದರು.

ಮಾಜಿ ಗ್ರಾಪಂ ಮಾಜಿ ಅಧ್ಯಕ್ಷ ಬೋಗಾದಿ ನಾಗರಾಜ್ ಮಾತನಾಡಿ, ಒಳಮೀಸಲಾತಿ ಕುರಿತಂತೆ ಯುದ್ಧಕ್ಕೆ ಕರೆಯುವ, ರಕ್ತಪಾತದ ಹೇಳಿಕೆ ನೀಡುತ್ತಿದ್ದರೂ ನಾವು ಸುಮ್ಮನಿರಬೇಕೆ? ಸಚಿವ ಮಹದೇವಪ್ಪ ಅವರಿಗೆ ಹೊಡೆಯಲು ಮುಂದಾಗಿದ್ದವರು, ಕೆ.ಹೆಚ್.ಮುನಿಯಪ್ಪ ಅವರಿಗೆ ಏನೂ ಮಾಡಲಿಲ್ಲ. ಒಳ ಮೀಸಲಾತಿ ರಾಜಕಾರಣದ ಕುತಂತ್ರ. ಅದನ್ನು ವಿರೋಧಿಸಬೇಕು. ಪ್ರತಿಭಟನೆಯಲ್ಲಿ ಕನಿಷ್ಠ 6 ಲಕ್ಷ ಜನರು ಸೇರಬೇಕು ಎಂದು ಹೇಳಿದರು.

ಪ್ರತಿಭಟನೆಯನ್ನು ಯಶಸ್ವಿಗೊಳಿಸಲು ಮೈಸೂರು ಜಿಲ್ಲಾ ಸಮಿತಿ ರಚಿಸಬೇಕು. ತಾಲೂಕಿಗೆ ಒಬ್ಬರು ಸಂಚಾಲಕರನ್ನು ನಿಯೋಜಿಸಬೇಕು. ಸಾವಿರಕ್ಕೂ ಹೆಚ್ಚು ಗ್ರಾಮಗಳಿದ್ದು, ಮೈಸೂರು ಭಾಗದಲ್ಲಿ ಹೆಚ್ಚಿನ ಜನರು ತೆರಳಬೇಕು ಎಂದು ಮುಖಂಡರು ಮನವಿ ಮಾಡಿದರು. ಸಭೆಯಲ್ಲಿ ಮಾಜಿ ಶಾಸಕ ನಂಜುಂಡಸ್ವಾಮಿ, ಬಿಳಿಗೆರೆ ರಾಜಣ್ಣ, ರಮೇಶ್, ಮೂರ್ತಿ, ಭುಗತಹಳ್ಳಿ ಮಣಿಯಯ್ಯ, ಜಿಪಂ ಮಾಜಿ ಸದಸ್ಯ ಚನ್ನಪ್ಪ ಸೋಮಶೇಖರ್, ಜವರಪ್ಪ ದಸಂಸ ಸಂಚಾಲಕ ಚೋರನಹಳ್ಳಿ ಶಿವಣ್ಣ, ಬೆಳವಾಡಿ ಶಿವಕುಮಾರ್, ಡಾ.ಮೂರ್ತಿ ಕಲ್ಲಹಳ್ಳಿ, ಕಲ್ಲಹಳ್ಳಿ ಕುಮಾರ್ ಇನ್ನಿತರರಿದ್ದರು.



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಒಳಮೀಸಲಾತಿ ಕುರಿತು ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ಆಯೋಗ ನೀಡಿರುವ ಅವೈಜ್ಞಾನಿಕ ವರದಿಯನ್ನು ತಿರಸ್ಕರಿಸುವಂತೆ ಆಗ್ರಹಿಸಿ ಮುಖಂಡರು ಸಭೆ ನಡೆಸಿದರು.

ಮಹಿಳೆಯರಿಗಾಗಿ ವಿವಿಧ ಸ್ಪರ್ಧೆಗಳ ಆಯೋಜನೆ

ಮೈಸೂರು,ಮಾ.17–ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ಮಹಿಳೆಯರಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿದೆ.

ರಾಮಕೃಷ್ಣನಗರದ ಸಿದ್ಧಿ ವಿನಾಯಕ ದೇವಸ್ಥಾನದ ಆವರಣದಲ್ಲಿ ಮಾ.31ರಂದು ಸ್ಪರ್ಧೆಗಳು ನಡೆಯಲಿದ್ದು, ಭಾಗವಹಿಸಲು ಆಸಕ್ತರು ಮಾ.28ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಅಂದು ಬೆಳಗ್ಗೆ 10.30ರಿಂದ ಜನಪದ ಗೀತ ಗಾಯನ ಸ್ಪರ್ಧೆ (ಸಮೂಹ ಗಾಯನಕ್ಕೆ ಮಾತ್ರ ಅವಕಾಶ) ಕನಿಷ್ಠ 4 ಮಹಿಳೆಯರು ಗರಿಷ್ಠ 8 ಮಹಿಳೆಯರ ತಂಡ ಕನ್ನಡ ಜನಪದಗೀತೆಗಳನ್ನು ಹಾಡಬಹುದು. ದೇಸೀ ಪಾನೀಯ ಸ್ಪರ್ಧೆ (ವಿವಿಧ ಹಣ್ಣುಗಳು, ತರಕಾರಿ, ಸೊಪ್ಪುಗಳನ್ನು ಬಳಸಿ ಮನೆಯಲ್ಲೇ ಪಾನೀಯ ತಯಾರಿಸಿ ನಿಗದಿಪಡಿಸಿದ ಸ್ಥಳದಲ್ಲಿ ಸ್ಪರ್ಧೆಗಾಗಿ ಪ್ರದರ್ಶಿಸಬಹುದು) ಸಖಿಗೊಂದು ಸ್ಯಾರಿ(ಸೀರೆಯ ನಿಖರ ಬೆಲೆ ಹೇಳಿದವರಿಗೆ ಅದೇ ಸೀರೆಯನ್ನು ಬಹುಮಾನವಾಗಿ ನೀಡಲಾಗುವುದು) 'ಥಟ್ ಅಂತ ಹಾಡಿ' ಕನ್ನಡ ಸಿನಿಮಾ ಹಾಡುಗಳ ಪಲ್ಲವಿ ಗುರುತಿಸುವ ಸ್ಪರ್ಧೆ ನಡೆಯಲಿವೆ. ಮಾಹಿತಿ, ನೋಂದಣಿಗಾಗಿ 9964790442, 8310306882 ಸಂಪರ್ಕಿಸಬಹುದು.

ಶೂ ವರ್ಲ್ಡ್‌ನಲ್ಲಿ ರಿಯಾಯಿತಿ ಮಾರಾಟ ಮೇಳ



ಮೈಸೂರು, ಮಾ.17–ಯುಗಾದಿ ಮತ್ತು ರಂಜಾನ್ ಹಬ್ಬದ ಪ್ರಯುಕ್ತ ಮೈಸೂರಿನ ಶೂ ವರ್ಲ್ಡ್‌ನಲ್ಲಿ ವಿಶೇಷ ರಿಯಾಯಿತಿ ಮಾರಾಟವನ್ನು ಮೈಸೂರಿನ ರಾಮಸ್ವಾಮಿ ವೃತ್ತದ ಬಳಿಯಿರುವ ಪ್ರೆಸ್ಟೀಜ್ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿರುವ ಮಳಿಗೆಯಲ್ಲಿ ಇಂದಿನಿಂದ ಏ.6 ರವರೆಗೆ ಆಯೋಜಿಸಲಾಗಿದೆ. ಮೇಳದಲ್ಲಿ ಮಹಿಳೆಯರು, ಪುರುಷರು ಮತ್ತು ಮಕ್ಕಳಿಗೆ ಬೇಕಾದ ಗುಣಮಟ್ಟದ ಪಾದರಕ್ಷೆಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುವುದು ಹೆಚ್ಚಿನ ಮಾಹಿತಿಗೆ ದೂರವಾಣಿ: 0821–2424252 ಮೂಲಕ ಸಂಪರ್ಕಿಸಲು ಶೂ ವರ್ಲ್ಡ್‌ನ ವ್ಯವಸ್ಥಾಪಕರು ಪತ್ರಿಕಾ ಪ್ರಕಟಣೆಯಲ್ಲಿ ಕೋರಿದ್ದಾರೆ.

ಉಚಿತ ರಂಗ ತರಬೇತಿ ಶಿಬಿರ

ಮೈಸೂರು,ಮಾ.17–ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಮೈಸೂರಿನ ನಜರ್‌ಬಾದ್‌ನಲ್ಲಿರುವ ನಾಟ್ಯ ಪ್ರದರ್ಶಕ ಕಲೆಗಳ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಉಚಿತ ರಂಗ ತರಬೇತಿ ಶಿಬಿರವನ್ನು ಇಂದಿನಿಂದ ಮಾ.31 ರವರೆಗೆ ಸಂಸ್ಥೆಯ ಕಿಂದರ ಜೋಗಿ ಆವರಣದಲ್ಲಿ ಪ್ರತಿನಿತ್ಯ ಸಂಜೆ 4ರಿಂದ 6.30ರವರೆಗೆ ಆಯೋಜಿಸಲಾಗಿದೆ ಎಂದು ನಾಟ್ಯ ಸಂಸ್ಥೆಯ ಕಾರ್ಯದರ್ಶಿ ಸಂತೋಷ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಡುಗೆ ಅನಿಲ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಇಲ್ಲ

- ಎಲ್‌ಪಿಜಿ ವಿತರಕರ ಸಂಘದ ರಾಜ್ಯ ಅಧ್ಯಕ್ಷ ಮೇಹುಲ್ ಪಟೇಲ್ ಸ್ಪಷ್ಟನೆ
- ಪ್ರಮುಖ ಅಡುಗೆ ಅನಿಲ ಸರಬರಾಜು ಕಂಪನಿಗಳ ಬುಕಿಂಗ್ ವಾಟ್ಸಾಪ್ ನಂಬರ್ ಬದಲು



ಮೆಹುಲ್ ಪಟೇಲ್

ಮೈಸೂರು, ಮಾ.17(ಜಿಎ)–ಇರಾನ್–ಇಸ್ರೇಲ್ ಯುದ್ಧದ ಕಾರಣ ವಾಣಿಜ್ಯ ಸಿಲಿಂಡರ್ ಸರಬರಾಜಿನಲ್ಲಿ ವ್ಯತ್ಯಯವುಂಟಾಗಿದೆ. ಆದರೆ ಗೃಹ ಬಳಕೆದಾರರಿಗೆ ಯಾವುದೇ ಸಮಸ್ಯೆ ಯಾಗದಂತೆ ನೋಡಿ ಕೊಳ್ಳಲಾಗಿದೆ. ಇದೇ ವೇಳೆ ಮೂರೂ ಪ್ರಮುಖ ಅಡುಗೆ ಅನಿಲ ಸರಬರಾಜು ಕಂಪನಿಗಳ ಬುಕಿಂಗ್, ವಾಟ್ಸಪ್ ಸಂಖ್ಯೆ ಬದಲಾಗಿದ್ದು, ಮೊದಲಿಗಿಂತ ಈಗ ಸೇವೆ ಸಮರ್ಪಕವಾಗಿ ದೊರೆಯುತ್ತಿದೆ ಎಂದು ಎಲ್‌ಪಿಜಿ ವಿತರಕರ ಸಂಘದ ರಾಜ್ಯ ಅಧ್ಯಕ್ಷ ಮೆಹುಲ್ ಪಟೇಲ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಣಿಜ್ಯ ಸಿಲಿಂಡರ್ ಪೂರೈಕೆಗೆ ಅಡ್ಡಿಯೂ ಎದುರಾಗಿರಬಹುದಾದರೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಂಡಿವೆ. ಅಡುಗೆ ಅನಿಲ ಹೊತ್ತ ಮೂರು ಹಡಗುಗಳು ಈಗಾಗಲೇ ದೇಶದ ಬಂದರು ತಲುಪಿವೆ. ಸಂಸ್ಕರಿಸಿ ಸರಬರಾಜು ಮಾಡಲು 2–3 ದಿನ ಬೇಕಾಗುತ್ತದೆ. ಹೀಗಾಗಿ ಸಮಸ್ಯೆ ಶೀಘ್ರದಲ್ಲೇ ಬಗೆಹರಿಯಲಿದೆ. ಇದೇ ವೇಳೆ ಗೃಹ ಬಳಕೆದಾರರು ಒಂದು ಸಿಲಿಂಡರ್‌ನವರಾಗಿದ್ದರೆ 25 ದಿನ ಅಂತರದಲ್ಲಿ, ಎರಡು ಸಿಲಿಂಡರ್ ನವರಾಗಿದ್ದರೆ 30 ದಿನ ಅಂತರದಲ್ಲಿ ಬುಕ್ ಮಾಡಬೇಕು. ಗ್ರಾಮೀಣ ಪ್ರದೇಶದಲ್ಲಿ ಈ ಅವಧಿ 40 ದಿನಗಳಾಗಿವೆ. ಅಂಗನವಾಡಿ, ಕೈಗಾರಿಕೆಗಳು ಮೊದಲಾದ ಆದ್ಯತಾ ವಲಯಗಳಿಗೆ ಈಗ ಸಿಲಿಂಡರ್ ಪೂರೈಕೆ ಯಾವುದೇ ವ್ಯತ್ಯಯವಿಲ್ಲದೇ ನಡೆದಿದೆ. ಆದರೆ ಹೋಟೆಲ್, ಮೊದಲಾದವುಗಳಿಗೆ ಶೀಘ್ರದಲ್ಲೇ ಸಮರ್ಪಕವಾಗಿ ಪೂರೈಕೆ ಆಗಲಿದೆ ಎಂದರು.

ಓಟಿಪಿ ಕಡ್ಡಾಯ: ಅಕ್ರಮವಾಗಿ ಕಾಳಸಂತೆಯಲ್ಲಿ ಸಿಲಿಂಡರ್‌ಗಳ ಮಾರಾಟ ತಪ್ಪಿಸಲು ಓಟಿಪಿಯನ್ನು ಕಡ್ಡಾಯಗೊಳಿಸಲಾಗಿದೆ. ಪ್ರತಿ ಗ್ರಾಹಕರು ತಾವು ನೊಂದಣಿ ಮಾಡಿಕೊಂಡಿರುವ ಮೊಬೈಲ್ ನಂಬರ್‌ಗೆ ಬರುವ 4 ಅಂಕಿಯ ಓಟಿಪಿ ನೀಡಿ ಸಹಕರಿಸಿ ಎಂದರು. ಮಾಜಿ ಶಾಸಕ, ಚಾಮರಾಜನಗರ ಭಾಗದ ವಿತರಕರಾದ ನಂಜುಂಡಸ್ವಾಮಿ, ಕಸ್ತೂರಿ ರಂಗ ಇದ್ದರು.

ಬುಕ್ಕಿಂಗ್ ನಂಬರ್

ಭಾರತ್ ಗ್ಯಾಸ್ ವಾಟ್ಸಪ್ ಸಂಖ್ಯೆ 1800224344, ಐವಿಆರ್‌ಎಸ್ 7715012345, ಇಂಡಿಯನ್ ಗ್ಯಾಸ್ ವಾಟ್ಸಪ್ ಸಂಖ್ಯೆ 75888 88824, ಐವಿಆರ್‌ಎಸ್ 77189 55555, ಎಚ್‌ಪಿ ಗ್ಯಾಸ್‌ಗೆ ವಾಟ್ಸಪ್ ಸಂಖ್ಯೆ 92222 01122, ಐವಿಆರ್‌ಎಸ್ 88888 23456ಕ್ಕೆ ಬದಲಾಗಿದೆ. ಆಯಾ ಸಂಸ್ಥೆಗಳ ಆ್ಯಪ್ ಮೂಲಕವೂ ಬುಕ್ಕಿಂಗ್ ಮಾಡಬಹುದು. **–ಮೇಹುಲ್ ಪಟೇಲ್**

ಮೈಸೂರು ರಾಮಕೃಷ್ಣ ಆಶ್ರಮಕ್ಕೆ ನಾರೇಯಣ ಪ್ರಶಸ್ತಿ

ಮೈಸೂರು, ಮಾ.17–ಮೈಸೂರಿನ ಶ್ರೀ ಯೋಗಿ ನಾರೇಯಣ ಯತೀಂದ್ರರ ಪ್ರಚಾರ ಸಭಾ ವತಿಯಿಂದ ಆಧ್ಯಾತ್ಮಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿನ ಕೊಡುಗೆ ಪರಿಗಣಿಸಿ ನೀಡುವ 2026ನೇ ಸಾಲಿನ 'ನಾರೇಯಣ ಪ್ರಶಸ್ತಿ' ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮಕ್ಕೆ ಲಭಿಸಿದೆ. ಮಾ.22ರಂದು ಚಾಮರಾಜ ನಗರದಲ್ಲಿರುವ ವರನಟ ಡಾ.ರಾಜಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದ ಜೀ ಮಹರಾಜ್ ನಾರೇಯಣ ಪ್ರಶಸ್ತಿ ಸ್ವೀಕರಿಸಲಿದ್ದಾರೆ. ಸಮಾರಂಭದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೈವಾರ ಶ್ರೀಕ್ಷೇತ್ರದ ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್, ವಿಧಾನಪರಿಷತ್ ಸದಸ್ಯ ಡಾ.ಎಂ.ಆರ್.ಸೀತಾ ರಾಮ್, ಚಾ.ನಗರ ವಿವಿ ಕುಲಪತಿ ಡಾ.ಎಂ.ಆರ್.ಗಂಗಾಧರ್, ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜ್, ಲೇಖಕಿ ಡಾ.ಎಂ.ಎನ್. ಕವಿತಾ ಭಾಗವಹಿಸಲಿದ್ದಾರೆ ಎಂದು ಶ್ರೀ ಯೋಗಿ ನಾರೇಯಣ ಯತೀಂದ್ರರ ಪ್ರಚಾರ ಸಭಾದ ಪ್ರಧಾನ ಸಂಚಾಲಕ ಎಚ್.ಎ.ವೆಂಕಟೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಮಾ.17–ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್ ವತಿಯಿಂದ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಮಾ.19ರಂದು ಬೆಳಗ್ಗೆ 10 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಹಮ್ಮಿಕೊಳ್ಳಲಾಗಿದೆ. ಒಂದು ತಿಂಗಳಿಗೂ ಮೇಲ್ಪಟ್ಟ ವಾಸಿಯಾಗದ ಗಾಯ, ರಕ್ತಸ್ರಾವ, ಊತ, ಗಡಸುತನ, ಗಂಟಲಲ್ಲಿ ನುಂಗುವಾಗ ತೊಂದರೆ, ಉರಿ, ಧ್ವನಿ ಬದಲಾವಣೆ ಸಮಸ್ಯೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು. ತಪಾಸಣೆ ವೇಳೆ ಕ್ಯಾನ್ಸರ್ ಪತ್ತೆಯಾದ ರೋಗಿಗಳಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಮಾಹಿತಿಗೆ ದೂರವಾಣಿ ಸಂಖ್ಯೆ: 0821–4259259 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.3.2026 ಬುಧವಾರ, ಮಳೆ ನಕ್ಷತ್ರ: ಉತ್ತರಭಾದ್ರ 18.03.2026 ರಿಂದ 30.03.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಪೂರ್ವಭಾದ್ರ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಕಿಡ್ನಿ ಆರೋಗ್ಯ ತಪಾಸಣೆ ಮತ್ತು ವಸಂತ ವಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಪಾರ್ಕಿನ್‌ಸನ್ಸ್ ಕಾಯಿಲೆ, ಪಿಸಿಓಡಿ, ಫೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ತಪಾಸಣಾ ಮತ್ತು ಸಲಹಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಸುಯೋಗ್ ಆಸ್ಪತ್ರೆ :** ಉಚಿತ ಸಕ್ಕರೆ ಕಾಯಿಲೆ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 9.30 ರಿಂದ.
- **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ (ರಾಷ್ಟ್ರೀಯ ಸೇವಾ ಯೋಜನೆ) :** ರಾಷ್ಟ್ರೀಯ ಭಾವೈಕ್ಯತಾ ಶಿಬಿರದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಡಾ. ಪ್ರತಾಪ್ ಲಿಂಗಯ್ಯ, ಸಮಾರೋಪ ಭಾಷಣ : ಪ್ರಾದೇಶಿಕ ನಿರ್ದೇಶಕ ಡಾ. ಗಿರಿಧರ್ ಉಪಾಧ್ಯಾಯ, ಅಧ್ಯಕ್ಷತೆ : ಜೆಎಸ್‌ಎಸ್ ಎಹೆಚ್‌ಇಆರ್ ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಮುಖ್ಯ ಅತಿಥಿಗಳು : ಕುಲಸಚಿವ ಡಾ. ಬಿ. ಮಂಜುನಾಥ, ಜೆಎಸ್‌ಎಸ್ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಟಿ.ಎಂ. ಪ್ರಮೋದ್‌ಕುಮಾರ್, ಸ್ಥಳ: ಶ್ರೀ ರಾಜೇಂದ್ರ ಆಡಿಟೋರಿಯಂ, ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿ, ಬೆಳಗ್ಗೆ 10.30 ರಿಂದ
- **ಶ್ರೀ ನಟರಾಜ ಪ್ರತಿಷ್ಠಾನ :** ಅಲ್ಲಮಪ್ರಭು ಜಯಂತಿ ಮತ್ತು ಅಲ್ಲಮಪ್ರಭು ಚಿತ್ರ ಕಥಾ ಮಾಲಿಕೆ ಇಂಗ್ಲಿಷ್ ಪುಸ್ತಕ ಲೋಕಾರ್ಪಣೆ ಹಾಗೂ ಆಸ್ಥಾನ ವಿದ್ವಾನ್ ಶ್ರೀಬಸವಲಿಂಗಸ್ವಾಮಿಗಳವರ 75ನೇ ವರ್ಷದ ಪುಣ್ಯಾರಾಧನಾ ಮಹೋತ್ಸವ, ಸಾನ್ನಿಧ್ಯ : ಶ್ರೀ ಹೊಸಮಠದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಅಧ್ಯಕ್ಷತೆ: ಎಂ.ಎಲ್. ಹುಂಡಿ ಪೀಠಾಧ್ಯಕ್ಷ ಶ್ರೀ ಗೌರಿಶಂಕರ ಸ್ವಾಮೀಜಿ, ಆಶೀರ್ವಚನ: ಶ್ರೀ ಕುದೇರು ಮಠಾಧ್ಯಕ್ಷ ಶ್ರೀ ಗುರುಶಾಂತ ಸ್ವಾಮೀಜಿ, ಮುಡುಕುತೊರೆ ಶ್ರೀ ಕಲ್ಮಠದ ಶ್ರೀ ನಂದಿಕೇಶ್ವರ ಸ್ವಾಮೀಜಿ, ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪುಸ್ತಕ ಲೋಕಾರ್ಪಣೆ : ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ. ಎನ್.ಎಂ. ತಳವಾರ, ಉಪಸ್ಥಿತರು : ವಿಶ್ರಾಂತ ಪ್ರಿನ್ಸಿಪಾಲ್ ಪ್ರೊ. ಚಂದ್ರಶೇಖರಯ್ಯ, ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಹಿರಿಯ ಕಲಾವಿದ ಎಲ್. ಶಿವಲಿಂಗಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ.
- **ಮೈಸೂರು ವಿವಿ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ :** ಸುಸ್ಥಿರ ಅಭಿವೃದ್ಧಿ ಗುರಿಗಳು ಕುರಿತು ವಿಚಾರ ಸಂಕಿರಣ, ಪ್ರಧಾನ ಭಾಷಣ : ಪ್ರೊ. ರವಿ ಭಂಡಾರಿ, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಉಪಸ್ಥಿತರು : ಪ್ರೊ. ನವಿತಾ ತಿಮ್ಮಯ್ಯ, ಡಾ. ಎಂ.ವಿ. ದಿನೇಶ, ಡಾ. ಎಂ. ಮಹೇಶ, ಸ್ಥಳ: ಮಾನವಿಕ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಅಂಚೆ ದನಿ ಪಾರಿವಾಳದಿಂದ ಡ್ರೋನ್‌ವರೆಗೆ ಅಂಚೆ ಪಯಣ – ಬಾನುಲಿ ಸರಣಿ, ಪ್ರಸ್ತುತಿ–ಡಾ. ಅಮ್ಮಸಂದ್ರ ಸುರೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಹಂಸಿನಿ ಎಸ್. ಕುಮಾರ್, ಎಂ.ಎ. ಶೋಭಾ ಹಾಗೂ ದೀಪಿಕಾ ಪಾಂಡುರಂಗಿ, ವ್ಯಾಖ್ಯಾನ –ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ ಲಿಡ್ಕರ್ ನಂಬಿಕೆ ನಿರಂತರ, ಪ್ರಾಯೋಜಕರು–ಡಾ. ಬಾಬು ಜಗಜೀವನ್ ರಾಮ್ ಚರ್ಮೋದ್ಯಮಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, 7.45 ಕನ್ನಡ ಚಿತ್ರಗೀತೆಗಳು, 8.30 ಆಯುಷ್ ವಾಣಿ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಅಯುಷ್ ಇಲಾಖೆ, ಕರ್ನಾಟಕ ಸರ್ಕಾರ, 8.35 ಸೌರ ಶಕ್ತಿ ಬಳಸೋಣ ಮನೆ ಮನೆಗು ಸೌರ ವಿದ್ಯುತ್ ಉಪಯೋಗಿಸೋಣ, ಪ್ರಾಯೋಜಕರು– BESCOM, ಬೆಂಗಳೂರು, 8.35 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಪಂಡಿತ್ ಹರಿಪ್ರಸಾದ್ ಚೌರಾಸಿಯ – ಕೊಳಲುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಹೆಚ್. ಟಿ. ಹರೀಶ್–ಸ್ಯಾಕ್ಸೂಫೋನ್ ವಾದನ, 4.00 ಮಹಿಳಾರಂಗ–ಮೈಸೂರಿನ ನಿವೇದಿತಾ ನಗರದ ಚಿತ್ಕಾಲ ಮಹಿಳಾ ಸಂಘದ ಸದಸ್ಯರಿಂದ ಯುಗಾದಿ ಕುರಿತ ವಿಶೇಷ ಕಾರ್ಯಕ್ರಮ ವೈವಿಧ್ಯ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ– ಸಂಧ್ಯಾಜವಳಿ, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು–ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್, ವಿಷಯ–ಮಣ್ಣಿನ ಬಲವರ್ಧನೆ ಹಾಗೂ ಸ್ಥಿರೀಕರಣ, ಭಾಗವಹಿಸುತ್ತಾರೆ– ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಡಾ. ಎಸ್.ಕೆ.ಪ್ರಸಾದ್ ಮತ್ತು ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಎನ್. ಎಂ. ಜಗದೀಶ್, ಪ್ರಸ್ತುತಿ–ಎನ್.ಕೇಶವಮೂರ್ತಿ, 5.30 ಚಿತ್ರಗೀತೆಗಳು, 6.50 ಕೃಷಿರಂಗ, ಹವಾಮಾನ ಮಿತ್ರ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, ಸಂಶೋಧನಾ ಸಾರ–ಕೃಷಿ ಕ್ಷೇತ್ರದ ಹೊಸ ಆವಿಷ್ಕಾರ, ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಚಿತ್ರಗೀತೆಗಳು, 8.00 ಕರ್ನಾಟಕ ಶಾಸ್ತ್ರೀಯ ಸಂಗೀತ,ಆರ್. ಗಣೇಶ್ ಮತ್ತು ಆರ್. ಕುಮರೇಶ್–ಯುಗಳ ವೈಯೋಲಿನ್ ವಾದನ, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

- **ಪಿಜಿ ವಾಣಿಜ್ಯಶಾಸ್ತ್ರ ಸ್ನಾತಕೋತ್ತರ ವಿಭಾಗ, ಆಲ್ ಇಂಡಿಯಾ ವುಮೆನ್ಸ್ ಕಾನ್ಫರೆನ್ಸ್, ಮೈಸೂರು ಶಾಖೆ :** ಕ್ಯಾನ್ಸರ್ ಬಗ್ಗೆ ಜಾಗೃತಿ ಮತ್ತು ತಡೆಗಟ್ಟುವಿಕೆ ಕಾರ್ಯಕ್ರಮ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಪ್ರೊ. ಎನ್. ಭಾರತಿ, ಮುಖ್ಯ ಅತಿಥಿಗಳು : ಡಾ. ಡಿ.ಆರ್. ರಮ್ಯಾ, ಉದ್ಘಾಟನೆ : ಶ್ರೀಮತಿ ಎಸ್. ಆಶಿತಾ, ಉಪಸ್ಥಿತರು : ಕಾನ್ಫರೆನ್ಸ್ ಉಪಾಧ್ಯಕ್ಷೆ ಸಿ. ಕಮಲಮ್ಮ, ಪ್ರೊ. ಮಹಾದೇವಿ, ಡಾ. ಕೆ.ಕೆ. ದೇವಕಿ, ಸ್ಥಳ: ಕಾಲೇಜು ಸಭಾಂಗಣ, ಮಧ್ಯಾಹ್ನ 2 ರಿಂದ.
- **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ :** ಕಲಾ ಸಪ್ತಮಿ ವಾರದ ಸಾಂಸ್ಕೃತಿಕ ಕಾರ್ಯಕ್ರಮ, ವಿದ್ವಾನ್ ಮಾನಸ ನಯನ ಮತ್ತು ವಿದ್ವಾನ್ ವೀರಭದ್ರಯ್ಯ ಹಿರೇಮಠ್ ಅವರಿಂದ ಕರ್ನಾಟಕ ಮತ್ತು ಹಿಂದೂಸ್ಥಾನಿ ಜುಗಲ್‌ಬಂದಿ ಕಾರ್ಯಕ್ರಮ, ವಿದ್ವಾನ್ ಸಿ.ವಿ. ಶೃತಿ–ವಯೋಲಿನ್, ವಿದ್ವಾನ್ ಎ. ರಾಧೇಶ್ – ಮೃದಂಗ, ವಿದ್ವಾನ್ ರಮೇಶ್ ಧನ್ನೂರ್–ತಬಲ, ವಿದ್ವಾನ್ ಹರಿಕೃಷ್ಣ ಪುರೋಹಿತ್–ಹಾರ್ಮೋನಿಯಂ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ, ಸಂಜೆ 6 ರಿಂದ.
- **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ :** ದೇಸಿರಂಗ ನಾಟಕೋತ್ಸವದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ವಕೀಲ ಬಾಬುರಾಜ್ ಪಲ್ಲದನ್, ಮುಖ್ಯ ಅತಿಥಿಗಳು : ಚಿಂತಕ ನಾ. ದಿವಾಕರ್, ಮಧುರಾಣಿ, ಕೃಷ್ಣ ಜನಮನ, ಸಭಾ ಕಾರ್ಯಕ್ರಮದ ನಂತರ ಕೃಷ್ಣಜನಮನ ಪರಿಕಲ್ಪನೆ ಮತ್ತು ನಿರ್ದೇಶನದ 'ಮೇರಾ ಭಾರತ್ ಮಹಾನ್' ನಾಟಕ ಪ್ರದರ್ಶನ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ, ಸಂಜೆ 6.30ಕ್ಕೆ

ಮೈಸೂರು ಮಿತ್ರ

ಕುಂತಲ್ಲೇ ಅನುಮೋದನೆ ನೀಡಿದರೆ ಇಂತಹ ಅವಾಂತರ!

● ಮೈಸೂರಲ್ಲಿ ಕಂಡಕಂಡಲ್ಲೆಲ್ಲಾ ಸಿಗ್ನಲ್ ಲೈಟ್ ಅಳವಡಿಕೆಗೆ ತೀವ್ರ ಆಕ್ಷೇಪ ● ಫುಟ್‌ಪಾತ್‌ನಲ್ಲಿ ಟಾಂಗಾ ನಿಲ್ದಾಣಕ್ಕೆ ಅನುಮತಿ ನೀಡಿದ ಪಾಲಿಕೆ ನಿಲುವಿಗೆ ಮಾಜಿ ಸಂಸದ ಪ್ರತಾಪ್ ಸಿಂಹ ಕಿಡಿ

ಮೈಸೂರು, ಮಾ.17(ಪಿಎಂ)– ಚಾಮರಾಜ ವೃತ್ತದ, ಪುರಭವನ ಕಾಂಪೌಂಡ್‌ಗೆ ಹೊಂದಿಕೊಂಡಂತೆ ಪಾದಚಾರಿ ಮಾರ್ಗದಲ್ಲಿ (ರಾಜಪಥ/ಫುಟ್‌ಪಾತ್) ಟಾಂಗಾ ನಿಲ್ದಾಣ ನಿರ್ಮಾಣಕ್ಕೆ ಮೈಸೂರು ಮಹಾನಗರ ಪಾಲಿಕೆ ಅನುಮತಿ ನೀಡಿದ್ದರ ಸಂಬಂಧ ಅಸಮಾಧಾನ ವ್ಯಕ್ತಪಡಿಸಿದ ಮಾಜಿ ಸಂಸದ ಪ್ರತಾಪ್ ಸಿಂಹ, ಪಾಲಿಕೆ ಆಯುಕ್ತರು ಹಾಗೂ ಅವರ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದರೆ ಈ ರೀತಿ ಆಗುತ್ತಿರಲಿಲ್ಲ. ಸ್ಥಳ ಪರಿಶೀಲನೆ ಮಾಡದೇ ಅನುಮತಿ ನೀಡಿದ್ದಾರೆ ಎಂದು ಕಿಡಿಕಾರಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಹೋಟೆಲ್ ಮಯೂರ ಹೊಯ್ಸಳ ಕಾಂಪ್ಲೆಕ್ಸ್‌ನಲ್ಲಿರುವ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕ ಮೋತಿಲಾಲ್ ಕೃಷ್ಣ ಲಮಾಣಿ ಅವರ ಕಚೇರಿಗೆ ಮಂಗಳವಾರ ಭೇಟಿ ನೀಡಿ ಅವರೊಂದಿಗೆ ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿ ವಿಚಾರವಾಗಿ ಚರ್ಚಿಸಿದರು.

ಬಳಿಕ ಹೋಟೆಲ್ ಆವರಣದಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ಪಾಲಿಕೆ ಆಯುಕ್ತರು ಬಡಾವಣೆಗಳಿಗೆ ಭೇಟಿ ನೀಡಿ ಜನರ ಕುಂದು ಕೊರತೆ ಆಲಿಸಬೇಕು. ಯಾವುದೇ ಯೋಜನೆಗೆ ಅನುಮೋದನೆ ನೀಡುವ ಮೊದಲು ಸ್ಥಳ ಪರಿಶೀಲನೆ ಮಾಡಬೇಕು. ಪಾಲಿಕೆ ಆಯುಕ್ತರಿಗೆ ನೇರವಾಗಿ ಹೇಳುತ್ತೇನೆ. ಇವರು ಸ್ಥಳಕ್ಕೆ ಭೇಟಿ ಕೊಡುತ್ತಿಲ್ಲ. ಬರೀ ರೂಮ್‌ನೊಳಗೆ ಕೂತು ಕಡತಗಳಿಗೆ ಸಹಿ ಮಾಡುವ ಕೆಲಸ ಮಾಡುತ್ತಿದ್ದಾರೆ. ಹಾಗಾಗಿಯೇ ಇಂತಹ ಅಪದ್ಧಗಳು ಸಂಭವಿಸುತ್ತಿವೆ. ಒಂದು ವೇಳೆ ಪಾಲಿಕೆ ಆಯುಕ್ತರು ಹಾಗೂ ಅಧಿಕಾರಿಗಳು ಸ್ಥಳಕ್ಕೆ ಭೇಟಿ ಕೊಟ್ಟಿದ್ದರೆ, ಜನ ಓಡಾಡಲು ಸಾಧ್ಯವಿಲ್ಲ ಎಂಬುದು ಅರಿವಿಗೆ ಬರುತ್ತಿತ್ತು. ಪಾಲಿಕೆಯಲ್ಲಿ 2023 ನವೆಂಬರ್‌ನಿಂದ ಚುನಾಯಿತ ಸದಸ್ಯರಿಲ್ಲ. ಹಾಗಾಗಿ ಪಾಲಿಕೆ ಆಡಳಿತ ವರ್ಗ ನಿರ್ಲಕ್ಷ್ಯ ಭಾವ ತಳೆದಿರುವುದು ಇದಕ್ಕೆಲ್ಲಾ ಕಾರಣ ಎಂದು ಆರೋಪಿಸಿದರು.

ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕರನ್ನು ಭೇಟಿ ಮಾಡಿದ್ದೆವು. ನಾನು ಸಂಸದನಾಗಿದ್ದ ಸಂದರ್ಭದಲ್ಲಿ ಚಾಮುಂಡಿಬೆಟ್ಟದ ಅಭಿವೃದ್ಧಿಗೆ ಪ್ರಸಾದ್ ಯೋಜನೆಯಡಿ 45 ಕೋಟಿ ತಂದಿದ್ದೆ. ಅದರ ಕಾಮಗಾರಿ ಪ್ರಗತಿ ಯಲ್ಲಿದೆ. ಹಾಗೆಯೇ ಮೈಸೂರು ವಸ್ತು ಪ್ರದರ್ಶನ ಪ್ರಾಧಿಕಾರದ ಮೈದಾನದ ಅಭಿವೃದ್ಧಿಗಾಗಿ ಸ್ವದೇಶಿ ದರ್ಶನ್‌ನಡಿ ಯೋಜನೆಗೆ ಅನುಮೋದನೆ ಕೊಡಿಸಿದ್ದೆ. ಇದರಡಿ ಕನಿಷ್ಠ 80 ಕೋಟಿ ಕೊಡುತ್ತಾರೆ. ಆ ಯೋಜನೆ ಅನುಷ್ಠಾನ ಆಗುತ್ತಿದೆ. ಬೆಂಗಳೂರಿಗೆ ಮಂಜೂರು ಆಗುತ್ತಿದ್ದ ಯೂನಿಟಿ ಮಾಲ್ ಅನ್ನು ನಮ್ಮ ಸರ್ಕಾರದ ಆಶೀರ್ವಾದದಿಂದ ಇಲ್ಲಿಗೆ ತಂದು, ವಸ್ತುಪ್ರದರ್ಶನ ಮೈದಾನದಲ್ಲಿ ಐದು ಎಕರೆ ಜಾಗದಲ್ಲಿ ಯೂನಿಟಿ ಮಾಲ್ ನಿರ್ಮಾಣ ಕಾಮಗಾರಿ ಪ್ರಾರಂಭವಾಗಿದೆ. ಈಗ ತಾತ್ಕಾಲಿಕವಾಗಿ ಇದಕ್ಕೆ ಕೋರ್ಟ್‌ನಿಂದ ತಡೆಯಾಜ್ಞೆ ಇದೆ ಎಂದರು.

ಸ್ವದೇಶಿ ದರ್ಶನ್‌ನಲ್ಲಿ ಬಂದಂತಹ ಹಣವನ್ನು ಬೇರೆ ಬೇರೆ ಕಡೆ ಅಭಿವೃದ್ಧಿಗೆ ವಿನಿಯೋಗ ಮಾಡಿಕೊಳ್ಳಬೇಕೆಂದು ಅದರಲ್ಲಿ ಸುಮಾರು ಹದಿನೆಂಟೂವರೆ ಕೋಟಿ ರೂ. ಅನ್ನು ಕಾರಂಜಿ ಕೆರೆ ಜಿಪ್ ಲೈನ್ ಯೋಜನೆಗೆ ಒಳಗೊಂಡಂತೆ ಹಂಚಿಕೆ ಮಾಡಲಾಗಿತ್ತು. ಹಳೇ ಜಿಲ್ಲಾಧಿಕಾರಿ ಕಚೇರಿ ಅಭಿವೃದ್ಧಿಗೂ 30 ಕೋಟಿ ಸೇರಿದಂತೆ ಟಾಂಗಾ ನಿಲ್ದಾಣಗಳ ಸ್ಥಾಪನೆ ಮಾಡುವುದು ಸೇರಿದೆ. ಐದು ಕಡೆ ಟಾಂಗಾ ನಿಲ್ದಾಣಗಳನ್ನು ಮಾಡಬೇಕೆಂದು ಯೋಜನೆ ಇದ್ದು, ಇದಕ್ಕಾಗಿ 2 ಕೋಟಿ 70 ಲಕ್ಷ ರೂ. ಅನ್ನು ಕೇಂದ್ರ ಸರ್ಕಾರದ ಸ್ವದೇಶಿ ದರ್ಶನ್ ಯೋಜನೆಯಡಿ ವಿನಿಯೋಗ ಮಾಡಿಕೊಳ್ಳಲಾಗುತ್ತಿದೆ. ಅದರಂತೆಯೇ ಪುರಭವನ ಕಾಂಪೌಂಡ್‌ಗೆ ಹೊಂದಿಕೊಂಡಂತೆ ಇರುವ ಫುಟ್ ಪಾತ್‌ನಲ್ಲಿ ಟಾಂಗಾ ನಿಲ್ದಾಣ ನಿರ್ಮಾಣಕ್ಕೆ ಮುಂದಾಗಿದ್ದಾರೆ ಎಂದು ವಿವರಿಸಿದರು.

ಟಾಂಗಾ ನಿಲ್ದಾಣ ನಿರ್ಮಿಸಲು ಪ್ರವಾಸೋದ್ಯಮ ಇಲಾಖೆಗೆ ಪಾಲಿಕೆಯವರು ಈ ಫುಟ್‌ಪಾತ್ ಜಾಗ ತೋರಿಸಿದ್ದಾರೆ. ಫುಟ್‌ಪಾತ್ ಅನ್ನೇ ಕಿತ್ತು ಅಲ್ಲಿ ಟಾಂಗಾ ನಿಲ್ದಾಣ ಮಾಡಿದರೆ ಜನ ಓಡಾಡುವುದೆಲ್ಲಿ? ಹಾಗಾಗಿ ನಾವು ಇಂದು ಪ್ರವಾಸೋದ್ಯಮ ಜಂಟಿ ನಿರ್ದೇಶಕರನ್ನು ಭೇಟಿಯಾಗಿ ಇದನ್ನು ಕೂಡಲೇ ಕೈಬಿಡಬೇಕೆಂದು ಮನವಿ ಮಾಡಿದೆವು. ಅದು ಸೂಕ್ತ ಸ್ಥಳವಲ್ಲ ಎಂದು ಮನವರಿಕೆ ಮಾಡಿಕೊಟ್ಟಿದ್ದೇವೆ. ಅವರು ಕೂಡ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ತಿಳಿಸಿದರು.

ಈ ಹಿಂದೆ ನರ್ಮ್ ಯೋಜನೆಯಲ್ಲಿ ರಾಜಪಥ ನಿರ್ಮಾಣಕ್ಕಾಗಿ ಹಣ ಹಂಚಿಕೆ ಮಾಡಲಾಗಿತ್ತು ನಾನು ಸಂಸದನಾದ ನಂತರ ಆ ಯೋಜನೆ ಪೂರ್ಣಗೊಂಡರೂ 3 ವರ್ಷಗಳ ವಿಸ್ತರಣೆ ಕೊಡಿಸಿ ರಾಜಪಥ ಪೂರ್ಣಗೊಳಿಸಿದೆ. ಹೆರಿಟೇಜ್ ಲುಕ್‌ಗಾಗಿ ರಾಜಪಥ ನಿರ್ಮಾಣ ಮಾಡಿದ್ದಾಗಿದೆ. ಸ್ಟೋನ್ ಕಾರ್ವಿಂಗ್‌ನಲ್ಲಿ ಮಾಡಿದ ಫುಟ್‌ಪಾತ್ ಅನ್ನು ವಾಪಸ್ ಅಳವಡಿಸಬೇಕೆಂದು ಕೇಳಿಕೊಂಡಿದ್ದೇವೆ. ಅವರು ಕ್ರಮ ವಹಿಸುವ ಭರವಸೆ ನೀಡಿದ್ದಾರೆ ಎಂದರು.

ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಎಂ.ಯು.ಸುಬ್ಬಯ್ಯ, ಸತೀಶ್, ಮೈಸೂರು ಗ್ರಾಹಕರ ಪರಿಷತ್ ಎಸ್.ಕೆ. ದಿನೇಶ್, ಮುಖಂಡ ದಿನೇಶ್‌ಗೌಡ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಪ್ರಭುಸ್ವಾಮಿ, ಕರ್ನಾಟಕ ಪ್ರವಾಸೋದ್ಯಮ ಮೂಲ ಸೌಲಭ್ಯ ನಿಗಮದ ಎಇಇಗಳಾದ ಅಂಬರೀಶ್, ಅತನಿ ಮತ್ತಿತರರು ಚರ್ಚೆ ವೇಳೆ ಹಾಜರಿದ್ದರು.



ಮಾಜಿ ಸಂಸದ ಪ್ರತಾಪ್ ಸಿಂಹ ಮಂಗಳವಾರ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕ ಮೋತಿಲಾಲ್ ಕೃಷ್ಣ ಲಮಾಣಿ ಅವರನ್ನು ಭೇಟಿ ಮಾಡಿ ಅರಮನೆ ಮುಂದೆ ಫುಟ್‌ಪಾತ್‌ನಲ್ಲಿ ಟಾಂಗಾ ನಿಲ್ದಾಣ ನಿರ್ಮಾಣ ಕೈಬಿಡುವಂತೆ ಆಗ್ರಹಿಸಿ, ಮೈಸೂರು ಪ್ರವಾಸೋದ್ಯಮ ಅಭಿವೃದ್ಧಿ ಸಂಬಂಧ ಚರ್ಚಿಸಿದರು.

ಕಮಿಷನ್ ಚೆನ್ನಾಗಿ ಕೊಟ್ಟರೆಂದು ಸಿಕ್ಕ ಸಿಕ್ಕ ಜಾಗಗಳಲ್ಲಿ ಸಿಗ್ನಲ್ ಅಳವಡಿಕೆ!

ಮೈಸೂರು, ಮಾ.17(ಪಿಎಂ)– ನಗರದಲ್ಲಿ ಇತ್ತೀಚೆಗೆ ಕಂಡ ಕಂಡಲ್ಲಿ ಸಿಗ್ನಲ್ ಅಳವಡಿಕೆ ಸಂಬಂಧ ಪ್ರತಿಕ್ರಿಯಿಸಿದ ಮಾಜಿ ಸಂಸದ ಪ್ರತಾಪ್ ಸಿಂಹ, ಮೈಸೂರಿನಲ್ಲಿ ಸುಮಾರು 108 ಹೊಸ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ. ಬಹುಶಃ ಕಮಿಷನ್ ಚೆನ್ನಾಗಿ ಕೊಟ್ಟಿರಬೇಕು! ಮುಖ್ಯಮಂತ್ರಿಗಳು ಹಾಗೂ ಅವರ ಸುಪುತ್ರರು ಇದರಲ್ಲಿ ಮೈಸೂರಿನ ಟ್ರಾಫಿಕ್ ಸುಧಾರಿಸುವ ಉದ್ದೇಶಗಳಿವೆಯೇ? ಎಂದು ಹೇಳಬೇಕೆಂದು ವಾಗ್ದಾಳಿ ನಡೆಸಿದರು.

ಮೈಸೂರಿನ ಯಾವ ರಸ್ತೆಗೆ ಹೋದರೂ ಜನರೇ ಇಲ್ಲ. ಆದರೆ ಟ್ರಾಫಿಕ್ ಸಿಗ್ನಲ್‌ಗಳು ಇವೆ. ಅಲ್ಲಿ ವಾಹನ ದಟ್ಟಣೆಯೇ ಇಲ್ಲ. ಒಂದೂವರೆ ಕಿ.ಮೀ.ಗೆ 9ರಿಂದ 10 ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ. ಇದರ ಉದ್ದೇಶವೇನು. ಬೆಳಗ್ಗೆ ಮತ್ತು ರಾತ್ರಿ ಜನ ವಾಹನ ದಟ್ಟಣೆ ಇರುವ ಸಂದರ್ಭಗಳಲ್ಲಿ ಸಿಗ್ನಲ್ ಹಾಕಲಿ. ಆದರೆ ಈಗ ಸುಮ್ಮನೆ ಸಿಗ್ನಲ್‌ನಲ್ಲಿ ನಿಲ್ಲುವಂತೆ ಆಗಿದೆ. ಅಲ್ಲದೆ, ರಿಂಗ್ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಮುಕ್ತವಾಗಿರಬೇಕು. ಅಂಡರ್ ಪಾಸ್ ಹಾಗೂ ಓವರ್ ಬ್ರಿಡ್ಜ್ ಮಾಡುವುದು ಅಲ್ಲಿಗೆ ಪರಿಹಾರವೇ ಹೊರತು ಸಿಗ್ನಲ್ ಅಳವಡಿಸುವುದಲ್ಲ. ಬೋಗಾದಿ ರಿಂಗ್ ರಸ್ತೆ, ವಿಜಯನಗರ 4ನೇ ಹಂತಕ್ಕೆ ಬೇಕಿದ್ದರೆ ಸಿಗ್ನಲ್ ಅಳವಡಿಸಲಿ. ಆದರೆ ಸಿಕ್ಕ ಜಾಗಕ್ಕೆಲ್ಲಾ ಏಕೆ ಅಳವಡಿಸಿದ್ದಾರೆ ಎಂದು ಪ್ರಶ್ನಿಸಿದರು. ರಿಂಗ್ ರಸ್ತೆಗೆ ಏಳು ಅಂಡರ್ ಪಾಸ್ ಹಾಗೂ ಮೇಲ್ಸೇತುವೆಗಳನ್ನು ನಾನು ಸಂಸದನಾಗಿದ್ದಾಗ ಮಂಜೂರು ಮಾಡಿಸಿದ್ದೇನೆ. ಇನ್ನು ಹೆಚ್ಚು ಬೇಕೆಂದರೆ ನಮ್ಮ ಸಂಸದರು ಇದ್ದಾರೆ. ಖಂಡಿತ ಅವರು ಮಂಜೂರು ಮಾಡಿಕೊಡಲಿದ್ದಾರೆ. ಆದರೆ ಸಿಗ್ನಲ್ ಅಳವಡಿಸುವುದು ಇದಕ್ಕೆ ಪರಿಹಾರವಲ್ಲ ಎಂದು ಪ್ರತಿಪಾದಿಸಿದರು.

ಕಾಂಗ್ರೆಸ್‌ನಿಂದ ಅನಗತ್ಯ ಆತಂಕ ಸೃಷ್ಟಿಸುವ ಕೆಲಸ

ಮೈಸೂರು, ಮಾ.17(ಪಿಎಂ)– ಗ್ಯಾಸ್ ಸಿಲಿಂಡರ್ ಸಂಬಂಧ ಆತಂಕಗೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿಲ್ಲ. ಆದರೆ ಕಾಂಗ್ರೆಸ್‌ನವರು ರಸ್ತೆಬದಿಯಲ್ಲಿ ನಿಂತು ಗ್ಯಾಸ್ ಸಿಲಿಂಡರ್ ಇಲ್ಲವೆಂದು ಜನತೆಯಲ್ಲಿ ಆತಂಕ ಸೃಷ್ಟಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಕಿಡಿಕಾರಿದರು.

ಪೆಟ್ರೋಲ್ ಕೊರತೆಯಿಂದ ಪಾಕಿಸ್ತಾನದಲ್ಲಿ ಪೆಟ್ರೋಲ್ ಬಂಕ್ ಅನ್ನೇ ಮುಚ್ಚಲು ಮುಂದಾಗಿದ್ದಾರೆ. ನಮ್ಮಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆ ಅಭಾದಿತವಾಗಿದೆ. ಗ್ಯಾಸ್ ಅನ್ನು ನಿಗದಿತ ಉಷ್ಣಾಂಶದಲ್ಲಿ ಆಮದು ಮಾಡಿಕೊಳ್ಳಬೇಕು. ಜೊತೆಗೆ ತಿಂಗಳುಗಟ್ಟಲೆ ಶೇಖರಣೆ ಮಾಡಬೇಕು. ಅದಕ್ಕೆ ವ್ಯವಸ್ಥೆ ಇಲ್ಲ. ಇಡೀ ಜಗತ್ತೇ ಇದರಿಂದ ಸಮಸ್ಯೆಗೆ ಸಿಲುಕಿದೆ. ನಮ್ಮ ಭಾರತ ಕೂಡ ಅದಕ್ಕೆ ಹೊರತಾಗಿಲ್ಲ. ಇದನ್ನು ಜನ ಅರ್ಥ ಮಾಡಿಕೊಂಡಿದ್ದಾರೆ ಎಂದರು.

ವೀರಪ್ಪ ಮೊಯ್ಲಿಯವರು ಪೆಟ್ರೋಲಿಯಂ ಸಚಿವರಾಗಿದ್ದಾಗ ರಾತ್ರಿ 8 ಗಂಟೆಗೆ ಪೆಟ್ರೋಲ್ ಬಂಕ್ ಮುಚ್ಚಿಸುತ್ತಿದ್ದರು. 2011ರಿಂದ 13ರವರೆಗೂ ಯಾವ ಪರಿಸ್ಥಿತಿ ಇತ್ತು. ಆಯಿಲ್ ಬಾಂಡ್‌ಗಳನ್ನು ಏಕೆ ಬಿಡುಗಡೆ ಮಾಡಿದ್ದರು ಎಂಬುದು ನಮಗೆ ಗೊತ್ತಿದೆ. ಇದು ಜಾಗತಿಕ ಸಮಸ್ಯೆ, ಭಾರತಕ್ಕೆ ಮಾತ್ರ ಸೀಮಿತವಲ್ಲ. ಇದು ಜನರಿಗೆ ಅರ್ಥವಾಗಿದೆ.

ಗೃಹ ಬಳಕೆ ಸಿಲಿಂಡರ್ ದೊರೆಯುತ್ತಿದ್ದು, ವಾಣಿಜ್ಯ ಸಿಲಿಂಡರ್ ಸಂಬಂಧ ಸಮಸ್ಯೆಯಾಗಿದೆ. ಈಗ ಹಾರ್ಮುಜ್ ಕೊಲ್ಲಿಯ ಮೂಲಕ ನಮ್ಮ ಹಡಗುಗಳು ಬರುತ್ತಿವೆ. ಸಮಸ್ಯೆ ಪರಿಹಾರ ಆಗಲಿದೆ. ಜಾಗತಿಕ ಸಮಸ್ಯೆಯನ್ನು ಕೇವಲ ಭಾರತಕ್ಕೆ ಸೀಮಿತವಾಗಿರುವ ಸಮಸ್ಯೆ ಎಂದು ಬಿಂಬಿಸುವ ಅಗತ್ಯವಿಲ್ಲ. 1998ರಲ್ಲಿ ಡೆಲ್ಲಿ, ಮಧ್ಯಪ್ರದೇಶ, ರಾಜಸ್ತಾನದಲ್ಲಿ ಈರುಳ್ಳಿ ಪೋಸ್ಟರ್ ಹಿಡಿದುಕೊಂಡು ನೀವು ಚುನಾವಣೆ ಗೆದ್ದಿದ್ದು ನಮಗೆ ಗೊತ್ತಿದೆ. ಆದರೆ ಇಂದು ಅಂತಹ ಪರಿಸ್ಥಿತಿ ಇಲ್ಲ. ಇಂದು ಮಾಧ್ಯಮಗಳು ಪ್ರೋಆಕ್ಟಿವ್ ಆಗಿದ್ದು, ಸಾಮಾಜಿಕ ಮಾಧ್ಯಮಗಳು ಇವೆ. ಹಾಗಾಗಿ ಸತ್ಯಾಸತ್ಯತೆ ಜನಕ್ಕೆ ಅರ್ಥವಾಗುತ್ತಿದೆ ಎಂದು ಕಾಂಗ್ರೆಸ್ ವಿರುದ್ಧ ಕಿಡಿಕಾರಿದರು.

ನಗರಾಭಿವೃದ್ಧಿ ಸಚಿವರು ನುಡಿದಂತೆ ನಡೆಯಲು ಕೋರುವೆ: ಫ್ಲೆಕ್ಸ್, ಬಂಟಿಂಗ್ಸ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಬಗ್ಗೆ ನಗರಾಭಿವೃದ್ಧಿ ಸಚಿವರು ಸದನದಲ್ಲೇ ಮಾತನಾಡಿದ್ದಾರೆ. ಅವರ ಹೇಳಿಕೆ ಸ್ವಾಗತಾರ್ಹ. ಆದರೆ ಹೇಳಿಕೆಯಂತೆ ನಡೆದುಕೊಳ್ಳಬೇಕೆಂದು ಅವರಲ್ಲಿ ಮನವಿ ಮಾಡುವುದಾಗಿ ಮಾಜಿ ಸಂಸದ ಪ್ರತಾಪ್ ಸಿಂಹ ತಿಳಿಸಿದರು. ಜಿಲ್ಲಾಧಿಕಾರಿಗಳು ನಮ್ಮ ಮನವಿಗೆ ಸ್ಪಂದಿಸಿದ್ದಾರೆ. ಕೆಲವು ಕಡೆ ಹಳೇ ಫ್ಲೆಕ್ಸ್‌ಗಳು ಬಾಕಿ ಉಳಿದಿವೆ ಎಂದರು.

ಸಿಲಿಂಡರ್ ಸ್ಫೋಟ: ಎರಡು ಶೆಡ್ ಅಗ್ನಿಗಾಹುತಿ

ತಪ್ಪಿದ ಭಾರೀ ಅನಾಹುತ

ಮೈಸೂರು, ಮಾ.17(ಎಸ್‌ಪಿಎನ್)– ಅಡುಗೆ ಮಾಡುವ ವೇಳೆ ಗ್ಯಾಸ್ ಸೋರಿಕೆಯಾಗಿ ಸಿಲಿಂಡರ್ ಸಿಡಿದ ಪರಿಣಾಮ ಕಾರ್ಮಿಕರು ವಾಸವಿದ್ದ ಎರಡು ಶೆಡ್‌ಗಳು ಸಂಪೂರ್ಣ ಭಸ್ಮವಾಗಿರುವ ಘಟನೆ ರಮಾಬಾಯಿ ನಗರದಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಸ್ಥಳೀಯ ನಿವಾಸಿ ಭೈರಪ್ಪ, ಶ್ರೀರಾಂಪುರ ಪಟ್ಟಣ ಪಂಚಾಯ್ತಿ ವತಿಯಿಂದ ಕುಡಿಯುವ ನೀರಿನ ಟ್ಯಾಂಕ್ ಹಾಗೂ ಪೈಪ್‌ಲೈನ್ ಕಾಮಗಾರಿ ನಡೆಯುತ್ತಿದೆ. ಈ ಕಾಮಗಾರಿಯಲ್ಲಿ ತೊಡಗಿಸಿಕೊಂಡಿರುವ ಕಾರ್ಮಿಕರು, ರಮಾಬಾಯಿ ನಗರದ ರಸ್ತೆ ಬದಿ ತಾತಾಲ್ಕಿಕ ಶೆಡ್‌ಗಳನ್ನು ನಿರ್ಮಿಸಿಕೊಂಡು ವಾಸವಾಗಿದ್ದರು.

ಎಂದಿನಂತೆ ಇಂದು ಕೆಲಸ ಮುಗಿಸಿ ಶೆಡ್‌ಗೆ ಆಗಮಿಸಿದ್ದ ಕಾರ್ಮಿಕರು ರಾತ್ರಿ 9ರ ಸಮಯದಲ್ಲಿ ಅಡುಗೆ ಮಾಡುವ ವೇಳೆ ಅಡುಗೆಗೆ ಬಳಸಿದ್ದ ಐದು ಕೆಜಿ ತೂಕದ ಸಿಲಿಂಡರ್‌ನಿಂದ ಗ್ಯಾಸ್ ಸೋರಿಕೆಯಾದ ಪರಿಣಾಮ ಸಿಲಿಂಡರ್ ಸಿಡಿದು ದೊಡ್ಡಮಟ್ಟದ ಬೆಂಕಿ ಕಾಣಿಸಿಕೊಂಡು ಕಾರ್ಮಿಕರು ವಾಸವಿದ್ದ ಎರಡು ಶೆಡ್‌ಗಳು ಸಂಪೂರ್ಣ ಭಸ್ಮವಾಗಿವೆ.

ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯವಾಗಿಲ್ಲ ಎಂದು ಅವರು ತಿಳಿಸಿದರು. ವಿಷಯ ತಿಳಿದು ಸರಸ್ವತಿಪುರಂ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕಾಗಮಿಸಿ ಬೆಂಕಿ ನಂದಿಸಿದ್ದಾರೆ.

ಮಾ. 22 ರಂದು ನಿರಂತರ ಕಲೆಮನೆ ಉತ್ಸವ

ಮೈಸೂರು, ಮಾ. 17– ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ಕಲೆಮನೆ ಸಭಾಂಗಣದಲ್ಲಿ ಮಾ. 22 ರಂದು 2.30ಕ್ಕೆ 70ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ ಹಮ್ಮಿಕೊಳ್ಳಲಾಗಿದೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ನೃತ್ಯ ಕ್ಷೇತ್ರದಲ್ಲಿ ಶ್ರೀಮತಿ ಜಿ ಆರ್ ವಿಜಯಲಕ್ಷ್ಮಿ ಮತ್ತು ಶ್ರೀಮತಿ ರಾಜೇಶ್ವರಿ ರವಿ, ಶಿಕ್ಷಣ ಕ್ಷೇತ್ರದಲ್ಲಿ ಎಎಂಬಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಎಸ್. ಸೌಮ್ಯ ಅವರಿಗೆ ಕಲೆಮನೆ ಕಲಾಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಗುವುದು.

ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ವಿದ್ಯಾರ್ಥಿಗಳಿಂದ ಭರತನಾಟ್ಯ, ಬೆಂಗಳೂರಿನ ಸುತಪ್ರಾಲಯ ನೃತ್ಯ ಸಂಸ್ಥೆಯಿಂದ ಭರತನಾಟ್ಯ, ಬೆಂಗಳೂರಿನ ನೃತ್ಯ ಸ್ಕೂಲ್ ಆಫ್ ಆರ್ಟ್ ಸಂಸ್ಥೆಯಿಂದ ಶ್ರೀರಾಮ ಚರಿತಂ ನೃತ್ಯ ನಾಟಕ ಹಾಗೂ ಬೆಂಗಳೂರಿನ ಉಷಾಶ್ ಫೌಂಡೇಶನ್ ಸಂಸ್ಥೆಯ ವತಿಯಿಂದ ನೃತ್ಯ ಕಾರ್ಯಕ್ರಮ ನಡೆಯಲಿದೆ.

ತಂಬಾಕು ಪರ್ಯಾಯ ಬೆಳೆ, ಜೀವನೋಪಾಯ ಉತ್ತೇಜನಕ್ಕೆ ಸಂಸದ ಯದುವೀರ್ ಆಗ್ರಹ

ಲೋಕಸಭೆಯಲ್ಲಿ ಕನ್ನಡದಲ್ಲೇ ಸರ್ಕಾರಕ್ಕೆ ಮನದಟ್ಟು



ಮೈಸೂರು, ಮಾ.17– ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ತಂಬಾಕು ಬೆಳೆಗೆ ಪರ್ಯಾಯ ಹಾಗೂ ಬೆಳೆಗಾರರ ಜೀವನೋಪಾಯಕ್ಕೆ ಉತ್ತೇಜನ ನೀಡಲು ಕೇಂದ್ರ ಸರ್ಕಾರ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಬೇಕು ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಒತ್ತಾಯಿಸಿದ್ದಾರೆ.

ಲೋಕಸಭೆಯಲ್ಲಿ ಮಂಗಳವಾರ ನಡೆದ ಕಲಾಪದಲ್ಲಿ ತಂಬಾಕು ಬೆಳೆ ವೈವಿಧ್ಯೀಕರಣ ಯೋಜನೆ ಕುರಿತು ಪ್ರಸ್ತಾಪಿಸಿದ ಸಂಸದರು, ಪರಿವರ್ತನೆಯ ಯೋಜನೆಗಳನ್ನು ಹೇಗೆ ರೂಪಿಸಲಾಗಿದೆ ಎಂದು ಪ್ರಶ್ನಿಸಿದರು.

ಕಳೆದ ಐದು ವರ್ಷಗಳಲ್ಲಿ ನಮ್ಮ ಕ್ಷೇತ್ರದ ಮೈಸೂರು ಜಿಲ್ಲೆಯಲ್ಲಿ ತಂಬಾಕು ಕೃಷಿಯಿಂದ ಪರ್ಯಾಯ ಬೆಳೆಗಳಿಗೆ ಪರಿವರ್ತನೆಯಾಗುತ್ತಿರುವುದು ಕಂಡುಬಂದಿದೆ. ಈ ನಿಟ್ಟಿನಲ್ಲಿ ಬೆಳೆಗಾರರಿಗೆ ಯಾವ ರೀತಿಯ ಸೌಲಭ್ಯಗಳನ್ನು ಒದಗಿಸಲಾಗಿದೆ. ಈ ಕುರಿತು ಕೇಂದ್ರ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ಗಮನ ಸೆಳೆದರು.

ಮೈಸೂರು ಸೇರಿದಂತೆ ತಂಬಾಕು ಬೆಳೆಯುವ ಜಿಲ್ಲೆಗಳಿಗೆ, ವಿಶೇಷವಾಗಿ ಮಾರುಕಟ್ಟೆ ಸಂಪರ್ಕ, ಸಂಸ್ಕರಣಾ ಮೂಲಸೌಕರ್ಯ, ರೈತರಿಗೆ ಸುಸ್ಥಿರ ಆದಾಯ ಪರಿವರ್ತನೆಗೆ ಒತ್ತು ನೀಡಲು ಸರ್ಕಾರವು, ಪ್ರದೇಶ–ನಿರ್ದಿಷ್ಟ ಬೆಂಬಲ ಕ್ರಮಗಳನ್ನು ಪ್ರಸ್ತಾಪಿಸುತ್ತದೆಯೇ, ಹಾಗಿದ್ದಲ್ಲಿ ಅದರ ವಿವರಗಳನ್ನು ಬೆಳೆಗಾರರಿಗೆ ತಿಳಿಸಿಕೊಡಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಉತ್ತರ ನೀಡಿದ ಕೇಂದ್ರ ಸಚಿವರು, ಕರ್ನಾಟಕ ಸೇರಿದಂತೆ ಪ್ರಮುಖ ತಂಬಾಕು ಬೆಳೆಯುವ ರಾಜ್ಯಗಳಲ್ಲಿ ರೈತರು ತಂಬಾಕು ಕೃಷಿಯಿಂದ ಪರ್ಯಾಯ ಬೆಳೆಗಳು ಮತ್ತು ಬೆಳೆ ಪದ್ಧತಿಗಳಿಗೆ ಬದಲಾಗುವಂತೆ ಪ್ರೋತ್ಸಾಹಿಸುವ ಉದ್ದೇಶದಿಂದ ಯೋಜನೆಯನ್ನು ಜಾರಿಗೆ ತರಲಾಗಿದೆ. ಯಾವುದೇ ಕೇಂದ್ರ ಪ್ರಾಯೋಜಿತ ಅಥವಾ ರಾಜ್ಯ ಯೋಜನೆಯಡಿಯಲ್ಲಿ ಅನುಮೋದಿಸಲಾದ ವೆಚ್ಚದ ಮಾನದಂಡಗಳಿಗೆ ಅನುಗುಣವಾಗಿ, ತಂಬಾಕನ್ನು ಪರ್ಯಾಯ ಬೆಳೆಗಳು ಅಥವಾ ಬೆಳೆ ಪದ್ಧತಿಗಳೊಂದಿಗೆ ಬದಲಾಯಿಸುವ ಗುರಿಯೊಂದಿಗೆ ಸೂಕ್ತ ಚಟುವಟಿಕೆಗಳನ್ನು ಕೈಗೊಳ್ಳಬಹುದು ಎಂದು ಸ್ಪಷ್ಟಪಡಿಸಿದರು.

ಕರ್ನಾಟಕಕ್ಕೆ 2021–22ರಲ್ಲಿ 240 ಲಕ್ಷ ರೂ., 2022–23ರಲ್ಲಿ 240, 2023–24ರಲ್ಲಿ 244, 2024–25ರಲ್ಲಿ 244, 2025–26ರಲ್ಲಿ 120 ಲಕ್ಷ ರೂ.ಗಳನ್ನು ಬೆಳೆ ಪರಿವರ್ತನೆಗಾಗಿ ಅನುದಾನ ನೀಡಲಾಗಿದೆ ಎಂದು ಕೇಂದ್ರ ಸಚಿವರು ಮಾಹಿತಿ ನೀಡಿದ್ದಾರೆ. ಮೈಸೂರು ಪ್ರದೇಶಕ್ಕೆ ಅನುಗುಣವಾಗಿ ಬಹು ಬೆಳೆ ಅಥವಾ ಅನುಕ್ರಮ ಬೆಳೆ ಆಧಾರಿತ ಪ್ರದರ್ಶನಗಳಾದ ಜೋಳ–ಬೀನ್ಸ್, ಗೋವಿನಜೋಳ, ರಾಗಿ ಅಥವಾ ರಾಗಿ–ಗೋವಿನಜೋಳ ಬೆಳೆಯನ್ನು ಉತ್ತೇಜಿಸಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾಗಿ ಸಂಸದ ಯದುವೀರ್ ಒಡೆಯರ್ ಸ್ಪಷ್ಟಪಡಿಸಿದ್ದಾರೆ.

ಜೋಸ್ ಅಲುಕ್ಕಾಸ್‌ನಿಂದ ವರ್ಚುವಲ್ ಟ್ರೈ ಆನ್ ವ್ಯವಸ್ಥೆ


ಇದ್ದಲ್ಲೇ ಆನ್‌ಲೈನ್ ಮೂಲಕ ಆಭರಣ ಧರಿಸುವ ಸದಾವಕಾಶ

ಮೈಸೂರು, ಮಾ.17– ಆಧುನಿಕ ತಂತ್ರಜ್ಞಾನದ ಮೂಲಕ ಆಭರಣಗಳನ್ನು ವರ್ಚುವಲ್ ಆಗಿ ಧರಿಸಿ, ನಂತರ ಖರೀದಿಸುವ ಅವಕಾಶವನ್ನು ಜೋಸ್ ಅಲುಕ್ಕಾಸ್ ಕಲ್ಪಿಸಿಕೊಟ್ಟಿದೆ.

ಗುಣಮಟ್ಟ, ನಾವೀನ್ಯತೆ ಹಾಗೂ ಟ್ರೆಂಡಿ ಆಭರಣಗಳಿಗೆ ವಿಶ್ವಾಸಾರ್ಹವಾಗಿರುವ ಜೋಸ್ ಅಲುಕ್ಕಾಸ್, ಮಿರಾರ್ ಸಹಭಾಗಿತ್ವದೊಂದಿಗೆ ಅಭಿವೃದ್ಧಿಪಡಿಸಿರುವ ವಿಶಿಷ್ಟ ಆಗ್ಮೆಂಟೆಡ್ ರಿಯಾಲಿಟಿ(ಎಆರ್) ಆನ್‌ಲೈನ್ ಸ್ಟೋರ್‌ನಲ್ಲಿ ಲಭ್ಯವಿದೆ. ಗ್ರಾಹಕರು ಸ್ಮಾರ್ಟ್ ಸಾಧನಗಳ ಮೂಲಕ 'ವರ್ಚುವಲ್ ಟ್ರೈ–ಆನ್' ಅನುಭವ ಪಡೆಯಬಹುದಾಗಿದೆ.

ಹೊಸ ಎಆರ್ ವೈಶಿಷ್ಟ್ಯವೇನೆಂದರೆ ಡಿವೈಸ್ ಕ್ಯಾಮರಾ ಬಳಸಿಕೊಂಡು ನೆಕ್ಲೆಸ್‌ಗಳು, ಕಿವಿಯೋಲೆ, ಬಳೆ, ಉಂಗುರ ಇನ್ನಿತರ ಆಭರಣಗಳನ್ನು ವೀಕ್ಷಿಸುವುದರ ಜೊತೆಗೆ ಧರಿಸಿದ ಅನುಭವ ಪಡೆಯಬಹುದು. ಆನ್‌ಲೈನ್ ಆಭರಣ ಶಾಪಿಂಗ್ ವಿಶ್ವಾಸಾರ್ಹತೆ ಹೆಚ್ಚುತ್ತಿರುವ ಸಂದರ್ಭದಲ್ಲಿ ಜಾಗತಿಕವಾಗಿ ಗ್ರಾಹಕರಿಗೆ ಆನ್‌ಲೈನ್ ಶಾಪಿಂಗ್ ಮರುವ್ಯಾಖ್ಯಾನಿಸುವ ಗುರಿ ಹೊಂದಲಾಗಿದೆ.

ಈ ಬಗ್ಗೆ ಜೋಸ್ ಅಲುಕ್ಕಾಸ್‌ನ ವ್ಯವಸ್ಥಾಪಕ ನಿರ್ದೇಶಕ ಜಾನ್ ಅಲುಕ್ಕಾಸ್



ಪ್ರತಿಕ್ರಿಯಿಸಿ, ಗ್ರಾಹಕರು ಯಾವುದೇ ಆಭರಣಗಳನ್ನು ಖರೀದಿಸುವ ಮುನ್ನ ಧರಿಸಿದರೆ ಹೇಗೆ ಕಾಣುತ್ತದೆ ಎಂದು ಪರೀಕ್ಷಿಸುವುದು ಸಹಜ. ಆದ್ದರಿಂದ ಈ ಸೌಲಭ್ಯವನ್ನು ಎಆರ್ ವೈಶಿಷ್ಟ್ಯದೊಂದಿಗೆ ಶೋರೂಮ್ ಅನುಭವವನ್ನು ನೇರವಾಗಿ ಗ್ರಾಹಕರ ಪರದೆಗಳಿಗೆ ತಲುಪಿಸುತ್ತಿದ್ದೇವೆ. ಗ್ರಾಹಕರು ಬ್ರ್ಯಾಂಡ್‌ನ ವೆಬ್‌ಸೈಟ್ http://www.josalukkasonline.com ಗೆ ಭೇಟಿ ನೀಡಿ, ಇಷ್ಟವಾದ ಆಭರಣವನ್ನು ಆಯ್ಕೆ ಮಾಡಿ, ವರ್ಚುವಲ್ ಟ್ರೈ–ಆನ್ ಆಯ್ಕೆ ಮೂಲಕ ಡಿವೈಸ್ ಕ್ಯಾಮರಾದ ಮೂಲಕ ಆಭರಣಗಳನ್ನು ಧರಿಸಬಹುದು ಎಂದು ತಿಳಿಸಿದ್ದಾರೆ.

ಶಾಂತಿಗೆ ಇದು ಸೂಕ್ತ ಸಮಯವಲ್ಲ: ಯುದ್ಧವಿರಾಮ ತಿರಸ್ಕರಿಸಿದ ಇರಾನ್



ನವದೆಹಲಿ, ಮಾ.17– ಅಮೆರಿಕ–ಇಸ್ರೇಲ್ ಜಂಟಿ ದಾಳಿಯಿಂದ ಕೆರಳಿರುವ ಇರಾನ್, ಯುದ್ಧವಿರಾಮ ಪ್ರಸ್ತಾಪವನ್ನು ನಿರಾಕರಿಸಿದೆ.

ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ತಗ್ಗಿಸುವ ಅಥವಾ ಯುದ್ಧವಿರಾಮದ ಪ್ರಸ್ತಾಪವನ್ನು ಇರಾನ್‌ನ ನೂತನ ಪರಮೋಚ್ಚ ನಾಯಕ ಮೊಜ್ತಬಾ ಖಮೇನಿ ತಿರಸ್ಕರಿಸಿದ್ದಾರೆ ಎಂದು ವರದಿಯಾಗಿದೆ.

ಅಮೆರಿಕ ಮತ್ತು ಇಸ್ರೇಲ್ ಮಂಡಿಯೂರಿ ತಮ್ಮ ಸೋಲು ಒಪ್ಪಿಕೊಳ್ಳುವವರೆಗೂ ಮತ್ತು ದಾಳಿಯಿಂದ ಮಾಡಿದ ನಷ್ಟಕ್ಕೆ ಪರಿಹಾರ ನೀಡುವವರೆಗೂ ಶಾಂತಿ ಸ್ಥಾಪನೆಯ ಮಾತೇ ಇಲ್ಲ. ಈಗ ಶಾಂತಿಗೆ ಸೂಕ್ತ ಸಮಯವಲ್ಲ ಎಂದು ಖಮೇನಿ ಹೇಳಿರುವುದಾಗಿ ತಿಳಿದುಬಂದಿದೆ.

ಎರಡು ಮಧ್ಯವರ್ತಿ ದೇಶಗಳ ಮೂಲಕ ಅಮೆರಿಕವು ಇರಾನ್‌ಗೆ ಸಂದೇಶ ಕಳುಹಿಸಿತ್ತು. ಆದರೆ, ಖಮೇನಿ ಅದನ್ನು ತಿರಸ್ಕರಿಸಿದ್ದಾರೆ ಎಂದು ಇರಾನ್‌ನ ಇಬ್ಬರು ಅಧಿಕಾರಿಗಳು ತಿಳಿಸಿದ್ದಾರೆ. ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಸೇಡು ತೀರಿಸಿಕೊಳ್ಳಲು ಖಮೇನಿ ಕಟಿಬದ್ಧರಾಗಿದ್ದು, ತನ್ನ ನಿಲುವು ಕಠಿಣ ಮತ್ತು ಗಂಭೀರವಾಗಿದೆ ಎಂದು ಮೊದಲ ವಿದೇಶಿ ನೀತಿ ಅಧಿವೇಶನದಲ್ಲಿ ಅವರು ಸ್ಪಷ್ಟಪಡಿಸಿದ್ದಾರೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಆದರೆ ಈ ಅಧಿವೇಶನದಲ್ಲಿ ಖಮೇನಿ ಅವರು ಖುದ್ದು ಭಾಗವಹಿಸಿದ್ದರೇ ಎಂಬ ಬಗ್ಗೆ ಯಾವುದೇ ಸ್ಪಷ್ಟನೆ ದೊರೆತಿಲ್ಲ.

ನೂತನ ಪರಮೋಚ್ಚ ನಾಯಕರಾಗಿ ಅಧಿಕಾರಕ್ಕೇರಿದ ಬಳಿಕ ಮಾತನಾಡಿದ್ದ ಮೊಜ್ತಬಾ ಖಮೇನಿ, ಇರಾನ್ ತನ್ನ ಹುತಾತ್ಮರ ರಕ್ತದ ಪ್ರತೀಕಾರ ತೀರಿಸಿಕೊಳ್ಳುತ್ತದೆ. ಹಾರ್ಮುಜ್ ಜಲಸಂಧಿಯನ್ನು ಮುಚ್ಚುತ್ತದೆ. ಅಮೆರಿಕದ ನೆಲೆಗಳ ಮೇಲೆ ದಾಳಿ ಮಾಡುತ್ತದೆ ಎಂದು ದೂರದರ್ಶನದ ಹೇಳಿಕೆಯಲ್ಲಿ ತಿಳಿಸಿದ್ದರು.

ಬೆಚ್ಚಿಬಿದ್ದರೆ ಟ್ರಂಪ್: ಇಸ್ರೇಲ್ ಜೊತೆಗೂಡಿ ನಿರಂತರ ದಾಳಿ ನಡೆಸಿದ ಅಮೆರಿಕ, ಇದೀಗ ಇರಾನ್ ಪ್ರತೀಕಾರದ ತೀವ್ರತೆಯಿಂದ ಬೆದರಿದಂತೆ ಕಾಣುತ್ತಿದೆ. ಯುಎಸ್–ಇಸ್ರೇಲ್ ನೇತೃತ್ವದ ಜಂಟಿ ಮಿಲಿಟರಿ ಕಾರ್ಯಾಚರಣೆಯ ನಂತರ ಇರಾನ್ ಈ ರೀತಿಯಾಗಿ ಪ್ರತಿಕ್ರಿಯಿಸುತ್ತದೆ ಎಂದು ಅಮೆರಿಕ ನಿರೀಕ್ಷಿಸಿರಲಿಲ್ಲ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿರುವುದೇ ಇದಕ್ಕೆ ಸಾಕ್ಷಿಯಾಗಿದೆ.

ಇರಾನ್ ಜೊತೆಗಿನ ಸಂಘರ್ಷ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇರಾನ್ ಪ್ರತೀಕಾರದ ಪ್ರಮಾಣ ವಿಶೇಷವಾಗಿ ಕತಾರ್, ಸೌದಿ ಅರೇಬಿಯಾ, ಯುನೈಟೆಡ್ ಅರಬ್ ಎಮಿರೇಟ್ಸ್, ಬಹ್ರೇನ್ ಮತ್ತು ಕುವೈತ್ ಸೇರಿದಂತೆ ಗಲ್ಫ್ ರಾಷ್ಟ್ರಗಳನ್ನು ಗುರಿಯಾಗಿಸಿಕೊಂಡದ್ದು ನಮಗೆ ಅಚ್ಚರಿ ಮೂಡಿಸಿದೆ. ಇರಾನ್ ತನ್ನ ತಕ್ಷಣದ ಗುರಿಗಳನ್ನು ಮೀರಿ ದಾಳಿ ಮಾಡುತ್ತದೆ ಎಂದು ನಿರೀಕ್ಷಿಸಿರಲಿಲ್ಲ. ಆ ರಾಷ್ಟ್ರದ ಪ್ರತಿಕ್ರಿಯೆ ಅನಿರೀಕ್ಷಿತ ಮತ್ತು ಆಶ್ಚರ್ಯಕರವಾಗಿದೆ. ಮಧ್ಯಪ್ರಾಚ್ಯದಲ್ಲಿನ ಈ ಎಲ್ಲಾ ರಾಷ್ಟ್ರಗಳ ಮೇಲೆ ಇರಾನ್ ದಾಳಿ ಮಾಡಬಾರದಿತ್ತು ಇರಾನ್ ಗುರಿಯಾಗಿಸಿದ ಕೆಲವು ಕ್ಷಿಪಣಿಗಳು ಇತರ ಕೊಲ್ಲಿ ರಾಷ್ಟ್ರಗಳ ಮೇಲೆ ಅಪ್ಪಳಿಸಿವೆ ಎಂದು ತಿಳಿಸಿದ್ದಾರೆ.

ಆದಾಗ್ಯೂ, ಇರಾನ್ ವಿರುದ್ಧದ ದಾಳಿಯನ್ನು ಸಮರ್ಥಿಸಿಕೊಂಡಿರುವ ಟ್ರಂಪ್, ಅಮೆರಿಕದ ದಾಳಿಯು ಇರಾನ್‌ನ ಸೇನಾ ಸಾಮರ್ಥ್ಯಗಳನ್ನು ಸೀಮಿತಗೊಳಿಸಲು ನೆರವಾಗಿದೆ ಮತ್ತು ಕೊಲ್ಲಿ ರಾಷ್ಟ್ರಗಳಿಗೆ ಎದುರಾಗಿದ್ದ ಬೆದರಿಕೆಯನ್ನು ಕಡಿಮೆ ಮಾಡಿದೆ. ಸದ್ಯ ನಡೆಯುತ್ತಿರುವ ಯುದ್ಧ ತಕ್ಷಣ ನಿಲ್ಲದಿದ್ದರೂ ಮುಂದೆ ಅಂತ್ಯವಾಗುವ ಸಾಧ್ಯತೆಯಿದೆ ಎಂದು ಟ್ರಂಪ್ ಹೇಳಿದ್ದಾರೆ.

ತುರ್ತು ಮಾನವೀಯ ನೆರವು: ಎರಡು ಪಶ್ಚಿಮ ಏಷ್ಯಾದ ದೇಶಗಳಿಗೆ ತುರ್ತು ಮಾನವೀಯ ನೆರವು ನೀಡುವುದಾಗಿ ಚೀನಾ ಮಂಗಳವಾರ ಹೇಳಿದೆ. ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಲಿನ್ ಜಿಯಾನ್, ಸ್ಥಳೀಯ ಜನರು ಎದುರಿಸುತ್ತಿರುವ ಮಾನವೀಯ ದುಃಸ್ಥಿತಿಯನ್ನು ಸರಾಗಗೊಳಿಸುವ ಭರವಸೆಯಲ್ಲಿ ಇರಾನ್, ಜೋರ್ಡಾನ್, ಲೆಬನಾನ್ ಮತ್ತು ಇರಾಕ್‌ಗೆ ತುರ್ತು ಮಾನವೀಯ ನೆರವು ನೀಡಲು ಬೀಜಿಂಗ್ ನಿರ್ಧರಿಸಿದೆ. ಈಗ ನಡೆಯುತ್ತಿರುವ ಸಂಘರ್ಷವು ಇರಾನ್ ಮತ್ತು ಇತರ ಪ್ರಾದೇಶಿಕ ದೇಶಗಳ ಜನರ ಮೇಲೆ ಮಾನವೀಯ ವಿಪತ್ತುಗಳನ್ನು ಉಂಟುಮಾಡಿದೆ. ಚೀನಾ ಈ ಸಂಬಂಧಿತ ದೇಶಗಳ ಜನರ ಮೇಲೆ ಆಳವಾದ ಸಹಾನುಭೂತಿ ಹೊಂದಿದೆ ಎಂದು ಹೇಳಿದ್ದಾರೆ.

ಇರಾನ್ ಅನೇಕ ಮುಗ್ಧ ನಾಗರಿಕರ ಸಾವುನೋವುಗಳನ್ನು ಅನುಭವಿಸಿದೆ. ಲೆಬನಾನ್‌ನಲ್ಲಿ ಸುಮಾರು 800000 ಜನರು ಸ್ಥಳಾಂತರಗೊಂಡಿದ್ದಾರೆ ಜೋರ್ಡಾನ್, ಇರಾಕ್ ಮತ್ತು ಇತರ ದೇಶಗಳ ಮೇಲೂ ಇದರ ಪರಿಣಾಮ ಬೀರಿದೆ. ಶಾಂತಿಯನ್ನು ಉತ್ತೇಜಿಸಲು ಮತ್ತು ಹೋರಾಟವನ್ನು ಕೊನೆಗೊಳಿಸಲು ಚೀನಾ ಎಲ್ಲ ಪ್ರಯತ್ನಗಳನ್ನು ಮುಂದುವರಿಸುತ್ತದೆ ಎಂದು ತಿಳಿಸಿದ್ದಾರೆ.

ಮಿತ್ರ ರಾಷ್ಟ್ರಗಳ ವಿರುದ್ಧ ಟ್ರಂಪ್ ಕೆಂಡ: ಜಾಗತಿಕ ತೈಲ ಮಾರುಕಟ್ಟೆಯಲ್ಲಿ ತಲ್ಲಣ ಸೃಷ್ಟಿಯಾಗಿರುವ ಬೆನ್ನಲ್ಲೇ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಮಿತ್ರರಾಷ್ಟ್ರಗಳ ವಿರುದ್ಧ ಕೆಂಡಕಾರಿದ್ದಾರೆ. ಆಯಕಟ್ಟಿನ ಹೋರ್ಮುಜ್ ಜಲಸಂಧಿಯನ್ನು ಪುನಃ ತೆರೆಯಲು ಮಿಲಿಟರಿ ನೆರವು ನೀಡುವಂತೆ ಅಮೆರಿಕ ನೀಡಿದ್ದ ಕರೆಗೆ ಮಿತ್ರರಾಷ್ಟ್ರಗಳು ಮೌನ ವಹಿಸಿರುವುದು ಅಥವಾ ನಿರಾಕರಿಸಿರುವುದು ಟ್ರಂಪ್ ಅವರನ್ನು ಕೆರಳಿಸಿದೆ. ಈ ಸಂಬಂಧ ಮಂಗಳವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಟ್ರಂಪ್, ನಮಗೆ ಯಾರ ನೆರವೂ ಬೇಕಿಲ್ಲ. ನಾವು ಜಗತ್ತಿನ ಅತ್ಯಂತ ಬಲಿಷ್ಠ ರಾಷ್ಟ್ರ. ನಮ್ಮ ಮಿಲಿಟರಿ ಶಕ್ತಿ ಅಪ್ರತಿಮವಾಗಿದೆ. ನ್ಯಾಟೋ ರಾಷ್ಟ್ರಗಳು ಅಮೆರಿಕದ ರಕ್ಷಣೆಯ ಲಾಭ ಪಡೆಯುತ್ತಿವೆಯೇ ಹೊರತು, ಅಗತ್ಯವಿದ್ದಾಗ ಸಹಾಯಕ್ಕೆ ಬರುತ್ತಿಲ್ಲ ಎಂದು ದೂರಿದ್ದಾರೆ.

ಮುಂದುವರೆದ ಇಸ್ರೇಲ್ ಆಕ್ರಮಣ: ಒಂದೆಡೆ ಮಿತ್ರ ರಾಷ್ಟ್ರ ಅಮೆರಿಕ ಯುದ್ಧ ವಿರಾಮಕ್ಕೆ ಪ್ರಯತ್ನ ನಡೆಸಿದ್ದರೆ,



ಮತ್ತೊಂದೆಡೆ ಇಸ್ರೇಲ್ ಇರಾನ್ ರಾಜಧಾನಿ ಟೆಹರಾನ್ ಹಾಗೂ ಲೆಬನಾನ್ ದೇಶದ ರಾಜಧಾನಿ ಬೈರುತ್ ಮೇಲೆ ಭಾರೀ ವಾಯುದಾಳಿ ನಡೆಸಿದೆ. ಟೆಹರಾನ್ ನಗರದಲ್ಲಿನ ಸೈನಿಕ ಮತ್ತು ಆಡಳಿತ ಸಂಬಂಧಿತ ಪ್ರಮುಖ ಕೇಂದ್ರಗಳು ಹಾಗೂ ಬೈರೂತ್ ನಗರದಲ್ಲಿರುವ ಸೇನಾ ನೆಲೆಗಳ ಮೇಲೆ ತೀವ್ರ ದಾಳಿ ನಡೆಸಲಾಗಿದೆ.

ಇರಾನ್ ಪ್ರತಿದಾಳಿ: ಈ ದಾಳಿಗಳಿಗೆ ಪ್ರತಿಯಾಗಿ ಇರಾನ್ ದೇಶವು ಕ್ಷಿಪಣಿಗಳು ಮತ್ತು ಡ್ರೋನ್ ಮೂಲಕ ಇಸ್ರೇಲ್ ಪ್ರದೇಶಗಳ ಮೇಲೆ ಪ್ರತಿದಾಳಿ ನಡೆಸಿದೆ ಎಂದು ತಿಳಿದುಬಂದಿದ್ದು, ಪರಿಣಾಮ ಮಧ್ಯಪ್ರಾಚ್ಯ ಉದ್ವಿಗ್ನತೆ ಮತ್ತಷ್ಟು ಹೆಚ್ಚಾಗಿದೆ. ಲೆಬನಾನ್‌ನಲ್ಲಿ ದಾಳಿಗಳ ಪರಿಣಾಮವಾಗಿ ಅನೇಕ ನಾಗರಿಕರು ತಮ್ಮ ಮನೆಗಳನ್ನು ತೊರೆದು ಸುರಕ್ಷಿತ ಸ್ಥಳಗಳಿಗೆ ತೆರಳುತ್ತಿದ್ದಾರೆ. ಹಲವೆಡೆ ಭಾರೀ ಹಾನಿ ಉಂಟಾಗಿದ್ದು, ಸಾವು–ನೋವುಗಳ ಸಂಖ್ಯೆ ಹೆಚ್ಚುತ್ತಿವೆ ಎನ್ನಲಾಗಿದೆ.

ಅಮೆರಿಕ ಅಧ್ಯಕ್ಷ ಟ್ರಂಪ್ ಇಕ್ಕಟ್ಟಿಗೆ!

ರಾತ್ರಿಯಿಡೀ ಇಸ್ರೇಲ್ ನಡೆಸಿದ ದಾಳಿಯಲ್ಲಿ ಇರಾನ್ ಭದ್ರತಾ ಮುಖ್ಯಸ್ಥ ಲಾರಿಜಾನಿ ಹತ್ಯೆ

ಟೆಲ್ ಅವಿವ್: ಇರಾನ್‌ನಲ್ಲಿ ರಾತ್ರೋರಾತ್ರಿ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಇರಾನ್ ಭದ್ರತಾ ಮಂಡಳಿಯ ಮುಖ್ಯಸ್ಥ ಅಲಿ ಲಾರಿಜಾನಿ ಅವರನ್ನು ಹತ್ಯೆ ಮಾಡಲಾಗಿದೆ ಎಂದು ಇಸ್ರೇಲ್ ರಕ್ಷಣಾ ಸಚಿವ ಕಾಟ್ಜ್ ಅವರು ಮಂಗಳವಾರ ಹೇಳಿದ್ದಾರೆ. ಆದರೆ ಈ ಲಾರಿಜಾನಿ ಹತ್ಯೆ ಬಗ್ಗೆ ಇರಾನ್ ನಿಂದ ಇನ್ನೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ದಾಳಿಯಲ್ಲಿ ಲಾರಿಜಾನಿ ಸಾವನ್ನಪ್ಪಿದ್ದಾರೆಯೇ ಅಥವಾ ಗಾಯಗೊಂಡಿದ್ದಾರೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ ಎಂದು ಅಧಿಕಾರಿಗಳ ಹೇಳಿಕೆ ಉಲ್ಲೇಖಿಸಿ ಟೈಮ್ಸ್ ಆಫ್ ಇಸ್ರೇಲ್ ವರದಿ ಮಾಡಿದೆ. ಏತನ್ಮಧ್ಯೆ, ಇರಾನ್‌ನಲ್ಲಿ ಇತ್ತೀಚೆಗೆ ನಡೆದ ಮತ್ತೊಂದು ಇಸ್ರೇಲಿ ವೈಮಾನಿಕ ದಾಳಿಯು ಪ್ಯಾಲೆಸ್ಟೀನಿಯನ್ ಇಸ್ಲಾಮಿಕ್ ಜಿಹಾದಿ ನಾಯಕ ಅಕ್ರಮ್ ಅಲ್–ಅಜೌರಿ ಮತ್ತು ಭಯೋತ್ಪಾದಕ ಗುಂಪಿನ ಇತರ ಉನ್ನತ ಅಧಿಕಾರಿಗಳನ್ನು ಟಾರ್ಗೆಟ್ ಮಾಡಲಾಗಿದೆ ಎಂದು ರಕ್ಷಣಾ ಮೂಲಗಳು ತಿಳಿಸಿವೆ.

ಟೈಮ್ಸ್ ಆಫ್ ಇಸ್ರೇಲ್ ಪ್ರಕಾರ, ಇಸ್ರೇಲ್ ರಕ್ಷಣಾ ಪಡೆಗಳ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಇಯಾಲ್ ಜಮೀರ್ ಈ ವಿವರಗಳನ್ನು ದೃಢಪಡಿಸಿದ್ದಾರೆ.

ಇದು ಇತ್ತೀಚಿನ ದಿನಗಳಲ್ಲಿ ಇರಾನ್‌ನಲ್ಲಿ ಬಾಹ್ಯ ಅಂಶಗಳ ವಿರುದ್ಧ ನಡೆಸಲಾದ ನಿರ್ಮೂಲನೆಗಳ ಜೊತೆಗೆ, ಪ್ಯಾಲೆಸ್ಟೀನಿಯನ್ ಕ್ಷೇತ್ರಕ್ಕೂ ಸಂಬಂಧಿಸಿದೆ" ಎಂದು ಜಮೀರ್ ಅವರು ಇಸ್ಲಾಮಿಕ್ ಜಿಹಾದಿ ಅಧಿಕಾರಿಗಳನ್ನು ಉಲ್ಲೇಖಿಸಿ ಹೇಳಿದ್ದಾರೆ.

IDF ವೈಮಾನಿಕ ಕಾರ್ಯಾಚರಣೆಯಲ್ಲಿ "ಟೆಹ್ರಾನ್‌ನ ಕಮಾಂಡ್ ಕೇಂದ್ರಗಳ ಮೇಲೆ ಡಜನ್ಗಟ್ಟಲೆ ಕ್ಷಿಪಣಿ ದಾಳಿ ನಡೆಸಲಾಗಿದ್ದು, ಗಂಗಿ, ಬ್ಯಾಲಿಸ್ಟಿಕ್ ಕ್ಷಿಪಣಿ ಮತ್ತು ವಾಯು ರಕ್ಷಣಾ ಸಂಗ್ರಹಣಾ ತಾಣಗಳನ್ನು ಹೊಡೆದುರುಳಿಸಲಾಗಿದೆ' ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಲಾಗಿದೆ.

ಇರಾನ್‌ನ ಬಸಿಜ್ ಪಡೆಗಳ ಮುಖ್ಯಸ್ಥನ ಹತ್ಯೆ: ಸೋಮವಾರ ರಾತ್ರಿ ನಡೆದ ದಾಳಿಯಲ್ಲಿ ಇರಾನ್‌ನ ಬಸಿಜ್ ಪಡೆ ಕಮಾಂಡರ್ ಘೋಲಮ್ರೆಜಾ ಸೊಲೈಮಾನಿ ಅವರನ್ನು ಸಹ ಕೊಂದಿರುವುದಾಗಿ ಇಸ್ರೇಲ್ ಸೇನೆ ತಿಳಿಸಿದೆ.

ನಕ್ಕರೆ ಅದೇ ಸ್ವರ್ಗ

ತಂದೆ : ಮಗಾ, ನಿಮ್ಮಮ್ಮ ಯಾಕೆ ಸುಮ್ಮನೆ ಕೂತಿದ್ದಾಳೆ
ಮಗ : ಅವರು ಲಿಪ್‌ಸ್ಟಿಕ್ ಕೇಳಿದ್ರು, ನಾನು ಫೆವಿಕ್ವಿಕ್ ಕೊಟ್ಟೆ!
ತಂದೆ : ನೂರು ವರ್ಷ ಬಾಳು ನನ್ಮಗನೇ!
ಎಲ್ಲರಿಗೂ ನಿನ್ನಂಥಾ ಮಗನೇ ಹುಟ್ಟಲಿ.!!

ಮೈಸೂರು ಮಿತ್ರ
ಬುಧವಾರ, ಮಾರ್ಚ್ 18, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ರೂಪ ಚಿಪ್ಪಿನಂತೆ ಇದ್ರೂ ಪರವಾಗಿಲ್ಲ.
ಆದ್ರೆ ವ್ಯಕ್ತಿತ್ವ ಚಿಪ್ಪಿನೊಳಗಿನ ಮುತ್ತಿನಂತೆ ಇರಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನೆ ಮಗ ಉಂಡಷ್ಟೂ ಒಳ್ಳೇದು, ಮಖೆ ಮಳೆ ಬಂದಷ್ಟೂ ಒಳ್ಳೇದು.

ನಿಮ್ಮ ಪತ್ರಗಳು

ಅಯ್ಯೋ.. ಮೈಸೂರಿಗೆ ಏನಾಗಿದೆ?

ಮಾನ್ಯರೆ,



ಮುಂಜಾನೆ ಸುದ್ದಿ ಪತ್ರಿಕೆಗಳನ್ನು ತೆರೆದರೆ ಸಾಕು, ಮೈಸೂರು ನಗರದ ಸೌಂದರ್ಯವನ್ನು ಅಂದಗೆಡಿಸಿರುವ ಮಹತ್ಕಾರ್ಯದ ಒಂದು ಸುದ್ದಿ ಇದ್ದೇ ಇರುತ್ತದೆ. ಮೈಸೂರಿಗೆ ಏನಾಗಿದೆ? ಹೃದಯಭಾಗ ಕೆ.ಆರ್. ವೃತ್ತದಲ್ಲಿ ಪ್ರತಿಮೆಯಾಗಿ ನಿಂತಿರುವ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಯಾಕಾದರೂ ಇನ್ನೂ ಇಲ್ಲೇ ಇರುವೆ ಎಂದು ನೊಂದುಕೊಳ್ಳುತ್ತಿರಬಹುದು. ಅಭಿವೃದ್ಧಿಗೆ ಪಣ ತೊಟ್ಟಿರುವ ಇವತ್ತಿನ ಪುಣ್ಯಾತ್ಮರು ಮುಂದೊಂದು ದಿನ ಇವರ ಪ್ರತಿಮೆಯನ್ನೂ ಕೆಡವಿ ಏನು ಕಟ್ಟುತ್ತಾರೋ?

ಚಾಮರಾಜ ಒಡೆಯರ್ ವೃತ್ತದ ಪಾದಚಾರಿ ಮಾರ್ಗದಲ್ಲಿ ಟಾಂಗಾ ನಿಲ್ದಾಣ ನಿರ್ಮಿಸುತ್ತಿದ್ದಾರಂತೆ. ಮಹಾರಾಜರು ಮುಂದಾಲೋಚನೆಯಿಂದ ಯೋಜನಾಬದ್ಧವಾಗಿ ನಿರ್ಮಿಸಿರುವ ಮೈಸೂರನ್ನು ಹಾಳುಮಾಡುವುದಕ್ಕೆ ಇದಕ್ಕಿಂತ ಇನ್ನೇನು ಬೇಕು? ರೈಲ್ವೇ ನಿಲ್ದಾಣದ ಬಳಿ ಪಾದಚಾರಿ ಮಾರ್ಗದಲ್ಲಿ ಕನಿಷ್ಠ ಅಗಲವನ್ನು ಬಿಡದೆ ಶೌಚಾಲಯ ನಿರ್ಮಿಸಿರುವುದು.... ಹುಡುಕಿದರೆ ಬಹಳಷ್ಟಿವೆ!

ಕೇಂದ್ರ ಸರ್ಕಾರದ ಪ್ರಸಾದ್ ಮತ್ತು ಸ್ವದೇಶಿ ದರ್ಶನ್–2 ಯೋಜನೆಗಳಡಿ ಪ್ರವಾಸೋದ್ಯಮ ಇಲಾಖೆಯವರು ಕೈಗೊಳ್ಳುತ್ತಿರುವ ಎಲ್ಲಾ ಕಾಮಗಾರಿಗಳು ಸಾರ್ವಜನಿಕರ ಇಚ್ಛೆಗೆ ವಿರುದ್ಧವಾಗಿವೆ. ಸರ್ಕಾರವು ಸದುದ್ದೇಶದಿಂದ ಕೊಡುವ ಅನುದಾನವನ್ನು ಸಮರ್ಪಕವಾಗಿ ಬಳಸುವಲ್ಲಿ ವಿಫಲರಾಗುತ್ತಿದ್ದೇವೆ. ಅದನ್ನು ಜನರಿಗೆ ಅನುಕೂಲವಾಗುವ ಯೋಜನೆ ರೂಪಿಸುವ ಯೋಗ್ಯತೆಯೇ ನಿಮಗೆ ಇಲ್ಲವಾಗಿದೆಯೇ?

ಚಾಮುಂಡಿ ಬೆಟ್ಟದ ಸುತ್ತಲಿನ ಪ್ರದೇಶವು ಬಫರ್ ಝೋನ್ ಬಿಡದಂತೆ ಒತ್ತುವರಿ ಆಗಿರುವುದು. ಅದರ ಬುಡದಲ್ಲೇ ಎಂಡಿಎ ಹಾಗೂ ಖಾಸಗಿಯವರು ಬಡಾವಣೆಗಳನ್ನು ನಿರ್ಮಿಸುತ್ತಿರುವುದು. ಲಲಿತಮಹಲ್ ಬಳಿಯ ಹೆಲಿಪ್ಯಾಡ್ ಹಾಗೂ ತಿ.ನರಸೀಪುರ ರಸ್ತೆ ಮತ್ತು ಲಲಿತಮಹಲ್ ನಡುವಿನ ಜಾಗದಲ್ಲಿ ರಾಷ್ಟ್ರೀಯ ಹೆದ್ದಾರಿಯ ಚರಂಡಿ ಸಮೇತ ನಮ್ಮದೆಂದು ಬೇಲಿ ಅಳವಡಿಸಿರುವುದು. ಹಾಗೆಯೇ ಅಲ್ಲೇ ಪಕ್ಕದಲ್ಲಿ ಹೆರಿಟೇಜ್ ಪಾರ್ಕ್ ಎಂದು ಬಿಟ್ಟಿರುವ ಸ್ಥಳವು ಸುಡುಗಾಡಿನಂತೆ ಇರುವುದು ಎಲ್ಲವೂ ಬಹಳ ವರ್ಷಗಳಿಂದ ಇಲ್ಲಿ ನೆಲೆಸಿರುವ ನಾಗರಿಕರಿಗೆ ನೋವು ತರುತ್ತಿವೆ. ನಗರಕ್ಕೆ ತ್ವರಿತವಾಗಿ ಭ್ರಷ್ಟರಿಲ್ಲದ ಟಾಸ್ಕ್ ಫೋರ್ಸ್ ಪಡೆ ಬೇಕಾಗಿದೆ. ವಾಸ್ತವದಲ್ಲಿ ಭ್ರಷ್ಟರಲ್ಲದವರ ಸೇವೆಯನ್ನು ಪಡೆದುಕೊಳ್ಳುವುದಕ್ಕೆ ಯಾರು ಸಿದ್ಧರಿದ್ದಾರೆ?

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ಕುವೆಂಪುನಗರ ಸಂಚಾರಿ ಪೊಲೀಸರ ಗಮನಕ್ಕೆ!

ಮಾನ್ಯರೆ,

ಮೈಸೂರಿನ ಕುವೆಂಪು ನಗರದ ನೃಪತುಂಗ ರಸ್ತೆಯ ಡಾಲ್ಫಿನ್,ನಂದಿನಿ ಬೂತ್, ಕಾಫಿಕಟ್ಟೆ ಬಳಿ ರಸ್ತೆಯ ನಡುವೆ ಒಂದು ಮರ ಇದೆ. ಈ ಮರದ ಕೆಳಗೆ ನೆರಳಿದೆ ಎಂಬ ಏಕೈಕ ಕಾರಣಕ್ಕೆ ಕಾರು ಮಾಲೀಕರು ರಸ್ತೆಯ ಮಧ್ಯೆಯೇ ಕಾರುಗಳನ್ನು ನಿಲ್ಲಿಸಿ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿ ಉಂಟು ಮಾಡುತ್ತಿದ್ದಾರೆ. ದಯವಿಟ್ಟು ಕ್ರಮ ಕೈಗೊಳ್ಳಿ. –ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

HPV ಲಸಿಕೆ ಬಗ್ಗೆ ಪ್ರಚಾರ, ಜಾಗೃತಿ ಅಗತ್ಯ

ಮಾನ್ಯರೆ,

ಹೆಚ್‌ಪಿವಿ (ಹ್ಯೂಮನ್ ಪ್ಯಾಪಿಲೋಮಾ ವೈರಸ್) ವೈರಸ್ ಮಹಿಳೆಯರಲ್ಲಿ ಗರ್ಭಾಶಯದ ಕ್ಯಾನ್ಸರ್ ಉಂಟಾಗಲು ಪ್ರಮುಖ ಕಾರಣವಾಗುತ್ತದೆ. ಈ ರೋಗವನ್ನು ತಡೆಗಟ್ಟಲು ಹೆಚ್‌ಪಿವಿಲಸಿಕೆ ಅತ್ಯಂತ ಪರಿಣಾಮಕಾರಿ ಕ್ರಮ ಎಂದು ವೈದ್ಯರು ತಿಳಿಸಿದ್ದಾರೆ.

ದುರಾದೃಷ್ಟವಶಾತ್, ನಮ್ಮ ಸಮಾಜದಲ್ಲಿ ಇನ್ನೂ ಈ ಲಸಿಕೆಯ ಬಗ್ಗೆ ಸಾಕಷ್ಟು ಅರಿವು ಇಲ್ಲ. ಹಲವರು ಇದರ ಅಗತ್ಯತೆ ಮತ್ತು ಪ್ರಯೋಜನಗಳ ಬಗ್ಗೆ ತಿಳಿದಿಲ್ಲ. ಇದರಿಂದ ಅನೇಕ ಯುವತಿಯರು ಮತ್ತು ಮಹಿಳೆಯರು ಭವಿಷ್ಯದಲ್ಲಿ ಗಂಭೀರ ಆರೋಗ್ಯ ಸಮಸ್ಯೆಗಳನ್ನು ಎದುರಿಸುವ ಸಾಧ್ಯತೆ ಇದೆ.

ಆದ್ದರಿಂದ ಸರ್ಕಾರ, ಆರೋಗ್ಯ ಇಲಾಖೆ ಮತ್ತು ಶಿಕ್ಷಣ ಸಂಸ್ಥೆಗಳು ಸೇರಿ HPV ಲಸಿಕೆಯ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬೇಕು. ಶಾಲೆಗಳು ಮತ್ತು ಕಾಲೇಜುಗಳಲ್ಲಿ ಆರೋಗ್ಯ ಶಿಬಿರಗಳನ್ನು ಆಯೋಜಿಸಿ ವಿದ್ಯಾರ್ಥಿನಿಯರಿಗೆ ಹಾಗೂ ಪೋಷಕರಿಗೆ ಸರಿಯಾದ ಮಾಹಿತಿ ನೀಡುವುದು ಅಗತ್ಯ. ಜೊತೆಗೆ ಈ ಲಸಿಕೆ ಎಲ್ಲರಿಗೂ ಸುಲಭವಾಗಿ ಮತ್ತು ಕಡಿಮೆ ವೆಚ್ಚದಲ್ಲಿ ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು. ಸಮಾಜದ ಆರೋಗ್ಯವನ್ನು ಕಾಪಾಡಲು HPV ಲಸಿಕೆ ಕುರಿತು ಹೆಚ್ಚಿನ ಪ್ರಚಾರ ಮತ್ತು ಜಾಗೃತಿ ಮೂಡಿಸುವುದು ಅತ್ಯಂತ ಅಗತ್ಯವಾಗಿದೆ. ಈ ವಿಷಯಕ್ಕೆ ಸಂಬಂಧಿಸಿದ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಮನವಿ.

–ಸಿಂಚನ ಸೋಮಶೇಖರ್, ಮೈಸೂರು.

ಟೆಲಿಕಾಂ ಲೂಟಿ: 28 ದಿನಗಳ ಮಾಯಾಜಾಲದ ವಂಚನೆ!

ಮಾನ್ಯರೇ,

ಟೆಲಿಕಾಂ ಕಂಪನಿಗಳು ನಡೆಸುತ್ತಿರುವ 28 ದಿನಗಳ ರೀಚಾರ್ಜ್ ಚಕ್ರ ಸಾಮಾನ್ಯ ಜನರ ರಕ್ತ ಹೀರುವ ತಂತ್ರವಲ್ಲದೆ ಮತ್ತೇನೂ ಅಲ್ಲ. ಪ್ರತಿ ತಿಂಗಳು 2–3 ದಿನಗಳನ್ನು ಉದ್ದೇಶಪೂರ್ವಕವಾಗಿ ಕಡಿತಗೊಳಿಸುವ ಮೂಲಕ, ಗ್ರಾಹಕರು ವರ್ಷಕ್ಕೆ 12ರ ಬದಲಿಗೆ 13 ಬಾರಿ ರೀಚಾರ್ಜ್ ಮಾಡುವ ಅನಿವಾರ್ಯತೆ ಸೃಷ್ಟಿಸಲಾಗಿದೆ. ಇದು ಸೇವೆಯಲ್ಲ ಕಾರ್ಪೊರೇಟ್ ಕಂಪನಿಗಳ ಪಕ್ಕಾ ಲೂಟಿ.


ಯೋಜನೆ ಮುಗಿದ ಕೂಡಲೇ ಇನ್ಕಮಿಂಗ್ ಕರೆ ಮತ್ತು ಬ್ಯಾಂಕಿಂಗ್ ಓ.ಟಿ.ಪಿಗಳನ್ನು ಬಂದ್ ಮಾಡುವುದು ಅಮಾನವೀಯ. ಸುಮಾರು 90 ಕೋಟಿ ಪ್ರಿಪೇಯ್ಡ್ ಬಳಕೆದಾರರು ಈ ತಂತ್ರಕ್ಕೆ ಬಲಿಯಾಗುತ್ತಿದ್ದಾರೆ. ಬಡವರು ಮತ್ತು ವೃದ್ಧರು ತಮ್ಮ ಸಂವಹನದ ಹಕ್ಕನ್ನೇ ಕಳೆದುಕೊಳ್ಳುತ್ತಿದ್ದಾರೆ. ಪ್ರತಿ ವರ್ಷ ಹೆಚ್ಚುವರಿ ತಿಂಗಳ ಹಣ ಪೀಕುತ್ತಿರುವ ಈ ಸಿಮ್ ಸ್ಕ್ಯಾಂ ಅನ್ನು ಸರ್ಕಾರ ಮೌನವಾಗಿ ನೋಡುತ್ತಿರುವುದು ದುರಂತ. ಕೂಡಲೇ 31 ದಿನಗಳ ಕಡ್ಡಾಯ ಪ್ಲಾನ್ ಜಾರಿಯಾಗಲಿ. ಜನಸಾಮಾನ್ಯರನ್ನು ಮೂರ್ಖರನ್ನಾಗಿಸುವ ಈ ಹಗಲು ದರೋಡೆಗೆ ಕೂಡಲೇ ಕಡಿವಾಣ ಬೀಳಬೇಕು.

– ಡಾ.ಎಚ್.ಕೆ. ವಿಜಯಕುಮಾರ, ಮೈಸೂರು.

ಅಮೂಲ್ಯ ನೆನಪುಗಳ ಫ್ರೇಂ....

–ಆರ್.ಜಿ.ಸಿಂಗ್
ಕಾರ್ಯದರ್ಶಿ, ರಾಮಸನ್ಸ್ ಕಲಾ ಪ್ರತಿಷ್ಠಾನ

'ಮೈಸೂರು ಮಿತ್ರ', ರಾಮ್ ಸನ್ಸ್ ಕಲಾ ಪ್ರತಿಷ್ಠಾನದೊಂದಿಗೆ ಪ್ರತಿ ಬುಧವಾರ 'ಅಮೂಲ್ಯ ನೆನಪುಗಳ ಫ್ರೇಂ' ಅಂಕಣದಲ್ಲಿ ಗತಕಾಲದ ಅಪರೂಪದ ಚಿತ್ರ–ವಿವರಣೆ ಪ್ರಕಟಿಸಲಿದೆ.–ಸಂ




ಕೈಯಿಂದ ರಚಿಸಿದ ಈ ಚಿತ್ರ ಸಂಕಲನವನ್ನು (ಫೋಟೋ ಮಾಂಟೇಜ್) ಬಹುಶಃ ಮೈಸೂರಿನ ಗಣ್ಯಾತಿಗಣ್ಯರಿಗೆ ನೆನಪಿನ ಕಾಣಿಕೆಯಾಗಿ ನೀಡುವ ಪರಿಪಾಠ ಇತ್ತು.

ಇಸ್ಪೀಟೆಲೆಗಳಲ್ಲಿ ಬಳಸುವ ಸ್ಪೇಡ್‌ಗಳ ಮಾದರಿಯನ್ನು ಹೋಲುವ ಎಲೆಗಳ ಒಳಗೆ ಆರು ವೈಯಕ್ತಿಕ ಭಾವಚಿತ್ರಗಳನ್ನು ಇರಿಸಲಾಗಿದೆ. ಮಧ್ಯಭಾಗದಲ್ಲಿ ಅಂಡಾಕಾರದ (ಮೊಟ್ಟೆ ವಿನ್ಯಾಸ) ಚಿತ್ರವು ಹನ್ನೊಂದು ವರ್ಷದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 1895ರ ಸೆಪ್ಟೆಂಬರ್ 28ರ ದಸರಾ ದರ್ಬಾರ್ ಅನ್ನು ಅನಾವರಣಗೊಳಿಸಿದೆ. ಅವರ ಸುತ್ತಲೂ ಆಸ್ಥಾನಿಕರು ಸುತ್ತುವರೆದಿರುವುದನ್ನೂ ಕಾಣಬಹುದು. ಅವರ ತಾಯಿ ಕೆಂಪನಂಜಮ್ಮಣ್ಣಿ ವಾಣಿವಿಲಾಸ ಸನ್ನಿಧಾನ ಮತ್ತು ಮೂವರು ಕೌನ್ಸಿಲ್ ಸದಸ್ಯರ ರಾಜಪ್ರತಿನಿಧಿತ್ವದಲ್ಲಿ 1895ರ ಫೆಬ್ರವರಿ 1ರಂದು ಒಡೆಯರ್ ರಾಜವಂಶದ 24ನೇ ಮಹಾರಾಜರಾಗಿ ಅವರಿಗೆ ಪಟ್ಟಾಭಿಷೇಕ ಮಾಡಲಾಯಿತು.

ಕೆಳಗಿನ ಎಲೆಯಿಂದ (ಸ್ಪೇಡ್) ಹೊರಹೊಮ್ಮಿರುವ ಎಲೆಗಳಲ್ಲಿ ಉಳಿದ ಚಿತ್ರಗಳಿದ್ದು, ಅವು ಅಂಡಾಕಾರದ ಚಿತ್ರವನ್ನು ಸುತ್ತುವರೆದಿವೆ. ಕೆಳಗಿನ ಎಲೆಯೊಳಗೆ ಚಾಮರಾಜ ಒಡೆಯರ್ ಅವರ ಚಿತ್ರವಿದ್ದು, ಅದರ ಕೆಳಗೆ ಆಂಗ್ಲ ಭಾಷೆಯಲ್ಲಿ 'ಚಾಮರಾಜ ಒಡೆಯರ್ ಬಹದ್ದೂರ್ ಜಿಸಿಎಸ್‌ಐ (ಭಾರತದ ಗ್ರ್ಯಾಂಡ್ ಕರ್ನಲ್ ಸ್ಟಾರ್) ಮೈಸೂರಿನ ದಿವಂಗತ ಮಹಾರಾಜ' ಎಂಬ ಉಲ್ಲೇಖವಿದೆ. ಬಲಭಾಗದಲ್ಲಿ ಮೇಲ್ಮುಖವಾಗಿ ರಾಜಕುಮಾರಿ ಜಯಲಕ್ಷ್ಮಣ್ಣಿ, ರಾಜಕುಮಾರಿ ಚಲುವಾಗಮಣಿ, ಮೈಸೂರಿನ ಮಹಾರಾಜ ಕೃಷ್ಣರಾಜ ಒಡೆಯರ್, ರಾಜಕುಮಾರ ಕಾಂತಿ ನರಸರಾಜ ಒಡೆಯರ್ ಮತ್ತು ರಾಜಕುಮಾರಿ ಕೃಷ್ಣಜಮ್ಮಣ್ಣಿ ಅವರ ಭಾವಚಿತ್ರಗಳನ್ನು ಕಾಣಬಹುದು.

ಮೋಡಗಳ ನಡುವೆ ಎರಡು ಹಾರುವ ಕೆರೂಬ್‌ಗಳು ಮೇಲಿನಿಂದ ಹೂಗಳನ್ನು ಅರ್ಪಿಸುತ್ತಿರುವುದನ್ನು ಕಾಣಬಹುದು. ಸ್ಪೇಡ್ ಆಕಾರದ ಫೋಟೋ ಕಟೌಟ್‌ಗಳು ಯುರೋಪಿಯನ್ ವುಡ್‌ಕಟ್ ವಿನ್ಯಾಸಗಳಿಂದ ಸ್ಫೂರ್ತಿ ಪಡೆದಂತೆ ಹೂವಿನ ಚಾಪ್ಲೆಟ್‌ಗಳಿಂದ ಸುತ್ತುವರೆದಿವೆ. ಈ ಇಡೀ ಚಿತ್ರ ಸಂಯೋಜನೆಯು ರಾಜಮನೆತನದ ವಂಶವೃಕ್ಷದ ನಿರ್ದಿಷ್ಟ ಶಾಖೆಯನ್ನು ಅನುಕರಿಸುತ್ತದೆ. ತಂದೆಯಿಂದ ಮಗನಿಗೆ ರಾಜತ್ವದ ವರ್ಗಾವಣೆಯನ್ನು ಇಲ್ಲಿ ದೃಶ್ಯಾತ್ಮಕವಾಗಿ ದಾಖಲಿಸಿ ಬಿಂಬಿಸಲಾಗಿದೆ. ಅಲ್ಲದೆ, ಅವರ ಸಹೋದರರ ಬೆಂಬಲದೊಂದಿಗೆ ಇದು ಸಾಧ್ಯವಾಯಿತು ಎಂಬುದೂ ಇಲ್ಲಿ ದಾಖಲಾಗಿದೆ. ಇದು ಕೈಯಿಂದ ಚಿತ್ರಿಸಿದ ಫೋಟೋ ಮಾಂಟೇಜ್‌ನ ಸೆಪಿಯಾ ಬಣ್ಣದ ಚಿತ್ರವಾಗಿದೆ. ಹೆಸರುಗಳ ಅಕ್ಷರಗಳನ್ನು ಮೂಲ ಛಾಯಾಚಿತ್ರದಲ್ಲಿರುವಂತೆಯೇ ಉಳಿಸಿಕೊಂಡಿರುವುದು ಗಮನಾರ್ಹ.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಭಕ್ತ ಶ್ರೇಷ್ಠರಾದ ಆಳ್ವಾರರು–2

ತಿರುಪ್ಪಾಣಾಳ್ವಾರ್ ತಮಿಳುನಾಡಿನ ತಿರುಚಿನಾಪಳ್ಳಿಯ ಸಮೀಪದ ಒಂದು ಗ್ರಾಮ ಉರ್‍ಯೆಯೂರ್. ಅಲ್ಲಿ ಹುಟ್ಟಿದ ತಿರುಪ್ಪಾಣಾಳ್ವಾರ್ ಜನ್ಮದಿಂದಲೇ ಭಗವದ್ಭಕ್ತರು. ಭಗವಂತನ ಮಹಿಮೆಯನ್ನು ಕೊಂಡಾಡುತ್ತಾ ಅವನ ಸ್ತುತಿಯನ್ನೇ ಹಾಡುತ್ತಾ ಆ ಊರಿನ ಶ್ರೀರಂಗನಾಥಸ್ವಾಮಿಯ ದೇವಸ್ಥಾನದ ಎದುರಿನಲ್ಲಿ ಗುಡಿಸಲನ್ನು ಕಟ್ಟಿಕೊಂಡು ವಾಸಿಸುತ್ತಿದ್ದರು. ಅವರನ್ನು ಸಮಾಜವು ಅಂತ್ಯಜರೆಂದು ಪರಿಗಣಿಸಿದ ಕಾರಣದಿಂದ ಅವರಿಗೆ ದೇವಾಲಯ ಪ್ರವೇಶವಿರಲಿಲ್ಲ. ದೇವಾಲಯದ ಹೊರಗೇ ನಿಂತು ಭಕ್ತಿಯಿಂದ ಹಾಡುತ್ತಿದ್ದರು.

ದೇವಸ್ಥಾನದಲ್ಲಿ ಲೋಕಸಾರಂಗ ಮುನಿಗಳೆಂಬ ಮಹಾತ್ಮರು ಭಗವಂತನ ಕೈಂಕರ್ಯವನ್ನು ಮಾಡುತ್ತಿದ್ದರು. ಶ್ರೀರಂಗನಾಥಸ್ವಾಮಿಯ ಅಭಿಷೇಕಕ್ಕೆ ನದಿಯಿಂದ ಪವಿತ್ರ ಜಲವನ್ನು ಅವರು ಬಿಂದಿಗೆಯಲ್ಲಿ ತರುತ್ತಿದ್ದರು. ಅವರ ಸಂಗಡ ಅರ್ಚಕರೊಬ್ಬರೂ ಇದ್ದರು. ಆ ಸಮಯದಲ್ಲಿ ಭಕ್ತ ತಿರುಪ್ಪಾಣಿ ಬಾಗಿಲಿಗೆ ಎದುರಾಗಿ ನಿಂತು ಹಾಡುತ್ತಿದ್ದನು. ದಾರಿಯಿಂದ ದೂರ ಸರಿ ಎಂದು ಅರ್ಚಕರು ಹೇಳಿದರು. ಭಕ್ತಿಪಾರವಶ್ಯದಲ್ಲಿದ್ದ ತಿರುಪ್ಪಾಣಿಗೆ ಅರ್ಚಕರು ಹೇಳಿದ ಮಾತು ಕೇಳಿಸಲಿಲ್ಲ. ಹಾಗೇ ನಿಂತು ಕೈ ಮುಗಿದು ಹಾಡುತ್ತಿದ್ದನು. ಲೋಕ ಸಾರಂಗ ಮುನಿಗಳಿಗೆ ಕೋಪ ಬಂತು. ಅಲ್ಲಿದ್ದ ಕಲ್ಲಿನ ಚೂರನ್ನು ತೆಗೆದುಕೊಂಡು ಜೋರಾಗಿ ಎಸೆದರು. ಕಲ್ಲು ತಿರುಪ್ಪಾಣಿಯ ತಲೆಗೆ ತಗುಲಿ ಗಾಯವಾಗಿ ರಕ್ತ ಬಂದಿತು. ಆಗ ಲೋಕ ಸಾರಂಗ ಮುನಿಗಳಿಗೆ ಮನಸ್ಸಿನಲ್ಲಿ ಪಶ್ಚಾತ್ತಾಪ ಉಂಟಾಯಿತು. ಭಗವದ್ಭಕ್ತನಿಗೆ ಹೊಡೆದೆನಲ್ಲಾ ಎಂದು ಮರುಗುತ್ತಾ ದೇವಾಲಯದೊಳಕ್ಕೆ ಬಂದರು. ಆದರೆ ಭಗವಂತ ಪ್ರಸನ್ನತೆಯಿಂದ ಕೈಂಕರ್ಯವನ್ನು ಸ್ವೀಕರಿಸಲಿಲ್ಲ ಎಂಬ ಭಾವನೆ ಅವರಲ್ಲಿ ಉಂಟಾಯಿತು. ಅಂದು ರಾತ್ರಿ ಅವರು ಆಲೋಚನೆ ಮಾಡಿದರು. ಭಕ್ತರಲ್ಲಿ ಜಾತಿ, ಭೇದ ಉಂಟೆ? ಸದಾ ಭಕ್ತಿಯಲ್ಲಿ ಮುಳುಗಿ ಹಾಡುತ್ತಿರುವ ತಿರುಪ್ಪಾಣಿಗೆ ಶ್ರೀರಂಗನಾಥನ ದರ್ಶನ ಮಾಡಲು ಅವಕಾಶ ಇಲ್ಲದಿರುವುದು ಸರಿಯೇ? ಇತ್ಯಾದಿ.


ಅದೇ ರಾತ್ರಿ ಲೋಕ ಸಾರಂಗ ಮುನಿಗಳಿಗೆ ಸ್ವಪ್ನವಾಯಿತು. ಕನಸಿನಲ್ಲಿ ಶ್ರೀರಂಗನಾಥಸ್ವಾಮಿಯೇ ಕಾಣಿಸಿಕೊಂಡು ಹೇಳಿದನು – ನನ್ನ ಅಂತರಂಗದ ಭಕ್ತೋತ್ತಮರಾದ ತಿರುಪ್ಪಾಣಿಗೆ ನೀವು ಕಲ್ಲಿನಿಂದ ಹೊಡೆದಿರಲ್ಲ? ಆ ಪೆಟ್ಟು ನನ್ನ ತಲೆಗೆ ತಗುಲಿತು. ತಿರುಪ್ಪಾಣಿ ನನಗೆ ಅತ್ಯಂತ ಪ್ರಿಯರು. ನಿಮ್ಮಿಂದ ಅಪಚಾರವಾಯಿತು.

ಲೋಕ ಸಾರಂಗ ಮುನಿಗಳು ಭಗವಂತನಿಗೆ ಹೇಳಿದರು – 'ಸ್ವಾಮಿ, ನನ್ನಿಂದ ಅಪರಾಧವಾಯಿತು. ಯಾವ ಪ್ರಾಯಶ್ಚಿತ್ತ ಮಾಡಿಕೊಂಡು ನಾನು ಶುದ್ಧನಾಗಲಿ?' ಭುಜದ ಮೇಲೆ ಕೂಡಿಸಿಕೊಂಡು ನನ್ನ ಬಳಿಗೆ ಕರೆದುಕೊಂಡು ಬನ್ನಿರಿ. ಅವನು ಕಣ್ಣಾರೆ ನನ್ನ ದರ್ಶನ ಮಾಡಲಿ. ಆಗ ನೀವು ಮಾಡಿದ ಅಪಚಾರಕ್ಕೆ ಪ್ರಾಯಶ್ಚಿತ್ತವಾಗುವುದು.

ಅಂತೆಯೇ ಮಾರನೆಯ ದಿನ ಲೋಕ ಸಾರಂಗ ಮುನಿಗಳು ನದಿಯಲ್ಲಿ ಸ್ನಾನ ಮಾಡಿ ತಿರುಪ್ಪಾಣಿಯ ಬಳಿಗೆ ಬಂದರು. ತಿರುಪ್ಪಾಣಿ ಧ್ಯಾನಮಗ್ನನಾಗಿ ಭಗವದನುಭವದಲ್ಲಿದ್ದನು. ಲೋಕ ಸಾರಂಗರು ಅವನಿಗೆ ನಮಸ್ಕರಿಸಿ ತಮಗೆ ಆಗಿದ್ದ ಕನಸನ್ನು ತಿಳಿಸಿ 'ನನ್ನ ಹೆಗಲ ಮೇಲೆ ಕುಳಿತುಕೊಳ್ಳಿರಿ' ಎಂದು ಬೇಡಿದರು. ತಿರುಪ್ಪಾಣಿ ಒಪ್ಪಲಿಲ್ಲ. 'ಇದು ಭಗವಂತನ ಆಜ್ಞೆ, ಇದನ್ನು ಮೀರುವಂತಿಲ್ಲ' ಎಂದು ಲೋಕ ಸಾರಂಗರು ಹೇಳಿದಾಗ ವಿಧಿಯನ್ನು ಅನುಸರಿಸಿ ಒಪ್ಪಿಕೊಂಡನು. ಅವರು ಅವನನ್ನು ಹೆಗಲ ಮೇಲೆ ಕೂರಿಸಿಕೊಂಡು ಸರ್ವಜನರೊಡನೆ ಉತ್ಸವದಲ್ಲಿ ದೇವಾಲಯದೊಳಕ್ಕೆ ಕರೆದೊಯ್ದರು. ಭಗವಂತನ ದರ್ಶನವನ್ನು ಮಾಡಿ ತಿರುಪ್ಪಾಣಿ ತಿರುಪ್ಪಾಣಾಳ್ವಾರರಾದರು. ಅವರು ರಚಿಸಿದ ತಮಿಳು ಪ್ರಬಂಧಗಳು ಅಮಲನಾದಿಪಿರಾನ್ ಎಂದು ಪ್ರಸಿದ್ಧವಾಗಿವೆ.

ಆಪಾದಚೂಡಮನುಭೂಯ ಹರಿಂ ಶಯಾನಂ
ಮಧ್ಯೇ ಕವೇರದುಹಿತುರ್ಮುದಿತಾಂತರಾತ್ಮಾ।
ಅದ್ರಷ್ಟತಾಂ ನಯನಯೋರ್ವಿಷಯಾಂತರಾಣಾಂ
ಯೋ ನಿಶ್ಚಿಕಾಯ ಮನವೈ ಮುನಿವಾಹನಂ ತಮ್ ॥

(ಮಲಗಿದ ರೂಪದ ಭಗವಂತ ಹರಿಯನ್ನು ನಖಶಿಖಾಂತವಾಗಿ ನೋಡಿ ಅತ್ಯಂತವಾಗಿ ಆನಂದಪಟ್ಟ ತಿರುಪ್ಪಾಣಾಳ್ವಾರ್ ತಮ್ಮ ಕಣ್ಣುಗಳಿಂದ ಭಗವಂತನನ್ನಲ್ಲದೆ ಬೇರೆ ಏನನ್ನೂ ಕಾವೇರೀ ನದಿಯ ಬಳಿ ನಾನು ನೋಡುವುದಿಲ್ಲ ಎಂದು ನಿಶ್ಚಯಿಸಿದರು. ಲೋಕಸಾರಂಗ ಮುನಿಗಳ ಹೆಗಲ ಮೇಲೆ ಕುಳಿತು ಬಂದ ಕಾರಣದಿಂದ ಮುನಿವಾಹನರೆನಿಸಿದ ಆ ತಿರುಪ್ಪಾಣಾಳ್ವಾರರನ್ನು ನಾನು ಧ್ಯಾನಿಸುತ್ತೇನೆ.)



ಮಧುರಕವಿಯಾಳ್ವಾರ್ ಇವರು ಹುಟ್ಟಿದ್ದು ತಿರುಕ್ಕೊಳೂರಿನಲ್ಲಿ. ಇವರು ನಮ್ಮಾಳ್ವಾರರ (ಎಂದರೆ ಶಠಕೋಪಮುನಿಗಳ) ಸಮಕಾಲಿಕರು. ಬ್ರಾಹ್ಮಣರಾಗಿ ಹುಟ್ಟಿದ್ದ ಮಧುರಕವಿಯಾಳ್ವಾರ್ ನಮ್ಮಾಳ್ವಾರರನ್ನು ತಮ್ಮ ಆಧ್ಯಾತ್ಮಿಕ ಗುರುಗಳೆಂದು ಒಪ್ಪಿಕೊಂಡು ಆರಾಧಿಸಿದರು. ಆಚಾರ್ಯದೇವೋಭವ ಎಂಬ ಉಪನಿಷದ್ವಾಣಿಯನ್ನು ಅಕ್ಷರಶಃ ಪಾಲಿಸಿದರು. ಮಧುರ ಕವಿಗಳು ಉತ್ತರ ದೇಶದ ಯಾತ್ರೆಗೆ ಹೋಗಿದ್ದರಂತೆ. ಗಂಗಾ ನದಿಯ ತೀರದಲ್ಲಿ ಅವರು ತಂಗಿದ್ದಾಗ ಒಂದು ರಾತ್ರಿ ಆಕಾಶದಲ್ಲಿ ದಿವ್ಯ ತೇಜಃ ಪುಂಜವು ಅವರಿಗೆ ಕಾಣಿಸಿತು. ನನ್ನನ್ನು ಅನುಸರಿಸಿಕೊಂಡು ಬಾ ಎಂದು ಆ ತೇಜಃ ಪುಂಜವು ಮಧುರಕವಿಗಳಿಗೆ ಹೇಳಿತು. ಅದನ್ನೇ ಅನುಸರಿಸಿಕೊಂಡು ಅವರು ಪ್ರಯಾಣ ಮಾಡಿದರು. ಅದು ಅವರನ್ನು ಆಳ್ವಾರ್ ತಿರುನಗರಿಗೆ ಕರೆದುಕೊಂಡು ಬಂದು ಅಂತರ್ಧಾನವನ್ನು ಹೊಂದಿತು. ಈ ಊರಿನ ವಿಶೇಷವೇನು? ಇಲ್ಲಿ ಯಾವ ಮಹಾನುಭಾವರಿದ್ದಾರೆ? ಎಂದು ಅವರು ಜನರನ್ನು ಕೇಳಿದರು.

'ಹುಣಸೇಮರದ ಕೆಳಗೆ ಅದ್ಭುತ ತೇಜಸ್ಸಿನಿಂದ ಕೂಡಿದ ಒಬ್ಬ ವ್ಯಕ್ತಿ ಕುಳಿತಿರುತ್ತಾನೆ. ಯಾರೊಡನೆಯೂ ಮಾತನಾಡದೆ ಧ್ಯಾನದಲ್ಲಿರುತ್ತಾನೆ ಎಂದು ಹೇಳಿದ ಜನರು ನಮ್ಮಾಳ್ವಾರ್ ಅವರನ್ನು ತೋರಿಸಿದರು. ಅವರನ್ನು ಮಾತನಾಡಿಸಲು ಮಧುರಕವಿಗಳು ಮಾಡಿದ ಪ್ರಯತ್ನ ಮೊದಲು ಸಫಲವಾಗಲಿಲ್ಲ. ಪ್ರಾಪಂಚಿಕವಾದ ಯಾವ ವಿಷಯಗಳೂ ನಮ್ಮಾಳ್ವಾರ್ ಅವರಿಗೆ ಬೇಕಿಲ್ಲವೆಂದು ಮಧುರಕವಿಗಳಿಗೆ ಅರ್ಥ ಆಯಿತು. ಆಧ್ಯಾತ್ಮಿಕ ವಿಷಯವನ್ನು ಕೇಳೋಣವೆಂದು 'ತೆತ್ತರ್ಶಿವ ಯತ್ತಿಲ್ ಶಿರಿಯದು ಪಿರಂದಾಲ್ ಎತ್ತೈತ್ತಿನ್ರು ಎಂಗೇ ಕಿಡುಕ್ಕುಂ' (ಪ್ರಾಕೃತವಾದ ಶರೀರದಲ್ಲಿ ಜೀವಾತ್ಮನು ಹುಟ್ಟಿ ಯಾವುದನ್ನು ತಿಂದು ಎಲ್ಲಿ ಜೀವಿಸುವನು?) ಎಂದು ಪ್ರಶ್ನಿಸಿದರು. ಆಗ ನಮ್ಮಾಳ್ವಾರರು ಕಣ್ಣು ತೆರೆದು ಅತ್ತೈತ್ತಿನ್ರು ಅಂಗೇ ಕಿಡುಕ್ಕುಂ' ಎಂದು ಉತ್ತರವಿತ್ತರು. ಪ್ರಾಕೃತವಾದ, ಎಂದರೆ ಪ್ರಕೃತಿಯಿಂದ ಹುಟ್ಟಿದ ಅನ್ನವನ್ನು ತಿಂದು ಪ್ರಾಕೃತ ಸುಖ ದುಃಖಗಳನ್ನು ಅನುಭವಿಸುತ್ತಾ ಪ್ರಕೃತಿ ಜನ್ಯವಾದ ಶರೀರದಲ್ಲೇ ವಾಸ ಮಾಡಿ ಜೀವಾತ್ಮನು ಬದುಕಿರುತ್ತಾನೆ ಎಂಬುದು ಆ ಉತ್ತರದ ತಾತ್ಪರ್ಯ. ಇದನ್ನು ಕೇಳಿ ಮಧುರಕವಿಗಳು ನಮ್ಮಾಳ್ವಾರರ ಮಹಿಮೆಯನ್ನು ಅರಿತು ಅವರ ಸೇವೆಯಲ್ಲೇ ತೊಡಗಿದರು. ಕುಲಕ್ಕಿಂತ ಗುಣಮುಖ್ಯ ಎಂಬ ತತ್ತ್ವವನ್ನು ಲೋಕಕ್ಕೆ ಸಾರಿದರು. ಅಂತರ್ಮುಖನಾಗಿದ್ದ ನಮ್ಮಾಳ್ವಾರ್ ಅವರನ್ನು ಬಹಿರ್ಮುಖರಾಗುವಂತೆ ಮಾಡಿ ಲೋಕಕ್ಕೆ ಅವರ ಮಹಿಮೆ ತಿಳಿಯುವಂತೆ ಮಾಡಿದವರೂ ಮಧುರಕವಿ ಆಳ್ವಾರರೇ. ದಿವ್ಯ ಪ್ರಬಂಧಗಳ ಉಪದೇಶವನ್ನು ಪಡೆದು ನಮ್ಮಾಳ್ವಾರ್ ಅವರ ಅಡಿಯಲ್ಲಿ ಮುಡಿಯನ್ನು ಸೋಕಿಸಿ ಹೃದಯಾಂತರಾಳದಿಂದ ಉಕ್ಕಿದ ಭಕ್ತಿಯನ್ನು ಸುಂದರ ಪದ್ಯಗಳಿಂದ ಹೊರಗೆಡಹಿದರು. ಕಣ್ಣಿನುಣ್ ಶಿರುತ್ತಾಂಬು ಎಂಬ ಅವರ ಪ್ರಬಂಧವು ಭಕ್ತಿಭಾವದಿಂದ ತುಂಬಿದೆ. ಇದರಲ್ಲಿ ಗುರು ಶಠಕೋಪರನ್ನು ಮನಸಾರೆ ಹೊಗಳಿದ್ದಾರೆ. ನಮ್ಮಾಳ್ವಾರರೇ ನನ್ನ ತಾಯಿ, ತಂದೆ, ಸರ್ವಸ್ವವೂ ಎಂದವರು ಹೇಳಿದ್ದಾರೆ. ಅಂತಹ ದೈವಭಕ್ತರು, ಗುರುಗಳು ಇರುವ ದೇಶವೇ ವೈಕುಂಠ ಎಂದು ಸ್ತುತಿಸಿದ್ದಾರೆ.

ಅವಿದಿತವಿಷಯಾಂತರಃ ಶಠಾರೇ
ರುಪನಿಷದಾಮುಪಗಾನಮಾತ್ರಭೋಗಃ।
ಅಪಿ ಚ ಗುಣವಶಾತ್ತದೈಕಶೇಷೀ
ಮಧುರಕವಿರ್ಹೃದಯೇ ಮಮಾವಿರಸ್ತು॥

(ಬೇರೆ ಯಾವ ವಿಷಯವನ್ನು ಚಿಂತಿಸಿದ, ಶಠಗೋಪರು ಬೋಧಿಸುವ ಉಪನಿಷತ್ತುಗಳನ್ನು ಹಾಡುವುದರಲ್ಲೇ ಆನಂದವನ್ನನುಭವಿಸುವ ಗುಣಗಳಿಗೆ ಮಾರು ಹೋಗಿ ಅವರ ಸೇವಕರಾದ ಮಧುರಕವಿ ಆಳ್ವಾರರು ನನ್ನ ಮನಸ್ಸಿನಲ್ಲಿ ಸದಾ ನೆಲೆಸಿರಲಿ.)

ತಿರುಮಂಗೈ ಆಳ್ವಾರ್ – ಈ ಆಳ್ವಾರರಿಗೆ ತಂದೆ ತಾಯಿ ಇಟ್ಟ ಹೆಸರು ನೀಲನಿರತ್ತರ್. ಇವರ ತಂದೆ ಚೋಳರಾಜನ ಸೇನಾಪತಿಯಾಗಿದ್ದರಂತೆ. ನೀಲನಿರತ್ತರ್ ಕೂಡ ಯುದ್ಧಗಳಲ್ಲಿ ಚೋಳರಾಜನ ಪರವಾಗಿ ಹೋರಾಡಿ ಸಾಮಂತರಾಜನೆಂಬ ಗೌರವಕ್ಕೆ ಪಾತ್ರರಾಗಿದ್ದರು. ಇವರ ಮಂತ್ರಿಗಳು ಸುಖಲೋಲುಪರಾಗಿದ್ದರು. ಅಲ್ಲಿ ತಿರುವೆಳ್ಳಕ್ಕುಳಂ ಎಂಬ ತಾವರೆಯ ಕೊಳವಿತ್ತು. ಅಲ್ಲಿ ಸ್ನಾನ ಮಾಡಲು ಬಂದಿದ್ದ ಅಪ್ಸರೆಯೊಬ್ಬಳು ಭೂಲೋಕದಲ್ಲೇ ಇರಬೇಕಾದಾಗ ವೈದ್ಯರೊಬ್ಬರು ಅವಳನ್ನು ಸಾಕಿದರು. ಅವಳನ್ನು ಕುಮುದವಲ್ಲೀ ಎಂದು ಕರೆದರು. ನೀಲನಿರತ್ತರ್ (ತಿರುಮಂಗೈ) ವೈದ್ಯರ ಮನೆಗೆ ಬಂದಾಗ ಕುಮುದವಲ್ಲಿಯನ್ನು ಕಂಡು ಅನುರಕ್ತರಾಗಿ ಅವಳನ್ನೇ ಪತ್ನಿಯನ್ನಾಗಿ ಮಾಡಿಕೊಳ್ಳಬೇಕೆಂದು ಬಯಸಿದರು. "ನೀವು ಶ್ರೀ ವೈಷ್ಣವ ದೀಕ್ಷೆಯನ್ನು ತೆಗೆದುಕೊಳ್ಳಬೇಕು, ಪ್ರತಿದಿನವೂ ಶ್ರೀ ವೈಷ್ಣವ ಗೋಷ್ಠಿಗೆ ಸಮಾರಾಧನೆ ಮಾಡಿಸಬೇಕು. ಈ ನಿಯಮವನ್ನೊಪ್ಪಿಕೊಂಡರೆ ಮಾತ್ರ ನಾನು ನಿಮ್ಮನ್ನು ವರಿಸುತ್ತೇನೆ" ಎಂದು ಕುಮುದವಲ್ಲಿ ಹೇಳಿದಳು. ಒಪ್ಪಿಕೊಂಡ ತಿರುಮಂಗೈ ಅವಳ ಪಾಣಿಗ್ರಹಣ ಮಾಡಿದರು. ಅವರ ಬೊಕ್ಕಸದ ಹಣ ಸಮಾರಾಧನೆಗೆ ಖರ್ಚಾಯಿತು. ಚೋಳ ರಾಜನಿಗೆ ಪ್ರತಿವರ್ಷ ಕೊಡಬೇಕಾಗಿದ್ದ ಪೊಗದಿಯನ್ನು ಕೊಡಲು ಆಗಲಿಲ್ಲ. ಚೋಳರಾಜನ ಆಗ್ರಹಕ್ಕೆ ಪಾತ್ರರಾಗಿ ಉದ್ಯೋಗವನ್ನು ಸ್ಥಾನವನ್ನೂ ಕಳೆದುಕೊಂಡರು. ಮುಂದೆ ಕುಮುದವಲ್ಲಿಯ ಮಾತನ್ನು ನಡೆಸಿಕೊಡಲು ದರೋಡೆ ಆರಂಭಿಸಿದರು. ಅವರಿಗೆ ಬುದ್ಧಿ ಕಲಿಸಲು ಲಕ್ಷ್ಮೀ–ನಾರಾಯಣರು ದಂಪತಿಗಳ ವೇಷದಲ್ಲಿ ಬಂದರು. ಅವರಿಂದ ಒಡವೆಗಳನ್ನು ಕಸಿದ ತಿರುಮಂಗೈ ಲಕ್ಷ್ಮಿಯ ಕಾಲಿನ ಉಂಗುರವನ್ನು ಕಿತ್ತುಕೊಳ್ಳಲು ತಲೆ ಬಗ್ಗಿಸಿ ಬಾಯಿಂದ ಜಗನ್ಮಾತೆಯ ಬೆರಳನ್ನು ಸ್ಪರ್ಶಿಸಿದರು. ಆ ಕ್ಷಣದಲ್ಲೇ ಅವರಿಗೆ ಜ್ಞಾನೋದಯವಾಯಿತು. ಅವನ ಪ್ರಾರ್ಥನೆಗೆ ಓಗೊಟ್ಟು ಸಾಕ್ಷಾತ್ ಭಗವಂತನೇ ಅವರಿಗೆ ಮೂಲಮಂತ್ರೋಪದೇಶವನ್ನು ಮಾಡಿದನು. ತಿರುಮಂಗೈ ಅವರ ಹೃದಯ ಭಕ್ತಿಭಾವದಿಂದ ತುಂಬಿ ಉಕ್ಕಿ ಹರಿಯಿತು. ಅವರು ತಿರುಮಂಗೈ ಆಳ್ವಾರ್ ಆದರು. ಅವರು ರಚಿಸಿದ ಪ್ರಬಂಧಗಳು ಪೆರಿಯತಿರುಮೊಳ್ಳಿ ತಿರುಕ್ಕುರುನ್ದಾಂಡಗಂ, ತಿರುನೆಡುಂದಾಂಡಗಳ್ ಮುಂತಾದವು. ಇವರು ಎಲ್ಲಿ ಶ್ರೀ ವೈಷ್ಣವ ದಿವ್ಯದೇಶಗಳ ದರ್ಶನವನ್ನು ಮಾಡಿದ ಮಹಾನುಭಾವರು.

ಹೀಗೆ ವಿಷ್ಣುವಿನ ಪರಮಭಕ್ತರಾದ ಆಳ್ವಾರರ ಸ್ಮರಣೆ ಪುಣ್ಯಕಾರಣ. ಅವರ ಅನುಗ್ರಹ ಸದಾ ನಮ್ಮದಾಗಿರಲಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda
Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಟ್ರಂಪ್, ನೆತನ್ಯಾಹು ಅಧಿಕಾರ ದಾಹದ ಯುದ್ಧದಿಂದ ಪ್ರಪಂಚವೇ ಕಂಗಾಲು

ಕರ್ನಾಟಕ ದಲಿತ ಚಳವಳಿ ನವನಿರ್ಮಾಣ ವೇದಿಕೆ ಅಧ್ಯಕ್ಷ ಕಳವಳ

ಮೈಸೂರು,ಮಾ.17(ಜಿಎ)–ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಇಸ್ರೇಲ್ ಅಧ್ಯಕ್ಷ ನೆತನ್ಯಾಹು ಅವರ ಅಧಿಕಾರ ದಾಹದಿಂದಾಗಿ ನಡೆಯುತ್ತಿರುವ ಯುದ್ಧದಿಂದ ಇಡೀ ಪ್ರಪಂಚ ಕಂಗಾಲಾಗಿದೆ ಎಂದು ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆ ಅಧ್ಯಕ್ಷ ಹರಿಹರ ಆನಂದಸ್ವಾಮಿ ಕಳವಳ ವ್ಯಕ್ತಪಡಿಸಿದರು.



ಆನಂದಸ್ವಾಮಿ

ಇದರಿಂದ ಕೇವಲ ಮನುಷ್ಯರು ಮಾತ್ರವಲ್ಲ ಪ್ರಾಣಿ ಸಂಕುಲ ಸಹಾ ಸಮಸ್ಯೆಗೊಳಗಾಗಿದೆ. ಹೀಗಾಗಿ ಭಗವಾನ್ ಬುದ್ಧನ ಬೋಧನೆ, ಆದರ್ಶ ಪಾಲಿಸಬೇಕಾದ ಅಗತ್ಯವಿದೆ ಎಂದು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತ ತಿಳಿಸಿದರು.

ಇರಾಕ್ ಜೊತೆಗಿನ ಯುದ್ಧದಲ್ಲಿ ಅಂತಾರಾಷ್ಟ್ರೀಯ ನಿಯಮ ನಿಷೇಧ ಹೇರಿರುವ ಹಾಗೂ ಬಳಸಲೇ ಬಾರದ ಶಸ್ತ್ರಾಸ್ತ್ರಗಳನ್ನು ಬಳಸಲಾಗುತ್ತಿರುವುದು ಸರಿಯಲ್ಲ. ಇದು ಸರಿಪಡಿಸಲಾಗದಷ್ಟು ಹಾನಿಯುಂಟು ಮಾಡಲಿದೆ. ಯುದ್ಧ ಆರಂಭವಾಗಿ ಎರಡು ವಾರ ಗತಿಸಿದರೂ ಅಂತಾ ರಾಷ್ಟ್ರೀಯ ನ್ಯಾಯಾಲಯ ಹಾಗೂ ವಿಶ್ವಸಂಸ್ಥೆ ಈ ಬಗ್ಗೆ ಮೌನವಾಗಿರುವುದು ಸರಿಯಲ್ಲ ಎಂದು ಆನಂದಸ್ವಾಮಿ ಬೇಸರಿಸಿದರು.

ಇಂದು ಇಡೀ ಪ್ರಪಂಚ ಕ್ರೈಸ್ತ ಹಾಗೂ ಮುಸ್ಲಿಂ ರಾಷ್ಟ್ರಗಳ ನಡುವಿನ ಸಂಘರ್ಷ ಕಾಣುವಂತಾಗಿದೆ. ಆದ್ದರಿಂದ ಈ ರೀತಿಯ ಪರಿಸ್ಥಿತಿಯಲ್ಲಿ ಬುದ್ಧನ ಶಾಂತಿ ಸಂದೇಶ ಪಾಲನೆ ಅತ್ಯಗತ್ಯವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು, ಉತ್ತನಹಳ್ಳಿ ಶಿವಣ್ಣ, ಸತೀಶ್ ಪಡುವಾರಹಳ್ಳಿ ಉಪಸ್ಥಿತರಿದ್ದರು.

ಸಂಪುಟ ಪುನಾರಚನೆ ಮತ್ತೆ ಮುನ್ನಲೆಗೆ; 40ಕ್ಕೂ ಹೆಚ್ಚು ಶಾಸಕರಿಂದ ಸಿಎಂಗೆ ಬೇಡಿಕೆ

ಬೆಂಗಳೂರು: ರಾಜ್ಯದಲ್ಲಿ ಸಂಪುಟ ಪುನಾರಚನೆ ಕೂಗು ಮತ್ತೆ ಜೋರಾಗಿದ್ದು, 40ಕ್ಕೂ ಅಧಿಕ ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಸಂಪುಟ ಪುನಾರಚನೆಗೆ ಬೇಡಿಕೆ ಇಟ್ಟಿದ್ದಾರೆ.

ಶಾಸಕರಾದ ಎನ್.ಎ.ಹ್ಯಾರಿಸ್, ಎಸ್.ಎನ್. ನಾರಾಯಣ ಸ್ವಾಮಿ, ಮಾಗಡಿ ಬಾಲಕೃಷ್ಣ, ಅಶೋಕ್ ಪಟ್ಟಣ ಸೇರಿದಂತೆ ಹಲವು ಶಾಸಕರು ವಿಧಾನಸೌಧದಲ್ಲಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಶೀಘ್ರದಲ್ಲೇ ಸಂಪುಟ ಪುನಾರಚನೆ ಮಾಡುವಂತೆ ಮನವಿ ಮಾಡಿದರು.

ನಾಯಕತ್ವ ಬದಲಾವಣೆಯ ನಡುವೆ ಸಂಪುಟ ಪುನಾರಚನೆ ಕೂಗು ಕೇಳಿ ಬರುತ್ತಿದೆ. ಸಂಪುಟ ಪುನಾರಚನೆಗೆ ಸಿಎಂ ಸಿದ್ದರಾಮಯ್ಯ ಅವರು ಮುಂದಾಗಿದ್ದರೂ ಹೈಕಮಾಂಡ್‌ನಿಂದ ಗ್ರೀನ್ ಸಿಗ್ನಲ್ ಸಿಕ್ಕಿರಲಿಲ್ಲ. ನಾಯಕತ್ವ ಬದಲಾವಣೆ ವಿಚಾರವಾಗಿ ಸ್ಪಷ್ಟ ನಿರ್ಧಾರ ಕೈಗೊಂಡು ಮತ್ತೆ ಸಂಪುಟ ಪುನಾರಚನೆ ಮಾಡಿ ಎಂಬುದು ಡಿ.ಕೆ.ಶಿವಕುಮಾರ್ ಬಣದ ಬೇಡಿಕೆ ಆಗಿತ್ತು. ಹೀಗಾಗಿ ಸಂಪುಟ ಪುನಾರಚನೆ ವಿಚಾರ ಪದೇ ಪದೆ ಮುಂದೂಡಲ್ಪಡುತ್ತಿದೆ. ರಾಜ್ಯ ಸರ್ಕಾರ ಆಡಳಿತಕ್ಕೆ ಬಂದು ಎರಡುವರೆ ವರ್ಷ ಕಳೆದಿದೆ. ಎರಡುವರೆ ವರ್ಷ ಪೂರ್ಣಗೊಂಡ ಬೆನ್ನಲ್ಲೇ ಸಂಪುಟ ಪುನಾರಚನೆ ಆಗಲಿದೆ ಎಂಬ ನಿರೀಕ್ಷೆ ಇತ್ತು. ಆದರೆ ಅದು ಹುಸಿಯಾಗಿದೆ. ಈ ನಿಟ್ಟಿನಲ್ಲಿ ಸಚಿವಾಕಾಂಕ್ಷಿಗಳ ಒತ್ತಡ ಹೆಚ್ಚುತ್ತಿದೆ.

ಉಪ ಚುನಾವಣೆಯ ಬಳಿಕ ಪುನಾರಚನೆ: ಇದೀಗ ಉಪ ಚುನಾವಣೆ ಘೋಷಣೆ ಆಗಿದೆ. ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣಕ್ಕೆ ಉಪ ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಸಚಿವರಿಗೆ ಜವಾಬ್ದಾರಿ ನೀಡಲಾಗಿದೆ. ಉಪ ಚುನಾವಣೆಯ ಬಳಿಕ ಸಂಪುಟ ಪುನಾರಚನೆ ಆಗುವ ಸಾಧ್ಯತೆ ಇದೆ. ಹೀಗಾಗಿ ಈಗಾಗಲೇ ಒತ್ತಡ ಜೋರಾಗಿದೆ. ಒಂದು ವೇಳೆ ಸಂಪುಟ ಪುನಾರಚನೆ ಆದಲ್ಲಿ 12 ರಿಂದ 15 ಸಚಿವರನ್ನು ಕೈಬಿಡುವ ಸಾಧ್ಯತೆ ಇದೆ. ಹಿರಿಯ ಶಾಸಕರಿಗೆ ಸಂಪುಟದಲ್ಲಿ ಅವಕಾಶ ನೀಡುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಆಕಾಂಕ್ಷಿಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ

ಅಭಿನಂದನೆ...



ಶಿಕ್ಷಕರ ವೈದ್ಯಕೀಯ ವೆಚ್ಚದ ಅನುದಾನವನ್ನು ದೊರಕಿಸಿಕೊಡುವಲ್ಲಿ ಸಹಕರಿಸಿದ ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರನ್ನು ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ಶಿಕ್ಷಕರ ಸಂಘದ ಪದಾಧಿಕಾರಿಗಳು ಅಭಿನಂದಿಸಿದರು.

ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಆರೋಪ

ಮೂಡಬಿದಿರೆ ಪಿಐ ಸಂದೇಶ್ ಅಮಾನತು; ಮಹಿಳಾ ಆಯೋಗದಿಂದ ಸುಮೋಟೋ ಕೇಸ್

ಮಂಗಳೂರು, ಮಾ.17– ಕೌಟುಂಬಿಕ ಕಲಹದ ವಿಚಾರಕ್ಕೆ ದೂರು ನೀಡಲು ಬಂದ ಮಹಿಳೆಯರೊಂದಿಗೆ ಅಸಭ್ಯವಾಗಿ ನಡೆದುಕೊಂಡ ಆರೋಪ ಹೊತ್ತಿರುವ ಮೂಡುಬಿದಿರೆ ಇನ್ಸ್‌ಪೆಕ್ಟರ್ ಸಂದೇಶ್ ವಿರುದ್ಧ ರಾಜ್ಯ ಮಹಿಳಾ ಆಯೋಗವು ಸುಮೋಟೋ ಪ್ರಕರಣ ದಾಖಲಿಸಿಕೊಂಡು, ಪ್ರಕರಣ ಸಂಬಂಧ ವರದಿ ನೀಡುವಂತೆ ಮಂಗಳೂರ ನಗರ ಪೊಲೀಸ್ ಕಮಿಷನರ್‌ಗೆ ಪತ್ರ ಬರೆದಿದೆ



ಇದರ ಬೆನ್ನಲ್ಲೇ ಇನ್ಸ್‌ಪೆಕ್ಟರ್ ಸಂದೇಶನನ್ನು ಅಮಾನತು ಮಾಡಿ ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ಆದೇಶ ಹೊರಡಿಸಿದ್ದಾರೆ. ಆಡಿಯೋ, ವಿಡೀಯೋದಲ್ಲಿ ಮಹಿಳೆಯರ ಜೊತೆ ಅನುಚಿತ ವರ್ತನೆಯ ಕಾರಣ ನೀಡಿ ಈ ಕ್ರಮ ಕೈಗೊಳ್ಳಲಾಗಿದೆ.

ಸಂತ್ರಸ್ತೆ ಮಹಿಳೆ ಆರೋಪ ಸಂಬಂಧ ಕೆಲ ಆಡಿಯೋ ಹಾಗೂ ವೀಡಿಯೊಗಳು ಬಯಲಾಗುತ್ತಿದ್ದಂತೆ ಪ್ರಕರಣದ ತನಿಖೆ ನಡೆಸಿ ವರದಿ ನೀಡುವಂತೆ ಎಸಿಪಿ ಶ್ರೀಕಾಂತ್‌ಗೆ ಜವಾಬ್ದಾರಿ ವಹಿಸಲಾಗಿತ್ತು. ಮತ್ತೊಂದೆಡೆ ಈ ಸಂಬಂಧ ಶಾಸಕ ಉಮಾನಾಥ್ ಕೋಟ್ಯಾನ್ ಗೃಹ ಸಚಿವರನ್ನ ಭೇಟಿ ಮಾಡಿ, ಸಂದೇಶ್ ಅವರನ್ನು ಅಮಾನತ್ತಿನಲ್ಲಿಟ್ಟು ತನಿಖೆ ಮಾಡುವಂತೆ ಮನವಿ ಮಾಡಿದ್ದರು.

ವಿಧಾನಸಭೆ ಕಲಾಪ ಸಮರ್ಪಕ ನಿರ್ವಹಣೆ ಲೋಪ; 8 ಐಎಎಸ್ ಅಧಿಕಾರಿಗಳಿಗೆ ನೋಟಿಸ್

ಬೆಂಗಳೂರು, ಮಾ. 17(ಕೆಎಂಶಿ)– ಸದನದಲ್ಲಿ ಶಾಸಕರ ಪ್ರಸ್ತಾವಗಳಿಗೆ ಸಮರ್ಪಕ ಉತ್ತರ ದೊರಕಿಸಲು ವಿಫಲರಾಗಿದ್ದಾರೆ ಎಂಬ ಆರೋಪದ ಮೇಲೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಠಾರಿಯಾ ಸೇರಿದಂತೆ 8 ಐಎಎಸ್ ಅಧಿಕಾರಿಗಳಿಗೆ ನೋಟಿಸ್ ಜಾರಿಗೊಳಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶದಂತೆ ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಕಠಾರಿಯಾ ಜೊತೆ ಪಶು ಸಂಗೋಪನಾ ಇಲಾಖೆ ಕಾರ್ಯದರ್ಶಿ ಆರ್.ವಿನೋತ್ ಪ್ರಿಯ, ವಸತಿ ಇಲಾಖೆಯ ಕೆ.ಪಿ. ಮೋಹನ್‌ರಾಜ್, ಸಾರಿಗೆ ಇಲಾಖೆಯ ಎನ್.ವಿ.ಪ್ರಸಾದ್. ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಆರ್.ಗಿರೀಶ್, ಲೋಕೋಪಯೋಗಿ ಇಲಾಖೆಯ ಆಮ್ಲಾನ್ ಆದಿತ್ಯಯ ಬಿಸ್ವಾಸ್ ಅವರಿಗೆ ನೋಟಿಸ್ ಜಾರಿ ಮಾಡಿ, ಕೂಡಲೇ ಲಿಖಿತ ರೂಪದಲ್ಲಿ ಸ್ಪಷ್ಟನೆ ನೀಡುವಂತೆ ಸೂಚಿಸಲಾಗಿದೆ.



ಸೋಮವಾರ ಉಭಯ ಸದನಗಳಲ್ಲೂ ಸದಸ್ಯರ ಪ್ರಸ್ತಾವಗಳಿಗೆ ಉತ್ತರ ನೀಡಲು ಸಚಿವರೇ ಇಲ್ಲ, ಅವರಿಗೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂಬುದಾಗಿ ಸರ್ಕಾರದ ವಿರುದ್ಧ ಕಿಡಿಕಾರಿದ್ದರು.

ಅಧಿಕಾರಿಗಳು ನೀಡುವ ಮಾಹಿತಿಯನ್ನೇ ಮುಂದಿಟ್ಟುಕೊಂಡು ಸಚಿವರು ಸದನಕ್ಕೆ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಇಂತಹ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದು ವಿರೋಧ ಪಕ್ಷದವರು ಆಗ್ರಹಿಸಿದ್ದರು. ಅಧಿಕಾರಿಗಳು ಸರ್ಕಾರವನ್ನೇ ಸಾಯಿಸಿದ್ದಾರೆ. ಇನ್ನು ತಿಥಿ ಮಾಡಬೇಕಿದೆ ಅಷ್ಟೇ ಎಂದು ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕರು ಮಾಡಿದ ಟೀಕೆಗೆ ಸ್ಪಂದಿಸಿದ ಸಭಾಧ್ಯಕ್ಷ ಯು.ಟಿ.ಖಾದರ್, ಕಲಾಪ ಮುಂದೂಡಿ ಸದನದಿಂದಲೇ ಹೊರ ನಡೆದಿದ್ದರು.

ಸುಮಾರು ನಾಲ್ಕು ಗಂಟೆಗಳ ಕಾಲ ಕಲಾಪ ಆರಂಭಿಸಲು ಸಭಾಧ್ಯಕ್ಷರು ಮುಂದಾಗಿರಲಿಲ್ಲ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳೇ ಮಧ್ಯಪ್ರವೇಶಿಸಿ, ಅಲ್ಲಿಗೆ ಮುಖ್ಯ ಕಾರ್ಯದರ್ಶಿ ಅವರನ್ನು ಕರೆಸಿ, ಸದನಕ್ಕೆ ಅಗೌರವ ತೋರಿದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವ ಭರವಸೆ ನೀಡಿದ್ದರು.

ವಿಷಯ ತಿಳಿಯಾಗುತ್ತಿದ್ದಂತೆ ಸಭಾಧ್ಯಕ್ಷರು ಮಧ್ಯಾಹ್ನದ ನಂತರ ಕಲಾಪವನ್ನು ಆರಂಭಿಸಿದರಲ್ಲದೆ, ಅಧಿಕಾರಿಗಳಿಗೂ ಎಚ್ಚರಿಕೆ ನೀಡಿದರು.

ಈ ಬೆಳವಣಿಗೆ ನಂತರ ಮುಖ್ಯಕಾರ್ಯದರ್ಶಿ ಅವರು, ಎಂಟು ಇಲಾಖೆಗಳ ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳಿಗೆ ನೋಟಿಸ್ ಜಾರಿ ಮಾಡಿ ವಿವರಣೆ ಕೇಳಿದ್ದಾರೆ. ಸಭಾಧ್ಯಕ್ಷರ ಆದೇಶದ ಮೇರೆಗೆ ದೊಡ್ಡ ಪ್ರಮಾಣದಲ್ಲಿ ಇಂತಹ ನಿರ್ಣಯ ಕೈಗೊಂಡಿರುವುದು ಸದನದ ಇತಿಹಾಸದಲ್ಲಿ ಇದೇ ಮೊದಲು.

ಅಕ್ರಮ ಮದ್ಯ ಮಾರಾಟ ನಿಷೇಧ

ಮಾದಕ ವಸ್ತು ನಿಯಂತ್ರಣ ಕಾಯ್ದೆಯಡಿ ತರಲು ಸರ್ಕಾರ ನಿರ್ಧಾರ

ಬೆಂಗಳೂರು, ಮಾ. 17(ಕೆಎಂಶಿ)– ಅಕ್ರಮ ಮದ್ಯ ಮಾರಾಟ ನಿಷೇಧವನ್ನು ಮಾದಕ ವಸ್ತು ನಿಯಂತ್ರಣ ಕಾಯಿದೆಯಡಿ ತರಲು ಸರ್ಕಾರ ಮುಂದಾಗಿದೆ ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಬಸನಗೌಡ ದದ್ದಲ್, ಶರಣಗೌಡ ಕಂದಕೂರ, ಅರಗ ಜ್ಞಾನೇಂದ್ರ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಅಬಕಾರಿ ಕಾಯಿದೆ 1965 ಹಳೇ ಕಾನೂನು ಆಗಿದೆ, ಇದರ ದುರ್ಬಳಕೆ ಮಾಡಿಕೊಂಡು ಅಕ್ರಮ ಮಾರಾಟ ಮಾಡಲಾಗುತ್ತಿದೆ.

ಹಳೇ ಕಾಯಿದೆಗೆ ತಿದ್ದುಪಡಿ ಮಾಡಿ ಅಕ್ರಮ ಮಾರಾಟವನ್ನು ಮಾದಕವಸ್ತು ನಿಯಂತ್ರಣ ಕಾಯಿದೆ ಅಡಿ ತರಲಾಗುವುದು. ಇದರಿಂದ ಕಾನೂನು ಉಲ್ಲಂಘಿಸಿದವರು ಕಠಿಣ ಶಿಕ್ಷೆಗೆ ಒಳಪಡಬೇಕಾಗುತ್ತದೆ. ರಾಜ್ಯದಲ್ಲಿ ಸೇಂದಿ ನಿಷೇಧ ಮಾಡಿದ್ದರೂ ಆಂಧ್ರ ಗಡಿ ಭಾಗದಲ್ಲಿ ಕ್ಲೋರಲ್ ಹೈಡ್ರೇಡ್ ಪೌಡರ್‌ನಿಂದ ಕೃತಕ ಸೇಂದಿ ತಯಾರಿಸಿ ಮಾರಾಟ ಮಾಡಲಾಗುತ್ತಿದೆ ಎಂದರು.





ತಿಮ್ಮಾಪುರ

ಅಕ್ರಮ ಮದ್ಯ ಮರಾಟ ತಡೆಯಲು ಎಷ್ಟೇ ಬಿಗಿ ಕ್ರಮ ಕೈಗೊಡರೂ ಆಂಧ್ರ, ಮಹಾರಾಷ್ಟ್ರ, ಗೋವಾ ಗಡಿ ಭಾಗಗಳಲ್ಲಿ ಹೊರ ರಾಜ್ಯದಿಂದ ಸೇಂದಿ ಹಾಗೂ ಮದ್ಯ ಕಳ್ಳಸಾಗಣೆ ಆಗುತ್ತಿದೆ. ಗ್ರಾಮೀಣ ಭಾಗದ ಕಿರಾಣಿ ಅಂಗಡಿಗಳಲ್ಲೂ ಮದ್ಯ ಮಾರಾಟ ಆಗುತ್ತಿದೆ. ಇದನ್ನು ತಡೆಯಲು ವಿಶೇಷ ದಳ ರಚಿಸುವುದಾಗಿ ತಿಳಿಸಿದರು.

ಅಕ್ರಮಗಳ ನಿಯಂತ್ರಣಕ್ಕೆ ಇಲಾಖಾವಲಯ ವ್ಯಾಪ್ತಿ ಮಾರ್ಗಗಳಲ್ಲಿ ನಿರಂತರ ಗಸ್ತು ನಡೆಸಲಾಗುತ್ತಿದೆ. ಅಲ್ಲದೆ, ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಸ್ತೆ ಕಾವಲು ನಡೆಸಿ ಸಂಶಯಾಸ್ಪದ ವಾಹನಗಳ ತಪಾಸಣೆ ಮಾಡಲಾಗುತ್ತಿದೆ.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸ್ಥಾಯಿ ಸಮಿತಿ ಸಭೆ ಏರ್ಪಡಿಸಿ ಕ್ರಮ ಕೈಗೊಂಡಿದ್ದರೂ ಅಕ್ರಮ ಮದ್ಯ ಮಾರಾಟ ನಡೆಯುತ್ತಲೇ ಇದ್ದು, ಇದರಿಂದ ನಮ್ಮ ನಿರ್ದಿಷ್ಟ ಅಬಕಾರಿ ಸಂಗ್ರಹ ಗುರಿ ಮುಟ್ಟಲು ಸಾಧ್ಯವಾಗುತ್ತಿಲ್ಲ ಎಂದರು.

ಕಾನೂನು ತಿದ್ದುಪಡಿ: 60–70 ವರ್ಷಗಳ ಹಿಂದೆ ರೂಪಿಸಲಾಗಿರುವ ಕಾನೂನಿನಲ್ಲಿ ಶಿಕ್ಷೆ ಪ್ರಮಾಣ ಕಡಿಮೆ ಇದೆ. ಹೀಗಾಗಿ ತಪ್ಪು ಮಾಡುವವರಿಗೆ ಭಯ ಇಲ್ಲವಾಗಿದೆ. ಪ್ರಸ್ತುತ ಸನ್ನಿವೇಶಕ್ಕೆ ಅನುಗುಣವಾಗಿ ಮದ್ಯ ಮಾರಾಟ ಹಾಗೂ ಇತರ ಅಬಕಾರಿ ಅಪರಾಧಗಳ ನಿಯಂತ್ರಣಕ್ಕೆ ಕಾನೂನು ತಿದ್ದುಪಡಿ ತರುವುದಾಗಿ ಸಚಿವರು ಭರವಸೆ ನೀಡಿದರು.

ಗ್ರಾಮೀಣ ಭಾಗದಲ್ಲಿ ಮದ್ಯಕ್ಕೆ ಹೆಚ್ಚಿನ ಬೇಡಿಕೆ ಇದೆ. ಹೊಸ ಮದ್ಯ ಮಾರಾಟ ಅಂಗಡಿಗಳಿಗೆ ಪರವಾನಗಿ ನೀಡಬಾರದು ಎಂಬ ಒತ್ತಡ ಸರ್ಕಾರದ ಮೇಲಿದೆ. ಬೇಡಿಕೆ ಇರುವ ಕಡೆಗೆ ಎಂಎಸ್‌ಐಎಲ್ ಮದ್ಯ ಖರೀದಿಸಿ ಮಾರಾಟ ಮಾಡುತ್ತಿದ್ದಾರೆ. ಇದು ಸಹ ತಪ್ಪು. ಆದರೆ ಬೇಡಿಕೆ ಪೂರೈಸಲು ಅನಿವಾರ್ಯವಾಗಿದೆ ಎಂದು ಅಬಕಾರಿ ಸಚಿವ ತಿಮ್ಮಾಪುರ ಹೇಳಿದರು.

ಅಡಿಕೆಯಿಂದ ಆರೋಗ್ಯದ ಮೇಲೆ ಪರಿಣಾಮ ಕುರಿತು ಸಂಶೋಧನೆ

ವರದಿ ಬಂದ ಬಳಿಕ ಅಗತ್ಯ ಕ್ರಮ: ಚಲುವರಾಯಸ್ವಾಮಿ ಸ್ಪಷ್ಟನೆ

ಬೆಂಗಳೂರು, ಮಾ. 17(ಕೆಎಂಶಿ)– ಅಡಿಕೆ ಬಳಕೆಯಿಂದ ಆರೋಗ್ಯದ ಮೇಲಾಗುವ ಪರಿಣಾಮಗಳ ಕುರಿತು ವ್ಯಾಪಕ ಸಂಶೋಧನೆ ಕೈಗೊಳ್ಳಲಾಗಿದ್ದು ವರದಿ ಬಂದ ನಂತರ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ವಿಧಾನಪರಿಷತ್‌ನಲ್ಲಿಂದು ತಿಳಿಸಿದರು.



ಚಲುವರಾಯಸ್ವಾಮಿ

ಪ್ರಶ್ನೋತ್ತರ ವೇಳೆಯಲ್ಲಿ ಪ್ರತಾಪಸಿಂಹ ನಾಯಕ್ ಪ್ರಸ್ತಾವಕ್ಕೆ ತೋಟಗಾರಿಕಾ ಸಚಿವರ ಪರ ಉತ್ತರಿಸಿದ ಚಲುವರಾಯಸ್ವಾಮಿ, ಅಡಿಕೆ ಹಾನಿಕಾರಕವಲ್ಲ ಮತ್ತು ಕ್ಯಾನ್ಸರ್‌ಕಾರಕವಲ್ಲ. ಆದರೆ, ಸಂಶೋಧನೆಯ ಅಂತಿಮ ವರದಿ ಬಂದ ನಂತರ ಸೂಕ್ತ ಪ್ರಚಾರ ಕಾರ್ಯಕ್ರಮಗಳನ್ನು ಹಮಿಕೊಳ್ಳಲಾಗುವುದು ಎಂದರು.

ಅಡಿಕೆ ತಟ್ಟೆಗಳ ಕುರಿತು ನಡೆಸಿದ ಅಧ್ಯಯನಗಳಲ್ಲಿ ಆಲ್ಕಲಾಯ್ಡ್ ಮಟ್ಟ ಅತ್ಯಂತ ಕಡಿಮೆ ಇದ್ದು, ಅಡಿಕೆ ಬಲಿತ ಕಾಯಿಗಿಂತಲೂ ಸಾವಿರಾರು ಪಟ್ಟು ಕಡಿಮೆ ಇರುವುದಾಗಿ ಕಂಡುಬಂದಿದೆ.

ಆಹಾರದ ಜೊತೆ ಈ ರಾಸಾಯನಿಕಗಳ ಸೇರ್ಪಡೆಯಾಗುವ ಸಾಧ್ಯತೆ ಕಡಿಮೆ ಇದ್ದು, ಅವುಗಳನ್ನು ಬಯೋ ಡಿ–ಗ್ರೇಡಬಲ್ ಆಹಾರ ಪಾತ್ರೆಗಳಾಗಿ ಬಳಸಿದಲ್ಲಿ ಮನುಷ್ಯನ ಆರೋಗ್ಯಕ್ಕೆ ಅತ್ಯಂತ ಕಡಿಮೆ ಅಪಾಯವಿದೆ.

ಎಂ.ಎಸ್.ರಾಮಯ್ಯ ವಿಶ್ವವಿದ್ಯಾಲಯ ಸಂಸ್ಥೆಗೆ ಸಂಶೋಧನೆ ನಡೆಸಲು ತೋಟಗಾರಿಕಾ ಇಲಾಖೆಗೆ ವಹಿಸಲಾಗಿದ್ದು, 31.80 ಲಕ್ಷ ವೆಚ್ಚದಲ್ಲಿ ಸಂಶೋಧನೆ ಕೈಗೊಳ್ಳಲಾಗಿದೆ. ಪಾನ್ ಮಸಾಲದಂತಹ ಪದಾರ್ಥಗಳಲ್ಲಿ ಅಡಿಕೆ ಒಂದಂಶವಾಗಿ ಬಳಸಿದರೂ ತಂಬಾಕು ಸೇರಿಸದಿದ್ದರೆ ಹಾನಿಕಾರಕವಲ್ಲ ಎಂದು ವರದಿ ತಿಳಿಸಿದೆ. ಕೇಂದ್ರ ಸರ್ಕಾರದ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆ ಅಡಿಕೆ ಕುರಿತು ಸಾಕ್ಷ್ಯಾಧಾರ ಸಹಿತ ಸಂಶೋಧನೆ ಮತ್ತು ಮಾನವ ಆರೋಗ್ಯ ಎಂಬ ಬಹು ಸಂಸ್ಥೆಗಳನ್ನೊಳಗೊಂಡ ಪ್ಯಾಕೇಜ್ ಯೋಜನೆ ರೂಪಿಸಿದೆ. ಈ ಯೋಜನೆಗೆ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ ಮಾಡಲು ಕೇಂದ್ರ ಸರ್ಕಾರದ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆ ತೋಟಗಾರಿಕೆ ಆಯುಕ್ತರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ದಕ್ಷಿಣ ಭಾರತದಲ್ಲಿ ಅಡಿಕೆ ಜಗಿಯುವ ಹಾಗೂ ಬಾಯಿ ಹುಣ್ಣುಗಳ ಮೌಲ್ಯಮಾಪನ ಕುರಿತು 15,885 ಅಭ್ಯರ್ಥಿಗಳನ್ನು ಒಳಗೊಂಡ ಸಮೂಹ ಜನಸಂಖ್ಯಾ ಆಧಾರಿತ ಅಧ್ಯಯನ ಪ್ರಾರಂಭಿಸಲಾಗಿದೆ ಎಂದರು.

2025ರ ಏ.7ಕ್ಕೂ ಮುನ್ನ ಕೃಷಿ ಭೂಮಿಯಲ್ಲಿ ಕಟ್ಟಿದ ಕಟ್ಟಡಕ್ಕೆ ನಮೂನೆ 11ಬಿ

ಬೆಂಗಳೂರು, ಮಾ. 17(ಕೆಎಂಶಿ)– ಕೃಷಿ ಭೂಮಿಯಲ್ಲಿ 2025ರ ಏಪ್ರಿಲ್ 7ಕ್ಕೂ ಪೂರ್ವದಲ್ಲಿ ನಿರ್ಮಿಸಿರುವ ಕಟ್ಟಡಗಳಿಗೆ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ನಿಯಮಗಳ ಅನ್ವಯ ನಮೂನೆ 11 ಬಿ ಅನ್ನು ಸಾರ್ವಜನಿಕರು ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ವಿಧಾನಪರಿಷತ್‌ನಲ್ಲಿಂದು ತಿಳಿಸಿದರು. ಡಾ.ಯತೀಂದ್ರ ಮಂಡಿಸಿದ ನಿಯಮ 72ರ ಸೂಚನೆಗೆ ಉತ್ತರಿಸಿದ ಸಚಿವರು, ಕಡ್ಡಾಯವಾಗಿ ಭೂ ಪರಿವರ್ತನೆ ಹಾಗೂ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರ ಉಪಬಂಧಗಳ ಅನ್ವಯ ಅನುಮೋದನೆ ಪಡೆದಿರುವ ಆಸ್ತಿಗಳಿಗೆ ನಮೂನೆ ಸೃಜಿಸಲಾಗುವುದು. ಲೇಔಟ್ ಪ್ಲಾನ್‌ಗಾಗಿ ಪೂರ್ವಾನುಮೋದನೆ ಪಡೆದುಕೊಳ್ಳಬೇಕು ಎಂಬುದಾಗಿ ಅಧಿಸೂಚಿಸಲಾಗಿದೆ ಎಂದರು.



ಪ್ರಿಯಾಂಕ್‌ಖರ್ಗೆ

ಗುಡಿ ಕೈಗಾರಿಕೆಗಳ ಕೇಂದ್ರ ಪುನಃಶ್ಚೇತನಗೊಳಿಸಬೇಕಿದೆ

ಬೆಂಗಳೂರು, ಮಾ. 17(ಕೆಎಂಶಿ)–ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದಲ್ಲಿ ಗುಡಿ ಕೈಗಾರಿಕೆಗಳ ಪುನಃಶ್ಚೇತನ ಮಾಡಬೇಕಿದೆ ಎಂದು ಜವಳಿ ಸಚಿವ ಶಿವಾನಂದ ಪಾಟೀಲ್ ವಿಧಾನಪರಿಷತ್‌ನಲ್ಲಿಂದು ತಿಳಿಸಿದರು. ಪ್ರಶ್ನೋತ್ತರ ವೇಳೆಯಲ್ಲಿ ಟಿ.ಎ.ಶರವಣ ಪ್ರಸ್ತಾವಕ್ಕೆ ಸಣ್ಣ ಕೈಗಾರಿಕಾ ಸಚಿವ ಶರಣಬಸಪ್ಪ ದರ್ಶನಾಪುರ ಪರವಾಗಿ ಉತ್ತರಿಸಿದ ಶಿವಾನಂದ ಪಾಟೀಲ್, ಕೇಂದ್ರ ಸರ್ಕಾರದ ಸರ್ವೇ ಪ್ರಕಾರ ಶೇ.60 ರಷ್ಟು ಮುಚ್ಚಿಹೋಗಿವೆ. ಇವುಗಳ ಮಾಹಿತಿ ವ್ಯವಸ್ಥೆ ಸಣ್ಣ ಕೈಗಾರಿಕೆಗಳಲ್ಲಿ ಇಲ್ಲ. ಎಂಎಸ್‌ಎಂಇ ಉದ್ಯೋಗ ನಿರ್ಮಾಣದ ಸಂಪೂರ್ಣ ಹೊಣೆ ಕೇಂದ್ರ ಸರ್ಕಾರದ್ದಾಗಿದ್ದು, ಅದೇ ನಿರ್ವಹಣೆ ಮಾಡುತ್ತದೆ ಎಂದರು.



ಶಿವಾನಂದ ಪಾಟೀಲ್

2001–06ರವರೆಗೆ ಸಣ್ಣ ಮತ್ತು ಸೂಕ್ಷ್ಮ ಕೈಗಾರಿಕೆಗಳ ಸಮೀಕ್ಷೆ ನಡೆಸಿದೆ. ಕೇಂದ್ರ ಸರ್ಕಾರದ ಉದ್ಯಮ ತಂತ್ರಾಂಶದಲ್ಲಿ ಸಣ್ಣ ಕೈಗಾರಿಕೆಗಳ ನೋಂದಣಿ ವ್ಯವಸ್ಥೆ ಇದೆ. ಜಾಗತಿಕ ಮಾರುಕಟ್ಟೆಯ ಪೈಪೋಟಿ, ದುಡಿಯುವ ಬಂಡವಾಳದ ಕೊರತೆ, ಕಚ್ಚಾವಸ್ತು ಕೊರತೆ, ಮಾರುಕಟ್ಟೆ ಕುಸಿತ, ತಂತ್ರಜ್ಞಾನದ ಅಭಾವ, ಮಾನವ ಸಂಪನ್ಮೂಲ ಕೊರತೆ ಕಾರಣಗಳಿಂದ ಸಣ್ಣ ಕೈಗಾರಿಕೆಗಳು ಮುಚ್ಚಲ್ಪಟ್ಟಿವೆ ಎಂದರು.

ಹನೂರು ಕುಡಿಯುವ ನೀರಿಗೆ 490 ಕೋಟಿ ಅನುದಾನ ಮೀಸಲು



ಡಾ.ಸುಧಾಕರ್

ಬೆಂಗಳೂರು,ಮಾ.17(ಕೆಎಂಶಿ)–ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅಂತರ್ಜಲ ಅಭಿವೃದ್ಧಿ ಹಾಗೂ ಕುಡಿಯುವ ನೀರು ಯೋಜನೆಗೆ ಸಣ್ಣ ನೀರಾವರಿ ಇಲಾಖೆಯಿಂದ 490 ಕೋಟಿ ಅನುದಾನವನ್ನು ಆಯವ್ಯಯದಲ್ಲಿ ಮೀಸಲಿಡಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ವಿಧಾನಸಭೆಯಲ್ಲಿ ತಿಳಿಸಿದ್ದಾರೆ. ಪ್ರಶ್ನೋತ್ತರ ವೇಳೆ ಎಂ.ಆರ್.ಮಂಜುನಾಥ್ ಪ್ರಸ್ತಾವಕ್ಕೆ ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜ್ ಪರ ಉತ್ತರ ನೀಡಿದ ಡಾ.ಸುಧಾಕರ್, ಅಂತರ್ಜಲ ಮಟ್ಟ ಅಭಿವೃದ್ಧಿಗೊಳಿಸುವಲ್ಲಿ ನೀರಾವರಿ ಕೆರೆಗಳು, ಪಿಕಪ್ ಚೆಕ್ ಡ್ಯಾಂ ನಿರ್ಮಾಣ, ಕೆರೆಗಳಿಗೆ ಕುಡಿಯುವ ನೀರು ತುಂಬಿಸುವ ಯೋಜನೆ ಸೇರಿದಂತೆ ಇತ್ಯಾದಿ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. ಕಳೆದ 4 ವರ್ಷಗಳಲ್ಲಿ 9 ಕೋಟಿ ರೂ.ಗಿಂತ ಹೆಚ್ಚು ಅನುದಾನವನ್ನು ಹನೂರು ಕ್ಷೇತ್ರಕ್ಕೆ ನೀಡಲಾಗಿದೆ. ಪ್ರಸ್ತುತ ಬಜೆಟ್‌ನಲ್ಲಿ 490 ಕೋಟಿ ಮೀಸಲಿರಿಸಿದೆ ಎಂದರು.

ಮಾ.27ರಿಂದ ಶ್ರೀ ರಾಮಾಭ್ಯುದಯ ಸಭಾದಿಂದ ಶ್ರೀ ರಾಮೋತ್ಸವ

ಮೈಸೂರು,ಮಾ.17–ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಶ್ರೀ ಪರಭಾವ ಸಂವತ್ಸರದ 136ನೇ ವರ್ಷದ ಶ್ರೀ ರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾ.27ರಿಂದ ಏ.10ರವರೆಗೆ ಪ್ರತಿನಿತ್ಯ ಸಂಜೆ 6.30ರಿಂದ 9.30ರವರೆಗೆ ಶ್ರೀರಾಮಪೇಟೆಯ ಕುಂಚಿಟಿಗರ ಸಂಘದ ಶ್ರೀಮತಿ ಆಲಮ್ಮನವರ ಛತ್ರದಲ್ಲಿ ಏರ್ಪಡಿಸಲಾಗಿದೆ.



ಮಾ.27: ವಿದ್ವಾನ್ **ಸೂರ್ಯ ಗಾಯತ್ರಿ** ಮತ್ತು ವೃಂದದವರಿಂದ ಶಾಸ್ತ್ರೀಯ ಸಂಗೀತ. **ಮಾ.28:** ವಿದ್ವಾನ್ **ರಾಮಕೃಷ್ಣ ಮೂರ್ತಿ** ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಸಾಯಿ ರಕ್ಷಿತ್–ಪಿಟೀಲು, ವಿದ್ವಾನ್ ಡೆಲ್ಲಿ ಸಾಯಿರಾಮ್–ಮೃದಂಗ,






ಮಾ.29: ವಿದ್ವಾನ್ **ಅನೂರ್ ಅನಂತಕೃಷ್ಣ ಶರ್ಮ** ಮತ್ತು ವೃಂದದವರಿಂದ ಲಯ ಲಾವಣ್ಯ, ತಾಳವಾದ್ಯ ಕಛೇರಿ. **ಮಾ.30:** ವಿದುಷಿ **ಜಯಂತಿ ಕುಮರೇಶ್** ಮತ್ತು ವಿದುಷಿ **ಅಕ್ಕ ಶುಭಲಕ್ಷ್ಮಿ** ಅವರಿಂದ ಜುಗಲ್‌ಬಂದಿ ವೀಣಾ ಮತ್ತು ಪಿಟೀಲು ವಾದನ, ವಿದ್ವಾನ್ ಅರ್ಜುನ್ ಕುಮಾರ್–ಮೃದಂಗ, ವಿದ್ವಾನ್ ಜಿ.ಎಸ್.ರಾಮಾನುಜಂ–ಘಟಂ.




ಮಾ.31: ಅಕ್ಕರೈ ಸಹೋದರಿಯರಾದ ವಿದುಷಿ ಎಸ್.ಶುಭಲಕ್ಷ್ಮಿ ಮತ್ತು **ವಿದುಷಿ ಎಸ್. ಸ್ವರ್ಣ ಲತಾ** ಅವರಿಂದ ದ್ವಂದ್ವ ಶಾಸ್ತ್ರೀಯ ಸಂಗೀತ, ವಿದ್ವಾನ್ ಗೋಕುಲ್–ಪಿಟೀಲು, ವಿದ್ವಾನ್ ಅರ್ಜುನ್‌ಕುಮಾರ್–ಮೃದಂಗ, ವಿದ್ವಾನ್ ರಂಗನಾಥ ಚಕ್ರವರ್ತಿ–ಘಟಂ.



ಏ.1: ವಿದ್ವಾನ್ ಸಿಕ್ಕಿಲ್ ಗುರುಚರಣ್ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಮತ್ತೂರು ಶ್ರೀನಿಧಿ–ಪಿಟೀಲು, ವಿದ್ವಾನ್ ಹೆಚ್.ಎಸ್. ಸುಧೀಂದ್ರ–ಮೃದಂಗ, ವಿದ್ವಾನ್ ಗಿರಿಧರ್ ಉಡುಪ–ಘಟಂ.



ಏ.2: ಪಂಡಿತ್ ವೆಂಕಟೇಶ್ ಕುಮಾರ್ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪಂಡಿತ್ ವೀರಭದ್ರಯ್ಯ ಹಿರೇಮಠ–ಹಾರ್ಮೋನಿಯಂ, ಪಂಡಿತ್ ಕೇಶವ ಜೋಷಿ–ತಬಲ,



ಏ.3: ವಿದುಷಿ ಗಿರಿಜಾ ಶಂಕರ್ ಸುಂದರೇಶನ್ ಅವರಿಂದ ಶಾಸ್ತ್ರೀಯ ಸಂಗೀತ, ವಿದುಷಿ ಜೋತ್ಸ್ನ ಶ್ರೀಕಾಂತ್–ಪಿಟೀಲು, ವಿದ್ವಾನ್ ಜಯಚಂದ್ರರಾವ್–ಮೃದಂಗ, ವಿದುಷಿ ಸುಕನ್ಯಾ ರಾಮ್ ಗೋಪಾಲ್–ಘಟಂ,





ಏ.4: ತ್ರಿಚೂರ್ ಸಹೋದರರಾದ **ವಿದ್ವಾನ್ ಶ್ರೀಕೃಷ್ಣ ಮೋಹನ್** ಮತ್ತು **ವಿದ್ವಾನ್ ರಾಂಕುಮಾರ್ ಮೋಹನ್** ಅವರಿಂದ ಶಾಸ್ತ್ರೀಯ ಸಂಗೀತ.



ಏ.5: ವಿದ್ವಾನ್ ಸಂದೀಪ್ ನಾರಾಯಣ್ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಹೆಚ್.ಎನ್. ಭಾಸ್ಕರ್–ಪಿಟೀಲು, ವಿದ್ವಾನ್ ಕೆ.ವಿ. ಪ್ರಸಾದ್–ಮೃದಂಗ, ವಿದ್ವಾನ್ ಗುರುಪ್ರಸನ್ನ ಕಂಜರಿ.

ಏ.6: ಶ್ರೀ ರಾಮ ಪಟ್ಟಾಭಿಷೇಕ, ಬೆಳಗ್ಗೆ 9.30ಕ್ಕೆ ರಾಮಮಂದಿರದಲ್ಲಿ ಅಭಿಷೇಕ, ಅರ್ಚನೆ. ಶ್ರೀಮತಿ ವಸಂತ ವೆಂಕಟೇಶ್–ಗಮಕ ವಾಚನ, ಕೃ ರಾಮಚಂದ್ರ–ವ್ಯಾಖ್ಯಾನ, ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ, **ಏ.7:** ವೀಣಾ ವಿ.ಶ್ರೀಪ್ರದ ಅವರಿಂದ ವೀಣಾವಾದನ. **ಏ.8:** ಸಂಜೆ 6.30ಕ್ಕೆ ಹನುಮಂತೋತ್ಸವ, ರಾಜಬೀದಿಗಳಲ್ಲಿ ಮೆರವಣಿಗೆ, ವಿದುಷಿ ಪುರುಷೋತ್ತಮ ಮತ್ತು ವೃಂದದವರಿಂದ ನಾದಸ್ವರವಾದನ, ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ, **ಏ.9:** ಶಯನೋತ್ಸವ, ಸಂಜೆ 6.30ಕ್ಕೆ ವಿದುಷಿ ಅರ್ಚನ ಸಿರಸಿ ಮತ್ತು ವೃಂದದವರಿಂದ ಶಯನೋತ್ಸವ. **ಏ.10:** ಒಳಗುಡಿ ಉತ್ಸವ, ಸಂಜೆ 6.30 ರಿಂದ ಡಾ. ಮಾಲಿನಿ ಅವರಿಂದ ಹರಿಕಥೆ. ಇದರ ಜೊತೆಗೆ ಏ.3ರಿಂದ 4 ರವರೆಗೆ ಸಂಜೆ 5 ರಿಂದ 6ರವರೆಗೆ ರಾಮಮಂದಿರದಲ್ಲಿ ನಿವೃತ್ತ ಇಂಜಿನಿಯರ್ ಕೆ.ರಾಮಚಂದ್ರರಿಂದ ರಾಮಾಯಣ ಪ್ರವಚನ, ಏ.5 ರಂದು ಸಂಜೆ 5ರಿಂದ 6ರವರೆಗೆ ರಾಮಮಂದಿರದಲ್ಲಿ ರಘುಲೀಲಾ ಸ್ಕೂಲ್ ಆಫ್ ಮ್ಯೂಸಿಕ್‌ನಿಂದ ನಗರ ಸಂಕೀರ್ತನೆ, ಮಾ.29ರ ಭಾನುವಾರ ಬೆಳಗ್ಗೆ 10 ಗಂಟೆಗೆ ಸೀತಾಕಲ್ಯಾಣ ಆಯೋಜಿಸಲಾಗಿದೆ.

ದೇಶ - ವಿದೇಶ

ಐಸಿಸಿ ಜೊತೆ ನಂಟು; 19 ವರ್ಷದ ದಂತ ವೈದ್ಯಕೀಯ ವಿದ್ಯಾರ್ಥಿ ಬಂಧನ

ಲಕ್ನೋ: ನಿಷೇಧಿತ ಭಯೋತ್ಪಾದಕ ಸಂಘಟನೆ ಐಸಿಸ್ ಜೊತೆಗೆ ಸಂಪರ್ಕ ಹೊಂದಿದ್ದ 19 ವರ್ಷದ ದಂತವೈದ್ಯಕೀಯ ವಿದ್ಯಾರ್ಥಿಯನ್ನು ಉತ್ತರ ಪ್ರದೇಶದ ಭಯೋತ್ಪಾದನಾ ವಿರೋಧಿ ದಳ(ಎಟಿಎಸ್) ಬಂಧಿಸಿದೆ. ಬಂಧಿತ ಆರೋಪಿಯನ್ನು ಉತ್ತರ ಪ್ರದೇಶದ ಸಹರಾನ್‌ಪುರ ಜಿಲ್ಲೆಯ ನಿವಾಸಿ ಹ್ಯಾರಿಸ್ ಅಲಿ ಎಂದು ಗುರುತಿಸಲಾಗಿದೆ. ಈತ ಮೊರಾದಾಬಾದ್‌ನ ಕಾಲೇಜೊಂದರಲ್ಲಿ ದ್ವಿತೀಯ ವರ್ಷದ ಬಿಡಿಎಸ್ ವ್ಯಾಸಂಗ ಮಾಡುತ್ತಿದ್ದನು. ಈತ ಕಳೆದ ಕೆಲವು ಸಮಯದಿಂದ ಇನ್‌ಸ್ಟಾಗ್ರಾಮ್, ಸೆಶನ್ ಮತ್ತು ಡಿಸ್ಕಾರ್ಡ್‌ನಂತಹ ಎನ್‌ಕ್ರಿಪ್ಟೆಡ್ ಅಪ್ಲಿಕೇಶನ್‌ಗಳ ಮೂಲಕ ಐಸಿಸ್ ಹ್ಯಾಂಡ್ಲರ್‌ಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದನು ಎಂದು ಎಟಿಎಸ್ ಅಧಿಕಾರಿ ಗಳು ತಿಳಿಸಿದ್ದಾರೆ. ಈತ ಅಲ್ ಇತ್ತಿಹಾದ್ ಮೀಡಿಯಾ ಫೌಂಡೇಶನ್ ಎಂಬ ಹೆಸರಿನಲ್ಲಿ ಪ್ರತ್ಯೇಕ ಗ್ರೂಪ್ ನಡೆಸುತ್ತಿದ್ದನು. ಇದರ ಮೂಲಕ ಐಸಿಸ್ ಸಿದ್ಧಾಂತಗಳನ್ನು ಪ್ರಚಾರ ಮಾಡುವುದು ಮತ್ತು ಇಸ್ಲಾಮಿಕ್ ಕ್ಯಾಲಿಫೇಟ್ ಸ್ಥಾಪನೆಯ ಕುರಿತು ಉಗ್ರಗಾಮಿ ಸಾಹಿತ್ಯ ಹಂಚಿಕೊಳ್ಳುತ್ತಿದ್ದನು ಎಂಬ ಆರೋಪ ಕೇಳಿಬಂದಿದೆ. ವರ್ಚುವಲ್ ಪ್ರೈವೇಟ್ ನೆಟ್‌ವರ್ಕ್ ಬಳಸಿ ತನ್ನ ಗುರುತನ್ನು ಮರೆಮಾಚುತ್ತಿದ್ದ ಹ್ಯಾರಿಸ್, ಭಾರತದಲ್ಲಿ ಸಂಘಟನೆಯನ್ನು ಬಲಪಡಿಸಲು ಮತ್ತು ಸಮಾನ ಮನಸ್ಕ ಯುವಕರನ್ನು ಉಗ್ರಗಾಮಿ ಚಟುವಟಿಕೆಗಳಿಗೆ ಸೆಳೆಯಲು ಪ್ರಯತ್ನಿಸುತ್ತಿದ್ದನು ಎನ್ನಲಾಗಿದೆ.



ಕಾಬೂಲ್ ಆಸ್ಪತ್ರೆ ಮೇಲೆ ಪಾಕ್ ದಾಳಿ; 400ಕ್ಕೂ ಅಧಿಕ ಸಾವು

ಕಾಬೂಲ್: ಕಾಬೂಲ್‌ನಲ್ಲಿರುವ ಆಸ್ಪತ್ರೆಯೊಂದರ ಮೇಲೆ ಸೋಮವಾರ ತಡರಾತ್ರಿ ಪಾಕಿಸ್ತಾನ್ ವೈಮಾನಿಕ ದಾಳಿ ಮಾಡಿದ್ದು, ಘಟನೆಯಲ್ಲಿ 400ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ ಎಂದು ಅಫ್ಘಾನಿಸ್ತಾನ ಸರ್ಕಾರದ ಹಮ್ದುಲ್ಲಾ ಫಿತ್ರತ್ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.



ಪಾಕಿಸ್ತಾನವು ರಾಜಧಾನಿ ಕಾಬೂಲ್‌ನಲ್ಲಿರುವ ಆಸ್ಪತ್ರೆ ಮೇಲೆ ದಾಳಿ ನಡೆಸಿದ್ದು, ಘಟನೆಯಲ್ಲಿ ಆಸ್ಪತ್ರೆಯ ಬಹುಪಾಲು ನಾಶವಾಗಿದೆ. ದಾಳಿಯಲ್ಲಿ 400ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದು, 250ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ರಕ್ಷಣಾ ಕಾರ್ಯಾಚರಣೆಯು ಆರಂಭಗೊಂಡಿದೆ ಎಂದು ಹೇಳಿದ್ದಾರೆ. ಆದರೆ ಈ ದಾಳಿಯನ್ನು ಪಾಕಿಸ್ತಾನವು ನಿರಾಕರಿಸಿದೆ. ಇದು ಸುಳ್ಳು ಮತ್ತು ದಾರಿ ತಪ್ಪಿಸುವ ಹೇಳಿಕೆ, ಕಾಬೂಲ್ ಮೇಲಿನ ದಾಳಿಯಲ್ಲಿ ಯಾವುದೇ ನಾಗರಿಕ ಪ್ರದೇಶವನ್ನು ಗುರಿಯಾಗಿಸಿಕೊಂಡಿಲ್ಲ ಎಂದು ಪಾಕ್ ಮಾಹಿತಿ ಸಚಿವಾಲಯ ಹೇಳಿದೆ. ಆಸ್ಪತ್ರೆ ಮೇಲಿನ ದಾಳಿಯನ್ನು ಖಂಡಿಸಿರುವ ಅಫ್ಘಾನಿಸ್ತಾನದ ಸಚಿವರು, ದಾಳಿ ನಡೆದಿರುವ ವೀಡಿಯೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ದತ್ತು ಪಡೆದ ಮಗುವಿನ ಪಾಲನೆಗೂ ಹೆರಿಗೆ ರಜೆ



ನವದೆಹಲಿ: ಮೂರು ತಿಂಗಳಿಗಿಂತ ದೊಡ್ಡ ವಯಸ್ಸಿನ ಮಗುವನ್ನು ದತ್ತು ಪಡೆದುಕೊಂಡ ತಾಯಿಗೆ ಹೆರಿಗೆ ರಜೆ ನಿರಾಕರಿಸುವುದು ಸಂವಿಧಾನ ಬಾಹಿರ ಎಂದು ತಿಳಿಸಿರುವ ಸುಪ್ರೀಂಕೋರ್ಟ್, ರಜೆ ನೀಡದೆ ಇರುವುದಕ್ಕೆ ಕಾರಣ ಏನು? ಇದಕ್ಕೆ ಕಾನೂನು ತೊಡಕಿದ್ದರೆ ವರದಿ ನೀಡಿ ಎಂದು ಕೇಂದ್ರ ಸರ್ಕಾರಕ್ಕೆ ವಿವರಣೆ ಕೇಳಿದೆ. ಮಗುವನ್ನು ದತ್ತು ಪಡೆದುಕೊಂಡ ತಾಯಿ ಅದರ ವಯಸ್ಸು ಲೆಕ್ಕಿಸೋದಿಲ್ಲ. ಹೀಗಾಗಿ ಆಕೆಗೆ 12 ವಾರಗಳ ಹೆರಿಗೆ ರಜೆ ನೀಡಬೇಕು. ಮಗು ಮತ್ತು ತಾಯಿ ಜೊತೆ ಬೆರೆಯಲು ಸಮಯ ಬೇಕಾಗುತ್ತದೆ ಎಂದು ನ್ಯಾಯಮೂರ್ತಿ ಪಾರ್ದಿವಾಲ ಮತ್ತು ಮಹಾದೇವನ್ ಅವರಿದ್ದ ಪೀಠವು ಸ್ಪಷ್ಟಪಡಿಸಿದೆ. ಮೂರು ತಿಂಗಳಿಗಿಂತ ದೊಡ್ಡ ಮಕ್ಕಳನ್ನು ದತ್ತು ಪಡೆದ ತಾಯಂದರಿಗೆ 12 ವಾರಗಳ ರಜೆ ನೀಡಲಾಗುತ್ತಿರುವ ಬಗ್ಗೆ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಾಲಯ, ಕೇಂದ್ರ ಸರ್ಕಾರದ ವರದಿ ಕೇಳಿ ಡಿ.17ಕ್ಕೆ ವಿಚಾರಣೆ ಮುಂದೂಡಿದೆ.

ದತ್ತು ಸ್ವೀಕಾರವೂ ಸಂತಾನೋತ್ಪತ್ತಿ ಹಕ್ಕಿನ ಸಮಾನ ವ್ಯಾಯಾಮವಾಗಿದೆ. ದತ್ತು ಪಡೆದ ಮಗುವಿಗೆ ಮತ್ತು ಹೆರಿಗೆಯಾಗಿ ನೈಸರ್ಗಿಕವಾಗಿ ಹೊರಬಂದಂತಹ ಶಿಶುವಿಗೆ ಯಾವುದೇ ವ್ಯತ್ಯಾಸವಿಲ್ಲ. ಹೀಗಾಗಿ ಮಗು ದತ್ತು ಪಡೆದ ದಿನಾಂಕದಿಂದ 12 ವಾರದವರೆಗೆ ತಾಯಿ ಮಾತೃತ್ವ ಭತ್ಯೆಗೆ ಅರ್ಹಳು. ಅಲ್ಲದೆ ದತ್ತು ಪಡೆದ ತಂದೆಗೂ ಪಿತೃತ್ವ ರಜೆ ನೀಡುವಂತೆ ಸುಪ್ರೀಂಕೋರ್ಟ್ ಸಲಹೆ ನೀಡಿದೆ.

ತೈಲ ಬಿಕ್ಕಟ್ಟು; ಶ್ರೀಲಂಕಾದಲ್ಲಿ 4 ದಿನ ಮಾತ್ರ ಕೆಲಸ

ಕೊಲಂಬೊ: ವಾರದಲ್ಲಿ ನಾಲ್ಕು ದಿನ ಕೆಲಸ ನಿಯಮವನ್ನು ಮಾ.18ರಿಂದ ಜಾರಿಗೊಳಿಸಲು ಶ್ರೀಲಂಕಾ ಸರ್ಕಾರ ಮಂಗಳವಾರ ನಿರ್ಧರಿಸಿದೆ.




ಮಧ್ಯಪ್ರಾಚ್ಯದಲ್ಲಿನ ಸಂಘರ್ಷವು ಮುಂದುವರೆದಿರುವ ಕಾರಣ ತೈಲ ಕೊರತೆಯಾಗ ಬಹುದೆಂಬ ಮುಂಜಾಗ್ರತಾ ಕ್ರಮವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ. ದ್ವೀಪ ರಾಷ್ಟ್ರಗಳಲ್ಲಿ ವಾರಕ್ಕೆ ಐದು ದಿನ ಕೆಲಸ ಮಾಡಬೇಕೆಂಬ ನಿಯಮವಿದೆ. ಆದರೆ ಇಂಧನ ಸಮಸ್ಯೆ ಬಗೆಹರಿಯುವವರೆಗೆ ಪ್ರತಿ ಬುಧವಾರವನ್ನು ಸಾರ್ವಜನಿಕ ರಜಾ ದಿನ ಎಂದು ಶ್ರೀಲಂಕಾ ಸರ್ಕಾರ ಘೋಷಿಸಿದೆ.

ಶ್ರೀಲಂಕಾ ಸರ್ಕಾರದ ಹೊಸ ರಜಾ ನಿಯಮವು ಆರೋಗ್ಯ, ಬಂದರು, ನೀರು ಸರಬರಾಜು ಹಾಗೂ ತೆರಿಗೆ ಇಲಾಖೆಗೆ ಅನ್ವಯಿಸುವುದಿಲ್ಲ. ಶಾಲಾ–ಕಾಲೇಜು, ವಿಶ್ವವಿದ್ಯಾಲಯ ಮತ್ತು ನ್ಯಾಯಾಂಗ ಮಾತ್ರ ನಾಲ್ಕು ದಿನ ಕಾರ್ಯ ನಿರ್ವಹಿಸಬೇಕು. ಸರ್ಕಾರಿ ಇಲಾಖೆಗಳಂತೆ ಖಾಸಗಿ ವಲಯವೂ ಇದೇ ರೀತಿಯ ಕ್ರಮಕ್ಕೆ ಮುಂದಾಗಬೇಕು ಎಂದು ಅಗತ್ಯ ಸೇವೆಗಳ ಕಮಿಷನರ್ ಜನರಲ್ ಪ್ರಭಾತ್ ಚಂದ್ರಕೀತಿ ತಿಳಿಸಿದ್ದಾರೆ.

ಮಾಟಮಂತ್ರ ಶಂಕೆ; ದಂಪತಿ, ಪುತ್ರನ ಬರ್ಬರ ಹತ್ಯೆ

ರಾಂಚಿ: ತಮ್ಮ ವಿರುದ್ಧ ಮಾಟಮಂತ್ರ ಮಾಡಿಸುತ್ತಿದ್ದಾರೆ ಎಂಬ ಶಂಕೆಯಿಂದ ದಂಪತಿ ಹಾಗೂ ಅವರ 12 ವರ್ಷದ ಮಗನನ್ನು ಬರ್ಬರವಾಗಿ ಹತ್ಯೆ ಮಾಡಿರುವ ಅಮಾನವೀಯ ಘಟನೆ ಜಾರ್ಖಂಡ್‌ನ ಗೊಡ್ಡಾದಲ್ಲಿ ವರದಿಯಾಗಿದೆ. ಸೋಮವಾರ ತಡರಾತ್ರಿ ಅಪರಿಚಿತ ದುಷ್ಕರ್ಮಿಗಳ ಗುಂಪು, ಗೊಡ್ಡಾದ ಡ್ಯಾಂಗ್ ಟೋಲಾದಲ್ಲಿ ಬುಡಕಟ್ಟು ಸಮುದಾಯದ ದರ್ಬಾರಿ ಮುರ್ಮು(50), ಇವರ ಪತ್ನಿ ಮುಕ್ಕು ಬಾಸ್ಕಿ(45) ಹಾಗೂ ಪುತ್ರ ಜೀತ್ ನಾರಾಯಣ್ ಮುರ್ಮು(12) ಅವರ ಮೇಲೆ ಹರಿತವಾದ ಆಯುಧಗಳಿಂದ ದಾಳಿ ಮಾಡಿ, ಬರ್ಬರವಾಗಿ ಹತ್ಯೆ ಮಾಡಿದ್ದು, ಇಂದು ಬೆಳಗ್ಗೆ ಬೆಳಕಿಗೆ ಬಂದಿದೆ.



ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದ್ದು, ಮೂವರು ಶಂಕಿತರನ್ನು ಬಂಧಿಸಲಾಗಿದೆ. ಪ್ರಾಥಮಿಕ ತನಿಖೆಯಲ್ಲಿ ಈ ಪ್ರಕರಣವು ಮಾಟಮಂತ್ರಕ್ಕೆ ಸಂಬಂಧಿಸಿದ್ದು ಎಂದು ತೋರುತ್ತದೆ. ಆದಾಗ್ಯೂ, ಎಲ್ಲಾ ಆಯಾಮಗಳಿಂದಲೂ ತನಿಖೆ ಮುಂದುವರೆಸಲಾಗಿದೆ. ಹತ್ಯೆಗೆ ಬಳಸಿರುವ ಹರಿತವಾದ ಕೊಡಲಿಯನ್ನು ವಶಪಡಿಸಿಕೊಳ್ಳಲಾಗಿದೆ. ಘಟನೆ ಕುರಿತ ಸಂಪೂರ್ಣ ಮಾಹಿತಿಯನ್ನು ಶೀಘ್ರದಲ್ಲೇ ಬಹಿರಂಗಪಡಿಸಲಾಗುವುದು ಎಂದು ಗೊಡ್ಡಾ ಉಪವಿಭಾಗೀಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಕಬಳಿಸಿರುವ ಅರಣ್ಯ ಭೂಮಿ ಹುಡುಕಿಕೊಡುವಂತೆ ಆಗ್ರಹಿಸಿ ಪ್ರತಿಭಟನೆ

ಶ್ರೀರಂಗಪಟ್ಟಣ, ಮಾ.17–ಅರಣ್ಯ ಭೂಮಿಯನ್ನು ಭೂಗಳ್ಳರು ಅಕ್ರಮವಾಗಿ ಕಬಳಿಸಿದ್ದಾರೆ ಅದನ್ನು ಹುಡುಕಿಕೊಡುವಂತೆ ಭೂಮಿತಾಯಿ ಹೋರಾಟ ಸಮಿತಿ ಸದಸ್ಯರು ಡಿವೈಎಸ್‌ಪಿ ಯು.ಡಿ ಕೃಷ್ಣ ಕುಮಾರ್ ಅವರಿಗೆ ದೂರು ನೀಡಿದರು.

ಭೂಮಿತಾಯಿ ಹೋರಾಟ ಸಮಿತಿ ಅಧ್ಯಕ್ಷ ಬಿ.ಸಿ ಕೃಷ್ಣೇಗೌಡ ಹಾಗೂ ಹಿರಿಯ ಹೋರಾಟಗಾರ ಕೆ.ಎಸ್ ನಂಜುಂಡೇಗೌಡ ನೇತೃತ್ವದಲ್ಲಿ ಡಿವೈ ಎಸ್‌ಪಿ ಕಚೇರಿಗೆ ಭೇಟಿ ನೀಡಿ, ಬೆಳವಾಡಿ ಸರ್ವೆ ನಂ. 64ಕ್ಕೆ ಸಂಬಂಧಿಸಿದಂತೆ ತಹಸೀಲ್ದಾರ್ ಹಾಗೂ ಕಂದಾಯ ಇಲಾಖೆಗೆ ದೂರು ನೀಡಿದ್ದರೂ ಯಾರೂ ಕ್ರಮ ವಹಿಸಿಲ್ಲ ಎಂದು ಆರೋಪಿಸಿದರು.

ತಹಸೀಲ್ದಾರ್ ಕಚೇರಿ ಎದುರು ಕೆಲ ಕಾಲ ಧರಣಿ ನಡೆಸಿ, ಕಳೆದ 2–3 ವರ್ಷಗಳಿಂದ ಭೂಮಿ ತಾಯಿ ಹೋರಾಟ ಸಮಿತಿ ವತಿಯಿಂದ ಈ ಅಕ್ರಮದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರುತ್ತಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಅರಣ್ಯ ಇಲಾಖೆಯ ಮುಖ್ಯಸ್ಥರು, ತಹಸೀಲ್ದಾರ್, ಸರ್ವೆ ಇಲಾಖೆ ಮುಖ್ಯಸ್ಥರು ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಈ ಅಮೂಲ್ಯ ಆಸ್ತಿಯನ್ನು ರಕ್ಷಿಸುವಲ್ಲಿ ವಿಫಲರಾಗಿದ್ದಾರೆ ಎಂದು ಹಿರಿಯ ಹೋರಾಟಗಾರ ಕೆ.ಎಸ್ ನಂಜುಂಡೇಗೌಡ ಆರೋಪಿಸಿದರು. ಈಗಾಗಲೇ ಈ ಹಗರಣದ ಬಗ್ಗೆ ಮುಖ್ಯಮಂತ್ರಿಗಳು, ವಿಪಕ್ಷ ನಾಯಕ ಆರ್. ಅಶೋಕ್, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಅರಣ್ಯ ಸಚಿವ ಈಶ್ವರ ಖಂಡ್ರೆ ಸೇರಿದಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದ್ದು, ಸರ್ಕಾರಿ ಆಸ್ತಿಯನ್ನು ಕಬಳಿಸಿರುವ ಭೂಗಳ್ಳರ ವಿರುದ್ಧ ಹಾಗೂ ಕರ್ತವ್ಯ ಲೋಪ ಎಸಗಿರುವ ಅಧಿಕಾರಿಗಳ ವಿರುದ್ಧ ತಕ್ಷಣವೇ ಕಾನೂನು ಕ್ರಮ ಜರುಗಿಸಿ, ಭೂಮಿಯನ್ನು ಮರಳಿ ಪಡೆಯಬೇಕು ಎಂದು ಬಿ.ಸಿ ಕೃಷ್ಣೇಗೌಡ ಒತ್ತಾಯಿಸಿದರು.



ಕಬಳಿಸಿರುವ ಅರಣ್ಯ ಭೂಮಿ ಹುಡುಕಿಕೊಡುವಂತೆ ಭೂಮಿ ತಾಯಿ ಹೋರಾಟ ಸಮಿತಿ ಸದಸ್ಯರು ಡಿವೈಎಸ್‌ಪಿ ಅವರಿಗೆ ಮನವಿ ಸಲ್ಲಿಸಿದರು.

ತಾಲೂಕಿನ ಬೆಳವಾಡಿ ಗ್ರಾಮದ ಸರ್ವೆ ನಂ. 64 ರಲ್ಲಿ ಅರಣ್ಯ ಇಲಾಖೆಗೆ 25 ಎಕರೆ 3 ಗುಂಟೆ ಜಮೀನು ಮಂಜೂರಾಗಿತ್ತು. ಪ್ರಸ್ತುತ ಈ ಭಾಗವು ಮೈಸೂರು ನಗರಕ್ಕೆ ಅತ್ಯಂತ ಸಮೀಪದಲ್ಲಿರುವುದರಿಂದ, ಜಮೀನಿನ ಮೌಲ್ಯ ಪ್ರತಿ ಎಕರೆಗೆ 3 ಕೋಟಿಗೂ ಅಧಿಕವಿದೆ ಎಂದು ಅಂದಾಜಿಸಲಾಗಿದೆ. ಒಟ್ಟಾರೆ ಸುಮಾರು 100 ಕೋಟಿ ರೂ. ಬೆಲೆಬಾಳುವ ಜಮೀನು ಹಾಗೂ ಸಾರ್ವಜನಿಕ ಆಸ್ತಿಯನ್ನು ಭೂಗಳ್ಳರು ವಂಚನೆಯ ಮೂಲಕ ಗುಳುಂ ಮಾಡಿದ್ದಾರೆ. ಕಳುವಾಗಿರುವ ಭೂಮಿಯನ್ನು ಹುಡುಕಿಕೊಡುವಂತೆ ತಹಶೀಲ್ದಾರ್ ಚೇತನಾ ಯಾದವ್ ಅವರಿಗೆ ನೀಡಿರುವ ಮನವಿಯಲ್ಲಿ ಆಗ್ರಹಿಸಿದರು.

ಹುಂಡವಾಡಿ ಮಹದೇವ್ರು, ಶಿವಣ್ಣ ಜಯರಾಮು, ರಾಮಚಂದ್ರು ರಾಮಕೃಷ್ಣ ಮಹದೇವಪುರ ಕೃಷ್ಣ ಸೇರಿದಂತೆ ನೂರಾರು ಮಂದಿ ಪ್ರತಿಭಟನಕಾರರು ಭಾಗವಹಿಸಿದ್ದರು.

ಧರಣಿನಿರತರ ಮೇಲೆ ದೌರ್ಜನ್ಯ ಖಂಡಿಸಿ ಪ್ರತಿಭಟನೆ



ಪೊಲೀಸರ ದೌರ್ಜನ್ಯ ಖಂಡಿಸಿ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮದ್ದೂರು, ಮಾ.17–ಶಾಂತಿಯುತವಾಗಿ ಧರಣಿ ನಡೆಸುತ್ತಿದ್ದ ಸತ್ಯಾಗ್ರಹಿಗಳ ಮೇಲೆ ದೌರ್ಜನ್ಯ ನಡೆಸಿರುವ ಪೊಲೀಸ್ ಅಧಿಕಾರಿ, ತಾಲೂಕು ಪಂಚಾಯಿತಿ ಇಓ ಹಾಗೂ ಪಿಡಿಓ ಮೇಲೆ ಕಾನೂನು ಕ್ರಮ ಜರುಗಿಸಿ ಅವರನ್ನು ಕೂಡಲೇ ಅಮಾನತುಗೊಳಿಸಬೇಕೆಂದು ಒತ್ತಾಯಿಸಿ ಮಂಗಳವಾರ ಹಲವು ಗ್ರಾಮಸ್ಥರು ಬೃಹತ್ ಪ್ರತಿಭಟನೆ ನಡೆಸಿದರು.

ಗೊರವನಹಳ್ಳಿ ಗ್ರಾಪಂ ಕಚೇರಿ ಆವರಣದಲ್ಲಿ ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದ ಗ್ರಾಮಸ್ಥರು ಮತ್ತು ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿರುವ ಅಧಿಕಾರಿಗಳ ವಿರುದ್ಧ ರೈತ ಸಂಘದ ಕಾರ್ಯಕರ್ತರು, ಗೊರವನಹಳ್ಳಿ, ಗೆಜ್ಜಲಗೆರೆ, ಸೋಮನಹಳ್ಳಿ ಹಾಗೂ ಚಾಮನಹಳ್ಳಿ ಗ್ರಾಮಸ್ಥರು ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ನಾಯಕಿ ಸುನಂದ ಜಯರಾಮ್ ಮಾತನಾಡಿ, ಮದ್ದೂರು ನಗರಸಭೆಗೆ ಗೊರವನಹಳ್ಳಿ ಗ್ರಾಮವನ್ನು ಸೇರಿಸಿರುವುದನ್ನು ವಿರೋಧಿಸಿ ಗೊರವನಹಳ್ಳಿ ಗ್ರಾಪಂ ಕಚೇರಿ ಎದುರು 66 ದಿನಗಳಿಂದ ಶಾಂತಿಯುತವಾಗಿ ಧರಣಿ ನಡೆಸಿಕೊಂಡು ಬರಲಾಗುತಿತ್ತು. ಎರಡನೆ ಶನಿವಾರ ಸಂಜೆ 4.30ರ ಸಮಯದಲ್ಲಿ ಏಕಾಏಕಿ 200ಕ್ಕೂ ಹೆಚ್ಚು ಪೊಲೀಸರು ಪಂಚಾಯಿತಿ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಬಂದು ಗೊರವನಹಳ್ಳಿ ಗ್ರಾಪಂ ಕಚೇರಿಯಲ್ಲಿ ಇರಿಸಿದ್ದ ಕಡತಗಳನ್ನು ತೆಗೆದು ಕೊಂಡು ಹೋಗಲು ಮುಂದಾದಾಗ ಧರಣಿ ನಿರತರು ಪ್ರಕರಣ ನ್ಯಾಯಾಲಯದಲ್ಲಿ ದಾವೆ ಇದ್ದು ವಿಚಾರಣೆ ನಡೆಯುತ್ತಿರುವ ಹಂತದಲ್ಲಿ ದಾಖಲೆಗಳ ಸ್ಥಳಾಂ ತರದ ಕ್ರಮ ಸರಿಯಾದುದ್ದಲ್ಲ. ನ್ಯಾಯಾಲಯದ ತೀರ್ಪು ಬರುವವರೆಗೆ ಕಾಯಿರಿ ಎಂದಾಗ ಯಾವ ಮುನ್ಸೂಚನೆಯನ್ನು ನೀಡದೆ ಪೊಲೀಸರು ಚಳವಳಿನಿರತರನ್ನು ಮನ ಬಂದಂತೆ ತಳ್ಳಿ, ಲಾಠಿ ಯಿಂದ ಹೊಡೆದಿದ್ದಾರೆ ಎಂದು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಗರಸಭೆಯಿಂದ ಗೆಜ್ಜಲಗೆರೆ, ಗೊರವನಹಳ್ಳಿ, ಸೋಮನಹಳ್ಳಿ ಹಾಗೂ ಚಾಮನಹಳ್ಳಿ ಗ್ರಾಪಂಗಳನ್ನು ಕೈ ಬಿಡುವ ವರೆಗೂ ಗೊರವನಹಳ್ಳಿ ಹಾಗೂ ಗೆಜ್ಜಲಗೆರೆ ಗ್ರಾಪಂ ಆವರಣದಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿಯನ್ನು ಕೈ ಬಿಡುವ ಪ್ರಶ್ನೆಯೇ ಇಲ್ಲ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಪ್ರತಿಭಟನೆಗೂ ಮುನ್ನ ನಗರದ ಪ್ರವಾಸಿ ಮಂದಿರದಿಂದ ಪ್ರತಿಭಟನಾಕಾರರು ಪ್ರಮುಖ ಬೀದಿಗಳಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆಯೊಂದಿಗೆ ತಾಲೂಕು ಕಚೇರಿಗೆ ಆಗಮಿಸಿ ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿಗೆ ಮನವಿ ಪತ್ರ ಸಲ್ಲಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ್, ಮುಖಂಡರಾದ ಸುನಂದ ಜಂಬುರಾಮು, ಸೊ.ಶಿ.ಪ್ರಕಾಶ್, ವಿನೋದ್‌ಬಾಬು, ಶ್ರೀಲತಾ, ಸಿದ್ದರಾಜಣ್ಣ, ಸುರೇಶ್, ರವಿ, ರಾಜಣ್ಣ, ಉಮೇಶ್, ಪ್ರಸನ್ನ, ಮೋಹನ್, ಅವಿನಾಶ್, ಮಹೇಶ್, ಸಂತೋಷ್, ಶಿವಣ್ಣ, ಪ್ರಮೋದ್, ಜಿ.ಸಿ.ಶಿವಪ್ಪ, ಶಿವರಾಮು, ಸಂಪತ್ ಸೇರಿದಂತೆ ಇತರರು ಇದ್ದರು.

ಬಾಲ್ಯವಿವಾಹದ ಬಗ್ಗೆ ಜನಜಾಗೃತಿ ಜಾಥಾ



ಬಾಲ್ಯ ವಿವಾಹ ತಡೆ ಜಾಗೃತಿ ಜಾಥಕ್ಕೆ ಸಿವಿಲ್ ನ್ಯಾಯಾಧೀಶ ಎಂ. ಆನಂದ್ ಚಾಲನೆ ನೀಡಿದರು.

ಪಾಂಡವಪುರ, ಮಾ.17–ಬಾಲ್ಯ ವಿವಾಹದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದಕ್ಕಾಗಿ ಪಟ್ಟಣದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಬೃಹತ್ ಜನಜಾಗೃತಿ ಜಾಥಾ ನಡೆಸಿದರು.

ತಾಲೂಕು ಕಚೇರಿಯಿಂದ ಹೊರಟ ಜಾಗೃತಿ ಜಾಥಾಕ್ಕೆ ಸಿವಿಲ್ ನ್ಯಾಯಾಧೀಶ ಎಂ. ಆನಂದ್ ಚಾಲನೆ ನೀಡಿದರು. ಅಲ್ಲಿಂದ ಹೊರಟ ಜಾಗೃತಿ ಜಾಥವು ಪಟ್ಟಣದ ವಿವಿಧ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ವಿಜಯ ಕಾಲೇಜು ಬಳಿ ಅಂತಿಮಗೊಳಿಸಿದರು. ನಂತರ ವಿಜಯ ಕಾಲೇಜಿನ ಸಭಾಂಗಣದಲ್ಲಿ ಪ್ರತಿಜ್ಞಾ ವಿಧಿ ಬೋಧನೆ ಮಾಡಿ, ತಾಲೂಕನ್ನು ಬಾಲ್ಯ ವಿವಾಹ ಮುಕ್ತ ತಾಲೂಕನ್ನಾಗಿ ಮಾಡಬೇಕೆಂಬ ಸಂಕಲ್ಪವನ್ನು ತೆಗೆದುಕೊಂಡಿದ್ದು, ಅದಕ್ಕಾಗಿ ಜಾಗೃತಿ ಜಾಥ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಸಾರ್ವಜನಿಕರಿಗೆ ಬಾಲ್ಯ ವಿವಾಹ ತಪ್ಪು ಎನ್ನುವುದರ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಆದಾಗ್ಯೂ ಕೆಲವರು ಮೌಢ್ಯದಿಂದಲೂ, ಬಡತನದಿಂದಲೂ ಅಥವಾ ಆತುರದ ನಿರ್ಧಾರಗಳಿಂದಲೂ ಬಾಲ್ಯವಿವಾಹವನ್ನು ಮಾಡುತ್ತಿದ್ದಾರೆ ಎಂದು ವಿಷಾದಿಸಿದರು.

ಸಿಡಿಪಿಓ ಪೂರ್ಣಿಮಾ ಮಾತನಾಡಿದರು. ಮಕ್ಕಳ ಆಯೋಗದ ಸದಸ್ಯ ವೆಂಕಟೇಶ್, ಜಿಲ್ಲಾ ಉಪ ನಿರ್ದೇಶಕಿ ಆಶಾ, ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ರಶ್ಮಿ, ಉಪ ತಹಸೀಲ್ದಾರ್ ಸಂತೋಷ್, ತಾಪಂ ಇಓ ವೀಣಾ, ಪುರಸಭೆ ಮುಖ್ಯಾಧಿಕಾರಿ ಸಂತೋಷ್, ಪಿಎಸ್‌ಐ ಉಮೇಶ್, ಹಿಂದುಳಿದ ವರ್ಗಗಳ ಸಹಾಯಕ ನಿರ್ದೇಶಕ ನಂದಕುಮಾರ್, ಮೇಲ್ವಿಚಾರಕಿ ಜಾಕಿಯ ಬಾನು ಸೇರಿದಂತೆ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

ಐಚನಹಳ್ಳಿ ಏತ ನೀರಾವರಿ ಯೋಜನೆ ಉದ್ಘಾಟನೆಗೆ ಆದೇಶ



ಪಂಪ್‌ಹೌಸ್ ಕೇಂದ್ರವನ್ನು ಶಾಸಕ ಮಂಜು ವೀಕ್ಷಣೆ ಮಾಡಿದರು.

ಕೆ.ಆರ್.ಪೇಟೆ,ಮಾ.17–165ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಾಗಿರುವ ಐಚನಹಳ್ಳಿ ಏತ ನೀರಾವರಿ ಯೋಜನೆಯ ಎರಡನೇ ಹಂತದ ನೀರು ಪೂರೈಸುವ ಪಂಪ್‌ಹೌಸ್ ಕೇಂದ್ರವನ್ನು ಶಾಸಕ ಹೆಚ್.ಟಿ.ಮಂಜು ವೀಕ್ಷಣೆ ಮಾಡಿ ಆದಷ್ಟು ಬೇಗ ಉದ್ಘಾಟನೆಯಾಗುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ತಾಲೂಕಿನ ಮೊಸಳೇಕೊಪ್ಪಲು ಗ್ರಾಮದ ಬಳಿ ನಿರ್ಮಿಸಿರುವ ಎರಡನೇ ಹಂತದ ಏತ ನೀರಾವರಿ ಯೋಜನೆಯ ಪಂಪ್ ಹೌಸ್ ಕೇಂದ್ರ, ನಂತರ ಶೀಳನೆರೆ ಹೋಬಳಿಯ ಭೈರಾಪುರ ಕೆರೆಗೆ ಪ್ರಾಯೋಗಿಕವಾಗಿ ನೀರು ತುಂಬಿಸುವ ಕಾರ್ಯವನ್ನು ಸಣ್ಣ ನೀರಾವರಿ ಅಧಿಕಾರಿಗಳು ಮತ್ತು ಭೈರಾ ಪುರ ಗ್ರಾಮಸ್ಥರೊಂದಿಗೆ ವೀಕ್ಷಣೆ ಮಾಡಿ ನೀರನ್ನು ಪೋಲು ಮಾಡದಂತೆ ಸಂರಕ್ಷಣೆ ಮಾಡಬೇಕು ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯ ಸ್ವಾಮಿ ಮತ್ತು ಸಂಬಂಧಪಟ್ಟ ಸಚಿವರು ಉದ್ಘಾಟನೆಗೆ ಹಸಿರು ನಿಶಾನೆ ತೋರಿದ ಕೂಡಲೇ ದಿನಾಂಕ ನಿಗಧಿಪಡಿಸಿದ ಎರಡನೇ ಹಂತದ ಏತನೀರಾವರಿ ಯೋಜನೆಯನ್ನು ಉದ್ಘಾಟಿಸಲಾಗುವುದು. ಇದರ ಪ್ರಾಯೋ ಗಿಕ ನೀರು ಹರಿಸುವ ಕಾರ್ಯಕ್ಕೆ ಇಂದು ಚಾಲನೆ ನೀಡಲಾಗಿದೆ. ಅಧಿಕೃತ ಉದ್ಘಾ ಟನೆಯ ನಂತರ ಶೀಳನೆರೆ ಹೋಬಳಿಯ ಎಲ್ಲಾ ಕೆರೆಕಟ್ಟೆಗಳಿಗೆ ನೀರು ತುಂಬಿಸಲು ಕ್ರಮ ವಹಿಸಲಾಗುವುದು. ಎಂದರು.

ಸಣ್ಣ ನೀರಾವರಿ ಇಲಾಖೆಯ ಎಇಇ ನಿರ್ಮಲೇಶ್, ಗ್ರಾಪಂ ಮಾಜಿ ಅಧ್ಯಕ್ಷ ಭೈರಾಪುರ ಹರೀಶ್, ಗ್ರಾಮದ ಮುಖಂಡ ರಾದ ಚಿಕ್ಕಬೋರೇಗೌಡ, ಅಣ್ಣೇಗೌಡ, ಸಿದ್ದರಾಮೇಗೌಡ, ಶಿವಣ್ಣಗೌಡ, ದೇವರಾಜು, ರಾಮಲಿಂಗೇಗೌಡ, ನಾಗರಾಜೇ ಗೌಡ, ಮರೀಗೌಡ, ತಾಲೂಕು ಜೆಡಿಎಸ್ ರೈತ ಮೋರ್ಚಾ ಅಧ್ಯಕ್ಷ ಹೆಳವೇಗೌಡ, ಮೊಸಳೇ ಕೊಪ್ಪಲು ಗ್ರಾಮದ ಯಜಮಾನರುಗಳಾದ ಪಟೇಲ್ ನಿಂಗೇಗೌಡ, ಯಜ ಮಾನ್ ರಾಮಕೃಷ್ಣೇಗೌಡ, ರಮೇಶ್, ಬಸವೇ ಗೌಡ, ರಂಗೇಗೌಡ, ಕೆಂಪಣ್ಣ ರವಿ, ಡೇರಿ ತಿಮ್ಮೇಗೌಡ, ನಗುವನಹಳ್ಳಿ ರಾಮಕೃಷ್ಣೇಗೌಡ, ನಾಗೇಗೌಡ, ಅರೆ ರಮೇಶ್, ಸ್ವಾಮೀಗೌಡ, ಕುರುಬಹಳ್ಳಿ ಕೆ.ಬಿ. ನಾಗೇಶ್, ಜೈನಹಳ್ಳಿ ಸೊಸೈಟಿ ನಿರ್ದೇಶಕ ಧರಣೇಶ್, ಚಿಕ್ಕಗಾಡಿಗನಹಳ್ಳಿ ಸೋಮಶೇಖರ್, ಗಂಜಿಗೆರೆಕೊಪ್ಪಲು ರಾಮಕೃಷ್ಣೇ ಗೌಡ ಮತ್ತಿತರರು ಉಪಸ್ಥಿತರಿದ್ದರು.

ವ್ಯಕ್ತಿಯ ಬರ್ಬರ ಹತ್ಯೆ: ದುಷ್ಕರ್ಮಿಗಳು ಪರಾರಿ

ಶ್ರೀರಂಗಪಟ್ಟಣ, ಮಾ.17–ಕಾರಿನಲ್ಲಿ ಬಂದ ಕೊಲೆಗಡುಕರು ವ್ಯಕ್ತಿಯ ಮೇಲೆ ಲಾಂಗು ಮಚ್ಚುಗಳಿಂದ ದಾಳಿ ನಡೆಸಿ ಹತ್ಯೆಗೈದು ಪರಾರಿಯಾಗಿರುವ ಘಟನೆ ತಾಲೂಕಿನ ಚನ್ನಳ್ಳಿ–ಬಿದರಳ್ಳಿ ಗ್ರಾಮದ ಮಧ್ಯ ರಸ್ತೆಯಲ್ಲಿ ಸಂಭವಿಸಿದೆ.



ಮಾದೇವ

ಶೇಖರ್ ಬಿನ್ ಮಾದೇವ (36) ಹತ್ಯೆಯಾಗಿರುವ ವ್ಯಕ್ತಿಯಾಗಿದ್ದು, ಈತ ಮೈಸೂರಿನ ರಮ್ಮನಹಳ್ಳಿ ಗ್ರಾಮದವನೆನ್ನ ಲಾಗಿದೆ.

ಗ್ರಾಮದಲ್ಲಿ ಮಾರಿಹಬ್ಬ ನಡೆದಾಗ ಇಸ್ಪೀಟ್ ಆಟದ ವಿಷಯದಲ್ಲಿ ಗಲಾಟೆ ನಡೆದಿತ್ತೆನ್ನಲಾಗಿದೆ. ಶೇಖರ್ ಇಂದೂ ಸಹ ಇಸ್ಪೀಟ್ ಆಟದಲ್ಲಿ ಗಲಾಟೆ ಮಾಡಿಕೊಂಡು ಮದ್ಯ ಮತ್ತು ತಿಂಡಿಯನ್ನು ತೆಗೆದುಕೊಂಡು ಗ್ರಾಮಕ್ಕೆ ಹಿಂದಿರುಗಲು ಚನ್ನಳ್ಳಿ–ಬಿದರಳ್ಳಿ ನಡುವೆ ಬೈಕಿನಲ್ಲಿ ಹೋಗುತ್ತಿದ್ದಾಗ ಕಾರಿನಲ್ಲಿ ಬಂದ ದುಷ್ಕರ್ಮಿಗಳು ಮಾರಕಾಸ್ತ್ರದಿಂದ ದಾಳಿ ನಡೆಸಿ ಕೊಲೆ ಮಾಡಿ ಪರಾರಿಯಾಗಿದ್ದಾರೆ. ಈ ಹತ್ಯೆಗೆ ಪ್ರಮುಖ ಕಾರಣವೇನು ಎಂಬ ಬಗ್ಗೆ ತಿಳಿದು ಬಂದಿಲ್ಲ ಹೆಚ್ಚಿನ ಮಾಹಿತಿಗಾಗಿ ಪೊಲೀಸರನ್ನು ಸಂಪರ್ಕಿಸಿಲೆತ್ನಿಸಿದಾಗ ಸಂಪರ್ಕಕ್ಕೆ ಲಭ್ಯವಾಗಲಿಲ್ಲ ಅರಕೆರೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಒಂದನೇ ಪುಟದಿಂದ

ಅನಧಿಕೃತ ಜಾಹೀರಾತು ಫಲಕ ತೆರವು ತ್ವರಿತ



ಮೈಸೂರು ನಗರ ಪಾಲಿಕೆಯ ಅಭಯ ತಂಡದವರು ಒಂಟಿಕೊಪ್ಪಲ್, ವಿವಿ ಮೊಹಲ್ಲಾ, ಯಾದವಗಿರಿ, ಪಡುವಾರಹಳ್ಳಿ ಸೇರಿದಂತೆ ಇತರೆಡೆ ಫ್ಲೆಕ್ಸ್, ಬ್ಯಾನರ್, ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿದರು.

ಮೈಸೂರು ನಗರದ ಅಂದಕ್ಕೆ ಧಕ್ಕೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಫ್ಲೆಕ್ಸ್ ಮುಕ್ತ ನಗರವನ್ನಾಗಿ ಮಾಡುವಂತೆ ಒತ್ತಡ ಹೆಚ್ಚಾದ ಹಿನ್ನೆಲೆ ಮೈಸೂರು ನಗರ ಪಾಲಿಕೆ ಫ್ಲೆಕ್ಸ್, ಬ್ಯಾನರ್ ಹಾಗೂ ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸುತ್ತಿದೆ. ಜೊತೆಗೆ ಸರ್ಕಾರವೂ ಈ ವಿಷಯದಲ್ಲಿ ಬಿಗಿ ನಿಲುವು ತಾಳಿದೆ. ಮೈಸೂರು ನಗರ ಪಾಲಿಕೆಯಲ್ಲಿ ಮೂರು ಅಭಯ ತಂಡಗಳಿದ್ದು, ತಮ್ಮ ತಮ್ಮ ವ್ಯಾಪ್ತಿಯಲ್ಲಿ ಫ್ಲೆಕ್ಸ್, ಬ್ಯಾನರ್ ಹಾಗೂ ಜಾಹೀರಾತು ಫಲಕಗಳನ್ನು ತೆರವುಗೊಳಿ ಸುತ್ತಿವೆ. ಒಂಟಿಕೊಪ್ಪಲ್, ಯಾದವಗಿರಿ, ಪಡು ವಾರಹಳ್ಳಿ, ವಾಣಿ ವಿಲಾಸ ಮೊಹಲ್ಲಾದಲ್ಲಿ ತ್ವರಿತ ಕಾರ್ಯಾಚರಣೆ ನಡೆಸಿದ್ದಾರೆ.

ಇದೂವರೆಗೆ ಅಭಯ ಟೀಂಗಳು ಮಾತ್ರ ಈ ಕಾರ್ಯಾಚರಣೆ ನಡೆಸುತ್ತಿದ್ದವು. ಆದರೆ, ಈಗ ನಗರ ಪಾಲಿಕೆಯ ಎಲ್ಲಾ ವಲಯ ಕಚೇರಿಗಳ ಅಭಿವೃದ್ಧಿ ಅಧಿಕಾರಿ (ಡೆವಲಪ್ ಮೆಂಟ್ ಆಫೀಸರ್) ಗಳು ಕೂಡ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದಾರೆ. ತಮ್ಮ ವಲಯ ಕಚೇರಿಯಲ್ಲಿರುವ ಸಿಬ್ಬಂದಿಗಳನ್ನು ಬಳಸಿಕೊಂಡು ನಗರ ಪಾಲಿಕೆಯಲ್ಲಿರುವ 9 ವಲಯ ಕಚೇರಿಗಳ ಅಭಿವೃದ್ಧಿ ಅಧಿಕಾರಿಗಳು ಕಾರ್ಯಾಚರಣೆ ಕೈಗೊಂಡಿದ್ದಾರೆ.

ಸಾಮಾನ್ಯವಾಗಿ ಫ್ಲೆಕ್ಸ್, ಬ್ಯಾನರ್‌ಗಳನ್ನು ಅಳವಡಿಸುವವರು ಹೆಚ್ಚಾಗಿ ರಾಜಕಾರಣಿಗಳೇ ಆಗಿದ್ದಾರೆ. ಆದರೆ ಈಗ ಯಾವ ರಾಜಕಾರಣಿಯ ಒತ್ತಡಕ್ಕೂ ಮಣಿಯದೆ ತೆರವು ಕಾರ್ಯಾಚರಣೆ ಕೈಗೊಳ್ಳಲಾಗಿದೆ.

ಒಟ್ಟಾರೆ ಇನ್ನು ಕೆಲವೇ ದಿನಗಳಲ್ಲಿ ನಗರದಲ್ಲಿರುವ ಎಲ್ಲಾ ಫ್ಲೆಕ್ಸ್, ಬ್ಯಾನರ್ ಹಾಗೂ ಅನಧಿಕೃತ ಜಾಹಿರಾತು ಫಲಕಗಳನ್ನು ತೆರವು ಮಾಡುವ ಗುರಿ ಹೊಂದಲಾಗಿದೆ. ಮತ್ತೆ ಎಲ್ಲೆ ಫ್ಲೆಕ್ಸ್, ಬ್ಯಾನರ್, ಅನಧಿಕೃತ ಜಾಹಿರಾತು ಫಲಕ ಅಳವಡಿಸಿದರೆ ದಂಡ ವಿಧಿಸಿ, ಕೇಸ್ ಹಾಕುವ ತೀರ್ಮಾನ ಕೈಗೊಳ್ಳಲಾಗಿದೆ.

ಫ್ಲೆಕ್ಸ್, ಬ್ಯಾನರ್ ಪ್ರಿಂಟಿಂಗ್ ಯೂನಿಟ್‌ಗಳ ವಿರುದ್ಧವೂ ಕ್ರಮ

ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್, ಜಾಹಿರಾತು ಫಲಕ ಮುದ್ರಿಸುವ ಪ್ರಿಂಟಿಂಗ್ಸ್ ಯೂನಿಟ್‌ಗಳ ಮೇಲೆ ನೇರವಾಗಿ ಕ್ರಮ ಕೈಗೊಳ್ಳಲಾಗುವುದು. ಮುದ್ರಣಕ್ಕೆ ಕಡಿವಾಣ ಹಾಕಿದರೆ, ತನಗೆ ತಾನೆ ಈ ಹಾವಳಿ ಕೊನೆಯಾಗುತ್ತದೆ ಎಂದು ಮೈಸೂರು ಪಾಲಿಕೆ ಆಯುಕ್ತ ಷೇಕ್ ಅಸೀಫ್ ತನ್ವೀರ್ ಸ್ಪಷ್ಟಪಡಿಸಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಪ್ಲಾಸ್ಟಿಕ್ ಬಳಸದಂತೆ ಕಟ್ಟುನಿಟ್ಟಿನ ಆದೇಶ ಹೊರಡಿಸಲಾಗಿದೆ. ಆದರೆ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್, ಜಾಹೀರಾತು ಫಲಕಗಳನ್ನು ಪ್ಲಾಸ್ಟಿಕ್‌ನಲ್ಲೇ ಮುದ್ರಣ ಮಾಡಲಾಗುತ್ತಿದೆ. ಇದರಿಂದ ಪರಿಸರದ ಮೇಲೆ ಪರಿಣಾಮ ಬೀರುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರಿಂಟಿಂಗ್ ಯೂನಿಟ್‌ಗಳ ಮೇಲೆ ದಾಳಿ ನಡೆಸಿ ದಂಡ ವಿಧಿಸಿ, ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು.

ಜಾಹೀರಾತು ಫಲಕಗಳನ್ನು ಅಳವಡಿಸಿರುವ ಅಡ್ವಟೈಸಿಂಗ್ ಕಂಪನಿಗಳು ಫಲಕಗಳನ್ನು ಅಳವಡಿಸುವಾಗ ನಗರ ಪಾಲಿಕೆಯಿಂದ ಲೈಸೆನ್ಸ್ ಪಡೆದಿರಬೇಕು. ಇಲ್ಲದಿದ್ದರೆ ಅನಧಿಕೃತವೆಂದು ಪರಿಗಣಿಸಿ ಇವುಗಳನ್ನು ತೆರವು ಮಾಡಲಾಗುವುದು.

ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್, ಅನಧಿಕೃತ ಜಾಹಿರಾತು ಫಲಕಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಚುರುಕುಗೊಳಿಸಲಾಗಿದೆ. ನಗರ ಪಾಲಿಕೆಯಲ್ಲಿರುವ ಅಭಯ ತಂಡಗಳು ಈ ಕಾರ್ಯದಲ್ಲಿ ತೊಡಗಿದೆ. ಅಲ್ಲದೆ ತೆರವು ಕಾರ್ಯಾಚರಣೆ ಕೈಗೊಳ್ಳುವಂತೆ ನಗರ ಪಾಲಿಕೆಯ ವಲಯ ಕಚೇರಿಗಳ ಅಭಿವೃದ್ಧಿ ಅಧಿಕಾರಿಗಳಿಗೆ ಹೆಚ್ಚಿನ ಜವಾಬ್ದಾರಿಯನ್ನು ವಹಿಸಲಾಗಿದೆ. ಅವರೂ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ.

ಇನ್ನು ಮುಂದೆ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್, ಅನಧಿಕೃತ ಜಾಹಿರಾತು ಫಲಕ ಅಳವಡಿಸುವವರಿಗೆ ದಂಡ ವಿಧಿಸಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಆಯುಕ್ತರು ಎಚ್ಚರಿಸಿದ್ದಾರೆ.

ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಪರೀಕ್ಷಾ ವೇಳಾಪಟ್ಟಿ

ಮಾ.18, ಬೆಳಗ್ಗೆ 10ರಿಂದ ಮಧ್ಯಾಹ್ನ 1.15ರವರೆಗೆ ಪ್ರಥಮ ಭಾಷೆ
ಮಾ.23ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1.15ರವರೆಗೆ ವಿಜ್ಞಾನ
ಮಾ.25ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ದ್ವಿತೀಯ ಭಾಷೆ
ಮಾ.28ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1.15ರವರೆಗೆ ಗಣಿತ
ಮಾ.30ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1.15ರವರೆಗೆ ತೃತೀಯ ಭಾಷೆ
ಏ.2ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ಸಮಾಜ ವಿಜ್ಞಾನ

ವಿದ್ಯಾರ್ಥಿಗಳು, 728 ಖಾಸಗಿ ವಿದ್ಯಾರ್ಥಿಗಳು, 133 ಖಾಸಗಿ ಪುನರಾವರ್ತಿತ ವಿದ್ಯಾರ್ಥಿಗಳು ಸೇರಿದಂತೆ ಈ ಬಾರಿ 39,349 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. ಎಲ್‌ಎಸ್‌ಎಲ್‌ಸಿ ಪರೀಕ್ಷೆಗಾಗಿ 76 ಸರ್ಕಾರಿ ಶಾಲೆ, 25 ಅನುದಾನಿತ ಶಾಲೆ, 35 ಖಾಸಗಿ ಶಾಲೆ ಸೇರಿದಂತೆ 136 ಪರೀಕ್ಷಾ ಕೇಂದ್ರ ವ್ಯವಸ್ಥೆ ಮಾಡಲಾಗಿದೆ. ಅದರಲ್ಲಿ ಮೈಸೂರು ನಗರದಲ್ಲಿ 43 ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 93 ಪರೀಕ್ಷಾ ಕೇಂದ್ರಗಳಿದ್ದು, ಜಿಲ್ಲೆಯಲ್ಲಿ ಒಟ್ಟು 2080 ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

9 ಬ್ಲಾಕ್ ಆಗಿ ವಿಂಗಡಣೆ: ಜಿಲ್ಲೆಯ 7 ತಾಲೂಕು ಹಾಗೂ ನಗರವನ್ನು ಒಟ್ಟು 9 ಬ್ಲಾಕ್‌ಗಳಾಗಿ ವಿಂಗಡಿಸಲಾಗಿದ್ದು, ಪ್ರತಿಯೊಂದು ಬ್ಲಾಕ್‌ನಲ್ಲಿರುವ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪರೀಕ್ಷಾ ಕೇಂದ್ರ ಸ್ಥಾಪಿಸಲಾಗಿದೆ. ಮೈಸೂರು ಉತ್ತರ ಬ್ಲಾಕ್‌ನಲ್ಲಿ 19 ಪರೀಕ್ಷಾ ಕೇಂದ್ರಗಳಲ್ಲಿ 5772 ವಿದ್ಯಾರ್ಥಿಗಳು, ಮೈಸೂರು ದಕ್ಷಿಣ ಬ್ಲಾಕ್‌ನಲ್ಲಿ 16 ಕೇಂದ್ರದಲ್ಲಿ 4383, ಮೈಸೂರು ಗ್ರಾಮಾಂತರ ಬ್ಲಾಕ್‌ನಲ್ಲಿ 17 ಕೇಂದ್ರದಲ್ಲಿ 4787 ವಿದ್ಯಾರ್ಥಿಗಳು, ಹೆಚ್.ಡಿ. ಕೋಟೆ ಬ್ಲಾಕ್‌ನಲ್ಲಿ 13 ಕೇಂದ್ರದಲ್ಲಿ 3115 ವಿದ್ಯಾರ್ಥಿಗಳು, ಹುಣಸೂರು ಬ್ಲಾಕ್‌ನಲ್ಲಿ 15 ಕೇಂದ್ರದಲ್ಲಿ 4111 ವಿದ್ಯಾರ್ಥಿಗಳು, ಕೆ.ಆರ್.ನಗರ ಬ್ಲಾಕ್‌ನಲ್ಲಿ 11 ಪರೀಕ್ಷಾ ಕೇಂದ್ರದಲ್ಲಿ 2843 ವಿದ್ಯಾರ್ಥಿಗಳು, ನಂಜನಗೂಡು ಬ್ಲಾಕ್‌ನಲ್ಲಿ 19 ಕೇಂದ್ರದಿಂದ 4700 ವಿದ್ಯಾರ್ಥಿಗಳು, ಪಿರಿಯಾಪಟ್ಟಣ ಬ್ಲಾಕ್‌ನಲ್ಲಿ 13 ಕೇಂದ್ರದಲ್ಲಿ 2961 ವಿದ್ಯಾರ್ಥಿಗಳು ಹಾಗೂ ತಿ.ನರಸೀಪುರ ಬ್ಲಾಕ್‌ನಲ್ಲಿ 13 ಪರೀಕ್ಷಾ ಕೇಂದ್ರಗಳಲ್ಲಿ 3507 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಪರೀಕ್ಷಾ ಅಕ್ರಮ ತಡೆಗೆ ಕ್ರಮ: ಪರೀಕ್ಷಾ ಅಕ್ರಮ ತಡೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. 4 ಸಂಚಾರಿ ಸ್ಕ್ವಾಡ್, 136 ಸಿಟ್ಟಿಂಗ್ ಸ್ಕ್ವಾಡ್ ರಚಿಸಲಾಗಿದೆ. ಪರೀಕ್ಷಾ ಕರ್ತವ್ಯಕ್ಕೆ 136 ಅಧೀಕ್ಷಕರು, 24 ಉಪ ಮುಖ್ಯ ಅಧೀಕ್ಷಕರು, 54 ಮಾರ್ಗಾಧಿಕಾರಿ, 136 ಮಂದಿ ಪ್ರಶ್ನೆ ಪತ್ರಿಕೆ ಪಾಲಕರು, 136 ಮಂದಿ ಮೊಬೈಲ್ ಸ್ವಾಧೀನಾಧಿಕಾರಿಗಳು ಸೇರಿದಂತೆ 3 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕಾರ್ಯದಲ್ಲಿ ಪಾಲ್ಗೊಳ್ಳಲಿದ್ದಾರೆ. 54 ರೂಟ್‌ಗಳಲ್ಲಿ ಜಿಲ್ಲಾ ಖಜಾನೆ ಹಾಗೂ ತಾಲೂಕು ಕೇಂದ್ರಗಳಲ್ಲಿರುವ ಉಪ ಖಜಾನೆಯಿಂದ ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಕ್ಕೆ ಕೊಂಡೊಯ್ಯಲು ಕ್ರಮ ಕೈಗೊಳ್ಳಲಾಗಿದೆ. ಪರೀಕ್ಷೆ ಮುಗಿದ ನಂತರ ಉತ್ತರ ಪ್ರತಿಕೆಗಳನ್ನು ಎಲ್ಲಾ ಪರೀಕ್ಷಾ ಕೇಂದ್ರಗಳಿಂದ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಸ್ಟ್ರಾಂಗ್ ರೂಮ್‌ಗೆ ಕೊಂಡೊಯ್ಯಲು ಕ್ರಮ ಕೈಗೊಳ್ಳಲಾಗಿದೆ.

ಪರಿಶೀಲನೆ: ಪರೀಕ್ಷಾ ದಿನಗಳಂದು ಪ್ರತಿದಿನ ಬೆಳಗ್ಗೆ 9 ಗಂಟೆಗೆ ಪರೀಕ್ಷಾ ಕೇಂದ್ರ ತೆರೆದು ವಿದ್ಯಾರ್ಥಿಗಳನ್ನು ತಪಾಸಣೆಗೊಳಪಡಿಸಿ, ಕೇಂದ್ರದ ಒಳಗೆ ಬಿಡಲಾಗುತ್ತದೆ. ಆರೋಗ್ಯ ಕಾರ್ಯಕರ್ತರನ್ನು ಪ್ರತಿಯೊಂದು ಪರೀಕ್ಷಾ ಕೇಂದ್ರಕ್ಕೂ ನಿಯೋಜಿಸಲಾಗಿದ್ದು, ಆರೋಗ್ಯ ತಪಾಸಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಫ್ಲೆಕ್ಸ್ ಫುಲ್ ಸಿಟಿ!!

ಮಾಡಿ ಮನವಿ ಸಲ್ಲಿಸಿದಾಗ ಇದಕ್ಕೆ ಕಡಿ ವಾಣ ಹಾಕುವುದಾಗಿ ಭರವಸೆ ನೀಡಿದ್ದರು. ಅದರಂತೆ ಇಂದು ತೆರವುಗೊಳಿಸುವ ಕಾರ್ಯ ನಡೆಯುತ್ತಿದೆ ಎಂದು ವಿವರಿಸಿದರು. ಒಂದೆರಡು ದಿನದಲ್ಲಿ ನಗರದಲ್ಲಿರುವ ಎಲ್ಲಾ ಫ್ಲೆಕ್ಸ್, ಬ್ಯಾನರ್, ಅನಧಿಕೃತ ಜಾಹಿರಾತು ಫಲಕಗಳನ್ನು ಪೂರ್ಣವಾಗಿ ತೆರವು ಮಾಡಬೇಕು. ಈ ಮೂಲಕ ಮೈಸೂರನ್ನು ಫ್ಲೆಕ್ಸ್ ಫ್ರೀ ಸಿಟಿಯಾಗಿ ಮಾಡಬೇಕು. ಇಲ್ಲದಿದ್ದರೆ ಯುಗಾದಿ ಹಬ್ಬದ ತರುವಾಯ ನಾವೇ ಅವುಗಳನ್ನು ಕಿತ್ತು ನಗರ ಪಾಲಿಕೆ ಆಯುಕ್ತರ ಕಚೇರಿ ಮುಂದೆ ಗುಡ್ಡೆ ಹಾಕುತ್ತೇವೆ. ಫ್ಲೆಕ್ಸ್‌ಗಳನ್ನು ಹಾಕುವುದರಿಂದ ಒಂದೇ ಸ್ಥಳದಲ್ಲಿ ಪ್ರಚಾರ ಸಿಗುತ್ತದೆ. ಇನ್ನು ಮುಂದಾದರೂ ಜನರು ಪ್ರಚಾರಕ್ಕಾಗಿ ಪತ್ರಿಕಾ ಮಾಧ್ಯಮಗಳನ್ನು ಬಳಸಿಕೊಳ್ಳಬೇಕು. ಇದರಿಂದ ಕಡಿಮೆ ವೆಚ್ಚದಲ್ಲಿ, ಪ್ರತಿಯೊಬ್ಬರನ್ನು ತಲುಪಬಹುದು ಎಂದರು.

ಗ್ರಾಮೀಣ ಭಾಗದಲ್ಲಿ ಒಂದು ಮನೆ ಇದ್ದರೂ ಶುದ್ಧ ಕುಡಿಯುವ ನೀರು ಪೂರೈಕೆ

ಕೇಂದ್ರದ ಅಮೃತ್ ಯೋಜನೆಯಡಿ ನೀರು, ಒಳಚರಂಡಿ ವ್ಯವಸ್ಥೆ

ಬೆಂಗಳೂರು, ಮಾ. 17(ಕೆಎಂಶಿ)– ಕೇಂದ್ರ ಸರ್ಕಾರದ ಅಮೃತ್ ಯೋಜನೆ ಜೊತೆಗೂಡಿ 25 ಸಾವಿರ ಕೋಟಿ ರೂ. ವೆಚ್ಚದಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿ ವ್ಯವಸ್ಥೆ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಬಿ.ಎಸ್. ಸುರೇಶ್ (ಬೈರತಿ ಸುರೇಶ್) ವಿಧಾನ ಪರಿಷತ್‌ನಲ್ಲಿಂದು ತಿಳಿಸಿದರು.



ಪ್ರಶ್ನೋತ್ತರ ವೇಳೆಯಲ್ಲಿ ಶರಣಗೌಡ ಬಯ್ಯಾಪುರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಮನೆ–ಮನೆಗೆ ಕೊಳಾಯಿ ಯೋಜನೆಯಡಿ ರಾಜ್ಯಾದ್ಯಂತ ಎಲ್ಲಾ ಗ್ರಾಮಗಳ ಮನೆಗಳಿಗೆ ಶುದ್ಧ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗುತ್ತಿದೆ ಎಂದರು. ಗ್ರಾಮೀಣ ಭಾಗದಲ್ಲಿ ಒಂದು ಮನೆ ಇರುವ ಕಡೆಯೂ ಈ ಸೌಲಭ್ಯ ದೊರೆಯುತ್ತಿದೆ. ರಾಜ್ಯದ ಬಹುತೇಕ ಭಾಗದಲ್ಲಿ ಈಗಾಗಲೇ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ.

ಕೇಂದ್ರದ ಈ ಮಹತ್ವದ ಯೋಜನೆಗೆ ರಾಜ್ಯ ಸರ್ಕಾರ ಕೈಜೋಡಿಸುವ ಮೂಲಕ ಮುಂದಿನ ಒಂದೆರಡು ವರ್ಷಗಳಲ್ಲಿ ಎಲ್ಲಾ ಮನೆಗಳಿಗೂ ನಲ್ಲಿ ಸಂಪರ್ಕ ಲಭ್ಯವಾಗಲಿದೆ. ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡು ಬಂದಿರುವ ಕಡೆಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸಲಾ ಗುತ್ತಿದೆ. ನೀರಿನ ಅಭಾವ ಇರುವೆಡೆ ಖಾಸಗಿ ಬೋರ್‌ವೆಲ್‌ಗಳನ್ನು ವಶಕ್ಕೆ ಪಡೆದು ನೀರು ಒದಗಿಸಲು ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿದೆ ಎಂದರು.

ಬಲ್ಕೀಸ್ ಬಾನು ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಭದ್ರಾವತಿಯಲ್ಲಿ ಕೆಎಂಆರ್‌ಪಿ ಯೋಜನೆಯಡಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ವಿಸ್ತೃತ ಯೋಜನಾ ವರದಿ ತಯಾರಿಸಲು ಸರ್ವೆ ಕಾರ್ಯ ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ ಎಂದರು.

ಭದ್ರಾವತಿ ನಗರ ಒಳಚರಂಡಿ ಯೋಜನಾ ಕಾರ್ಯ 2012ರಲ್ಲಿ ಪ್ರಾರಂಭಿಸಿದ್ದು, 2018ರಲ್ಲಿ ಗುತ್ತಿಗೆ ರದ್ದುಗೊಳಿಸಲಾಗಿದೆ. ಹಳೆ ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿಗೆ 23.30 ಕೋಟಿ ರೂ. ಬಿಡುಗಡೆಯಾಗಿದ್ದು, 16.60 ಕೋಟಿ ರೂ. ಖರ್ಚಾಗಿದೆ ವಿಚಾರಣೆ ನಡೆಸಿ ತಪ್ಪಿತಸ್ಥರನ್ನು ಕಪ್ಪುಪಟ್ಟಿಗೆ ಸೇರಿಸುವ ಹಾಗೂ ದಂಡ ವಿಧಿಸುವ ಕ್ರಮ ಕೈಗೊಳ್ಳಲಾಗುವುದು ಎಂದರು.

ಪ್ರತ್ಯೇಕ ಸಾರಿಗೆ ಸೌಕರ್ಯ

ಅಧ್ಯಕ್ಷತೆಯಲ್ಲಿ 2024ರ ಸೆ.3ರಂದು ನಡೆದ ಸಭೆಯಲ್ಲಿ ಚಾಮುಂಡಿಬೆಟ್ಟದಲ್ಲಿ ವಾಹನ ದಟ್ಟಣೆ ನಿಯಂತ್ರಿಸುವ ನಿಟ್ಟಿನಲ್ಲಿ ಚರ್ಚಿಸಿ, ಬೆಟ್ಟದ ಕೆಳಗೆ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲು ಸೂಕ್ತ ಸರ್ಕಾರಿ ಜಮೀನು ಕಾಯ್ದಿರಿಸಲು ತೀರ್ಮಾನಿಸಲಾಯಿತು. ಅದರಂತೆ 2025ರ ಡಿ.2ರ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಮಿತಿಯಲ್ಲಿ ಮೈಸೂರು ತಾಲೂಕು, ಕಸಬಾ ಹೋಬಳಿ, ಬಂಡಿಪಾಳ್ಯ ಸರ್ವೆ ನಂ.19ರಲ್ಲಿನ ಒಟ್ಟು 58.03 ಎಕರೆ ಜಮೀನಿನಲ್ಲಿ ದೇವಾಲಯಕ್ಕೆ ಆಗಮಿಸುವ ಭಕ್ತಾದಿಗಳ ವಾಹನಗಳಿಗೆ ಸೂಕ್ತ ಪಾರ್ಕಿಂಗ್ ವ್ಯವಸ್ಥೆಗಾಗಿ 5 ಎಕರೆ ಜಮೀನು ಕಾಯ್ದಿರಿಸಲು ನಿರ್ಧರಿಸಲಾಗಿದೆ. ಜಮೀನು ಕಾಯ್ದಿರಿಸಿದ ನಂತರ ಪ್ರಾಧಿಕಾರದ ವತಿಯಿಂದ ಸೂಕ್ತ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಿ, ಭಕ್ತಾದಿಗಳ ಅನುಕೂಲಕ್ಕಾಗಿ ಪ್ರಾಧಿಕಾರದ ವತಿಯಿಂದ ಮಿನಿ ಬಸ್ ಖರೀದಿಸಿ ಅಥವಾ ಸಾರಿಗೆ ಬಸ್‌ಗಳನ್ನು ಪಾರ್ಕಿಂಗ್ ಸ್ಥಳದಿಂದ ಬೆಟ್ಟಕ್ಕೆ ಕಾರ್ಯಾಚರಣೆ ನಡೆಸಲು ಪರಿಶೀಲಿಸಲಾಗುವುದು ಎಂದು ವಿವರಿಸಿದ್ದಾರೆ.

ಮೂಲ ಸೌಕರ್ಯಕ್ಕೆ ಬಳಕೆ: ಬೆಟ್ಟಕ್ಕೆ ಖಾಸಗಿ ವಾಹನಗಳ ಪ್ರವೇಶ ನಿರ್ಬಂಧಿಸಿ, ಸಮರ್ಪಕ ಸಾರಿಗೆ ವ್ಯವಸ್ಥೆ ಕಲ್ಪಿಸಿದ ಬಳಿಕ ಪ್ರಸ್ತುತ ಚಾಮುಂಡಿಬೆಟ್ಟದಲ್ಲಿರುವ ವಾಹನ ಪಾರ್ಕಿಂಗ್ ಕಟ್ಟಡವನ್ನು ಭಕ್ತಾದಿಗಳ ಅನುಕೂಲಕ್ಕಾಗಿ ಸಮರ್ಪಕವಾಗಿ ಬಳಸಿಕೊಳ್ಳಲಾಗುವುದು. ಶುದ್ಧ ಕುಡಿಯುವ ನೀರು, ಶೌಚಾಲಯ, ಭದ್ರತೆ, ಅತ್ಯಾಧುನಿಕ ಸಿಸಿ ಕ್ಯಾಮರಾ ವ್ಯವಸ್ಥೆ, ಸೂಕ್ತ ತಂಗುದಾಣವನ್ನಾಗಿ ಪರಿವರ್ತಿಸಲು ಚಿಂತನೆ ನಡೆಸಲಾಗುವುದು ಎಂದು ಹೇಳಿದ್ದಾರೆ.

ದರ್ಶನಕ್ಕೆ ಸಕಲ ವ್ಯವಸ್ಥೆ: ಭಕ್ತಾದಿಗಳು ದೇವರ ದರ್ಶನ ಪಡೆಯಲು ಸೂಕ್ತ ಸ್ಟೇನ್‌ಲೆಸ್ ಸ್ಟೀಲ್ ರೇಲಿಂಗ್ ಮೂಲಕ ಸರತಿ ಸಾಲುಗಳನ್ನು ಮೇಲ್ಚಾವಣಿಯೊಂದಿಗೆ ನಿರ್ಮಿಸುವುದರ ಜೊತೆಗೆ ಹಲವು ಸೌಲಭ್ಯಗಳನ್ನು ಕಲ್ಪಿಸಲಾಗುವುದು. ಸರತಿ ಸಾಲುಗಳಲ್ಲಿ ಶುದ್ಧ ಕುಡಿಯುವ ನೀರು, ಫ್ಯಾನ್‌ಗಳು, ಅಗತ್ಯ ಮಾಹಿತಿ ಬಿತ್ತರಿಸಲು ಟಿವಿ, ಎರಡು ದೊಡ್ಡ ಎಲ್‌ಇಡಿ ಬೋರ್ಡ್ ಅಳವಡಿಕೆ, ವಿಶೇಷಚೇತನರು, ಗರ್ಭಿಣಿಯರು, ಹಿರಿಯ ನಾಗರಿಕರಿಗೆ ಬಸ್ ನಿಲ್ದಾಣದಿಂದ ದೇವಾಲಯದವರೆಗೆ ಬ್ಯಾಟರಿ ಚಾಲಿತ ವಾಹನ ವ್ಯವಸ್ಥೆ, ದೇವಾ ಲಯದ ಬಳಿ ಸುಸಜ್ಜಿತ ಆಂಬುಲೆನ್ಸ್ ವ್ಯವಸ್ಥೆ, ಟಿಕೆಟ್ ಕೌಂಟರ್‌ಗಳಲ್ಲಿ ದಟ್ಟಣೆ ನಿಯಂತ್ರಿಸುವ ನಿಟ್ಟಿನಲ್ಲಿ ವಾಟ್ಸ್‌ಆಪ್ ಮೂಲಕ ಟಿಕೆಟ್ ಖರೀದಿಸುವ ವ್ಯವಸ್ಥೆ, ಗಣ್ಯಾತಿಗಣ್ಯರಿಗೆ ಶಿಷ್ಟಾಚಾರದ ವ್ಯವಸ್ಥೆ, ಪ್ರತಿನಿತ್ಯ ಪ್ರಸಾದ ರೂಪದಲ್ಲಿ ಬೆಳಗ್ಗೆ ಮತ್ತು ರಾತ್ರಿ ತಿಂಡಿ, ಮಧ್ಯಾಹ್ನ ಊಟದ ವ್ಯವಸ್ಥೆ, ಭಕ್ತಾದಿಗಳಿಗೆ ತಂಗಲು ಅತಿಥಿ ಗೃಹದ ವ್ಯವಸ್ಥೆ ಕಲ್ಪಿಸಲಾಗುವುದು. ಸದ್ಯ ಚಾಮುಂಡಿ ಬೆಟ್ಟಕ್ಕೆ ಶಾಶ್ವತ ಸಮಗ್ರ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಂದಾಜು ಪಟ್ಟಿಯಂತೆ ಕಾಮಗಾರಿ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಸಚಿವರು ತಿಳಿಸಿದ್ದಾರೆ.

ಚಾಮರಾಜನಗರದ ಹಲವೆಡೆ ಆಲಿಕಲ್ಲು ಸಹಿತ ಭಾರೀ ಮಳೆ

ಬಿದ್ದಿರುವುದನ್ನು ನಾವು ನೋಡೇ ಇಲ್ಲ ಎಂದು ಗ್ರಾಮದ ಹಿರಿಯರು ಹೇಳಿದರೆ, ಯುವಕರು ಆಲಿಕಲ್ಲುಗಳನ್ನು ಎತ್ತಿಕೊಂಡು ಖುಷಿ ಪಟ್ಟರು. ಜಮೀನುಗಳಲ್ಲಿ ಭಾರೀ ಪ್ರಮಾಣದ ಆಲಿಕಲ್ಲು ಬಿದ್ದಿದ್ದು, ಹಿಮಾವೃತ್ತ ಕಂಡು ರೈತರು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ಯಳಂದೂರು ಸೇರಿದಂತೆ ವಿವಿಧೆಡೆ ಸಣ್ಣ ಸಣ್ಣ ಆಲಿಕಲ್ಲು ಮಳೆ ಬಿದ್ದಿದ್ದು, ಜನರು ಆಲಿಕಲ್ಲು ಕಂಡು ಖುಷಿ ಪಟ್ಟಿದ್ದಾರೆ. ಮಂಗಳವಾರ ಬೆಳಗ್ಗೆಯಿಂದಲೂ ತಾಪಮಾನ ಹೆಚ್ಚಾಗಿತ್ತು. ಮಧ್ಯಾಹ್ನದ ವೇಳೆಗೆ ತಾಪಮಾನ ಸ್ವಲ್ಪ ಕಡಿಮೆಯಾಗಿತ್ತು. ಸಂಜೆ ವೇಳೆಯಲ್ಲಿ ಏಕಾಏಕಿ ಮಳೆ ಸುರಿಯಿತು. ಒಂದೆರಡು ತಿಂಗಳಿಂದ ಬಿಸಿಲಿನಿಂದ ಕಂಗೆಟ್ಟವರು ಮಳೆರಾಯನ ಆಗಮನದಿಂದ ಸಂತಸಗೊಂಡಿದ್ದಾರೆ.



ಕಳೆದೊಂದು ತಿಂಗಳಿಂದ ಜಿಲ್ಲೆಯಲ್ಲಿ ಸರಾಸರಿ 32 ರಿಂದ 34 ಡಿಗ್ರಿ ಸೆಲಿಯಸ್ ನಷ್ಟು ತಾಪಮಾನ ದಾಖಲಾಗಿತ್ತು. ಬಿಸಿಲಿನ ಝಳದಿಂದ ಕಂಗೆಟ್ಟಿದ್ದ ಜನರು ಮಳೆಯನ್ನು ಕಂಡು ಕೊಂಚ ಸಮಾಧಾನಗೊಂಡರು. ಆದರೆ, ಒಂದು ತಿಂಗಳಿಗೂ ಹೆಚ್ಚು ಕಾಲ ಬಿಸಿಲಿನ ಪ್ರಖರತೆಯಿಂದ ಕಾದ ಬಾಣಲೆಯಂತಾಗಿದ್ದ ಭೂಮಿಗೆ ಮಳೆ ಸುರಿದಿರುವುದರಿಂದ ಧಗೆ ಮತ್ತಷ್ಟು ಹೆಚ್ಚಾಗುವ ಭೀತಿ ಎದುರಾಗಿದೆ. ಇನ್ನು ಜೋರು ಮಳೆಯಾಗಿ ತಂಪು ನೀಡಲಿ ಎಂಬುದು ಜನರ ನಿರೀಕ್ಷೆಯಾಗಿದೆ.

ಫಸಲಿಗೆ ಹಾನಿ: ಜಿಲ್ಲೆಯ ಕೆಲವೆಡೆ ಸುರಿದ ಭಾರೀ ಆಲಿಕಲ್ಲು ಮಳೆ ಯಿಂದಾಗಿ ಬಾಳೆ, ಅರಿಶಿನ, ಮಾವು, ಕೋಸು, ಟಮೋಟೋ ಸೇರಿದಂತೆ ಇನ್ನಿತರ ಬೆಳೆಗಳಿಗೆ ಹಾನಿಯಾಗಿದ್ದು, ರೈತರಿಗೆ ಸಾಕಷ್ಟು ನಷ್ಟವಾಗಿದೆ. ಬೆಳೆಗಳು ಕಟಾವಿಗೆ ಬಂದಿದ್ದು, ರೈತರ ಕೈಗೆ ಬೆಳೆ ಸೇರುವ ಮೊದಲೇ ಭಾರೀ ಆಲಿಕಲ್ಲು ಮಳೆಯಿಂದ ಬೆಳೆ ನಷ್ಟವಾಗಿದ್ದು, ರೈತರು ಪರಿತಪಿ ಸುವಂತಾಗಿದೆ.

ಸೂಕ್ತ ಪರಿಹಾರಕ್ಕೆ ಒತ್ತಾಯ: ಆಲಿಕಲ್ಲು ಮಳೆಯಿಂದ ಸಾಲ ಮಾಡಿ ಬೆಳೆದ ಫಸಲು ಕೈ ತಪ್ಪುವಂತಾಗಿದೆ. ಹೀಗಾಗಿ ಜಿಲ್ಲಾಡಳಿತ ಪರಿಶೀಲಿಸಿ ಸರ್ಕಾರದಿಂದ ಪರಿಹಾರ ಕೊಡಿಸಿಕೊಡ ಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

ಯುಗಾದಿಯಿಂದ ಯುಗಾದಿಗೆ ವರ್ಷ ಭವಿಷ್ಯ



ಈ ಸಂವತ್ಸರದ ದ್ವಾದಶ ರಾಶಿ ಫಲಗಳನ್ನು ಬರೆಯಲಾಗಿದೆ. ಇದು ಒಂದು ರೀತಿಯಲ್ಲಿ ಸ್ಥೂಲ ರೂಪವಾಗಿದ್ದು, ನಿಖರವಾದ ಹೆಚ್ಚಿನ ಭವಿಷ್ಯ ತಿಳಿಯಲು, ಜನ್ಮ ಕುಂಡಲಿ ಮತ್ತು ಆಯಾ ರಾಶಿಗಳವರಿಗೆ ನಡೆಯುತ್ತಿರುವ ದಶಾಭುಕ್ತಿಗಳ ಫಲಗಳನ್ನು ಮಿಲನಗೊಳಿಸಿ ಫಲಗಳನ್ನು ಖಚಿತಪಡಿಸಿಕೊಳ್ಳ ಬಹುದಾಗಿದೆ. ಇಲ್ಲಿ ಪ್ರಮುಖವಾಗಿ ಈ ಸಂವತ್ಸರದಲ್ಲಿ ಗುರು-ಶನಿ ಗ್ರಹಗಳ ಸಂಚಾರವನ್ನು ಆಧರಿಸಿ ಭವಿಷ್ಯವನ್ನು ಬರೆಯಲಾಗಿದೆ.

ಸುಭಾಷಿತ: ಉದ್ಯಮಂ ಸಾಹಸಂ ಧೈರ್ಯಂ ಬುದ್ಧಿಃ ಶಕ್ತಿಃ ಪರಾಕ್ರಮಃ ।
ಷಡತೇ ಯತ್ರ ವರ್ತಂತೇ ತತ್ರ ದೇವಃ ಸಹಾಯಕೃತ್ ॥

ಅರ್ಥ: ಎಲ್ಲಿ ಉದ್ಯಮ, ಸಾಹಸ, ಧೈರ್ಯ, ಬುದ್ಧಿ, ಶಕ್ತಿ, ಪರಾಕ್ರಮ ಈ ಆರು ಒಂದಾಗುತ್ತವೆಯೋ ಆಗ ದೈವ ಸಹಾಯ ತಾನೇ ಒದಗುತ್ತದೆ.

ಶ್ರೀ ಪರಾಭವ ನಾಮ ಸಂವತ್ಸರ ದ್ವಾದಶ ರಾಶಿಗಳ ವರ್ಷ ಭವಿಷ್ಯ 19-3-2026ರಿಂದ 6-4-2027

ಮೇಷ

ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ.

ಮುಂಚೂಣಿಯಲ್ಲಿರಬೇಕೆಂಬ ಹಂಬಲ ಹಾಗೂ ದುಡುಕು ನಿಮ್ಮ ರಾಶಿ ಜನ್ಯ ಗುಣ. ಭಾಗ್ಯಾಧಿಪತಿಯೂ, ವ್ಯಯಾಧಿಪತಿಯೂ ಆಗಿರುವ ಶ್ರೀಗುರು ಹೆಚ್ಚು ಸಮಯ ತೃತೀಯ, ಚತುರ್ಥದಲ್ಲಿ ಸಂಚರಿಸುವ ಫಲವೇನೆಂದರೆ ಕೆಲಸ-ಕಾರ್ಯಗಳು ಆಮೆ ವೇಗದಲ್ಲಿ ಸಾಗುತ್ತವೆ. ಕ್ರಯ-ವಿಕ್ರಯದಲ್ಲಿ ವಿಳಂಬ ಆಗುವುದರ ಜೊತೆಗೆ ನಷ್ಟವೂ ಸಂಭವಿಸಬಹುದು. ಬಂಧು ಜನರ ವಿರೋಧದಿಂದ ಮುಖ್ಯ ಸಂಗತಿಗಳು ಇತ್ಯರ್ಥ ಕಾಣದೆ ಮುಂದೂಡಲ್ಪಡುತ್ತವೆ. ತನ್ನ ಸ್ವಂತ ಸ್ಥಳ ಬಿಟ್ಟು ದೂರ ಇರಬೇಕಾದ ಪ್ರಸಂಗ ಉಂಟಾದೀತು. ವಿದ್ಯಾರ್ಥಿಗಳಿಗೆ ಪ್ರಾಜೆಕ್ಟ್ ರಿಪೋರ್ಟ್ ತಯಾರಿಯಲ್ಲಿ ವಿಘ್ನಗಳು ಉಂಟಾಗುತ್ತವೆ. ದೀಪಾವಳಿಯಿಂದ ಸಂಕ್ರಾಂತಿಯವರೆಗೆ ನೆಮ್ಮದಿ ನೀಡುವಂತಹ ಪ್ರಸಂಗಗಳು, ಸಜ್ಜನರ ಸಮಾಗಮ, ಶುಭ ಕಾರ್ಯಾನುಕೂಲಗಳು ಘಟಿಸುತ್ತವೆ.

ಸಂವತ್ಸರ ಪೂರ್ತ ವ್ಯಯ ಸ್ಥಾನದಲ್ಲಿ ಸಂಚರಿಸುವ ಶನಿದೇವನು ಅನೇಕ ತೆರನಾದ ಸಂಕಷ್ಟ ಪ್ರಸಂಗಗಳಿಗೆ ಕಾರಣನಾಗುತ್ತಾನೆ. ಮೇರೆ ಮೀರಿದ ಖರ್ಚುಗಳು, ಸಂಪತ್ತಿನ ಅವನತಿ, ಕಳ್ಳಕಾಕರಿಂದ ಹಾನಿ ಹಾಗೂ ನ್ಯಾಯಾಲಯ ವಿಚಾರಗಳಲ್ಲಿ ಹಿನ್ನಡೆಯು ಕಾಣಬರುತ್ತದೆ. ವಾಹನ ಸಂಚಾರದಲ್ಲಿ ಆತುರ ತರುವುದು ಗಂಡಾಂತರ.

ರಾಹು ಫಲ: **ಯತ್ನ ಕಾರ್ಯ ಸಿದ್ಧಿ, ನೂತನ ಉದ್ಯಮ ಸ್ಥಾಪನೆ, ಅನ್ಯರಿಗೆ ಜಾಮೀನು ಸಹಿ ಹಾಕುವುದರಿಂದ ನಷ್ಟ.**
ಕೇತು ಫಲ: **ವಾಹನ ವ್ಯವಹಾರದಲ್ಲಿ ನಷ್ಟ. ಸಂಬಂಧಿಕರಲ್ಲಿ ಕಲಹ, ಸಂತಾನ ಚಿಂತೆ, ಉದರ ವ್ಯಾಧಿ.**

ಆಯ-11, ವ್ಯಯ-5.

ವೃಷಭ

ಇ, ಉ, ಎ, ಒ, ವ, ವಿ, ವು, ವೆ, ವೊ

ಪರಶಿವನ ನಂದಿಯಂತೆ ಭಕ್ತಿ-ಶಕ್ತಿಗಳ ಸಂಗಮ ನಿಮ್ಮ ರಾಶಿ. ಇದು ಪರಾಭವ ಸಂವತ್ಸರವಾದರೂ ಶ್ರೀ ಬೃಹಸ್ಪತಿಯ ಒಲುಮೆಯಿಂದ ಸಂವತ್ಸರದ ಉತ್ತರಾರ್ಧದಲ್ಲಿ ಕುಟುಂಬದಲ್ಲಿ ಕ್ಷೇಮ ಸ್ಥೈರ್ಯ, ಶರೀರ ಸೌಖ್ಯ, ಗೃಹದಲ್ಲಿ ವಿವಾಹಾದಿ ಮಂಗಳ ಕಾರ್ಯಗಳು ಜರುಗುವುದು. ನಿಮ್ಮ ಶತ್ರುಗಳು ಪಲಾಯನಗೈಯ್ಯುವರು. ದೀವಳಿಗೆಯಿಂದ ಸಂಕ್ರಾಂತಿಯವರೆಗೆ ಭ್ರಾತೃಗಳಲ್ಲಿ ಮನಸ್ತಾಪ, ಅಕಾರಣವಾದ ಕಲಹಗಳಿಂದ ಮನಸ್ಸು ಝುರ್ಝುರಿತವಾಗುವುದು. ವಾಯು-ಕಫ ಕಾಯಿಲೆ ಕಾಡಬಹುದು. ಯೋಜಿತ ಕಾರ್ಯಗಳ ತಯಾರಿಗೆ ಅಡಚಣೆಗಳು ಎದುರಾಗುವುದು. ಮತ್ತೆ ಸಂಕ್ರಾಂತಿಯಿಂದ ಯುಗಾದಿಯವರೆಗೆ ಶುಭ ಸಂಗತಿಗಳು ಮರುಕಳಿಸುವುದು. ಇಷ್ಟಾರ್ಥ ಸಿದ್ಧಿಯಾಗಿ ಸಂತಸದಿಂದ ಇರುವಿರಿ. ಹಣಕಾಸಿನ ಪರಿಸ್ಥಿತಿಯೂ ಸುಧಾರಿಸುವುದು.

ವಾಯಸ ವಾಹನನಾದ ಶ್ರೀ ಶನಿದೇವರು ಸಂವತ್ಸರ ಪೂರ್ತ ಅನುಗ್ರಹಿಸುವುದೇನೆಂದರೆ ಕೃಷಿಯಿಂದ ಹೇರಳ ಧನ ಲಾಭ. ಎಣ್ಣೆಕಾಳುಗಳು ಸಮೃದ್ಧಿಯಾಗಿ ಫಲಿಸುವುವು. ಕಬ್ಬಿಣ, ಸಿಮೆಂಟ್ ವ್ಯಾಪಾರದಲ್ಲಿ ತೇಜಿ, ಸಿವಿಲ್ ಇಂಜಿನಿಯರ್‌ಗಳಿಗೆ ಬೇಡಿಕೆ ಹೆಚ್ಚುವುದು. ಕಟ್ಟಡ ಕೆಲಸ-ಕಾರ್ಯಗಳು ಸುಲಲಿತವಾಗಿ ನಡೆಯುವುದು. ನಿಮ್ಮ ಸ್ವಭಾವದಲ್ಲಿ ತೀಕ್ಷ್ಣತೆಯಿಂದ ಕ್ರೂರ ಭಾವನೆ ಮೂಡಬಹುದು.

ರಾಹು ಫಲ: **ಸಹೋದರರೊಡನೆ ಭೇದಾಭಿಪ್ರಾಯ, ಕರ್ಮಚಿಂತೆ, ತೀರ್ಥಯಾತ್ರೆ**
ಕೇತು ಫಲ: **ವಾಹನ ರಿಪೇರಿಗೆ ಹಣ ವ್ಯಯ, ಸಂಬಂಧಿಕರೊಂದಿಗೆ ಕಲಹ, ಆರೋಗ್ಯ ವ್ಯತ್ಯಯ.**

ಆಯ-5, ವ್ಯಯ-14

ಮಿಥುನ

ಕ, ಕಿ, ಕು, ಗ, ಙ್ಞ, ಛ, ಕೆ, ಕೊ, ಹ

ಚತುರತೆ ಹಾಗೂ ದ್ವಂದ್ವತ್ವ ನಿಮ್ಮ ರಾಶಿಯ ಅಂತರ್ಗತ ಗುಣ. ಸಪ್ತಮ, ದಶಮಾಧಿಪತಿಯಾದ ಬೃಹಸ್ಪತಿ ಹೆಚ್ಚು ಸಮಯ ನಿಮ್ಮ ಜನ್ಮರಾಶಿಯಲ್ಲೇ ಗೋಚರಿಸುವ ಪರಿಣಾಮ ಅಸಂತುಷ್ಟವಾದ ಮನಸ್ಸು, ಕಳತ್ರ-ಪುತ್ರಾದಿಗಳಲ್ಲಿ ವೈಮನಸ್ಸು, ಜಾತಿ ಜನರಲ್ಲಿ ಅಕಾರಣವಾದ ವಿರೋಧ, ವೈರಿಗಳಿಂದ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ದುರ್ಘಟನೆಗಳು ದೇಶ, ವೇಳೆ, ಸಮಯ ಹೇಳದೆ ಘಟಿಸಿ ಬಿಡುತ್ತವೆ. ನಂಬಲನರ್ಹ ಜನರೊಡನೆ ಹಣಕಾಸಿನ ವ್ಯವಹಾರ ಮಾಡಿ ಕೈಸುಟ್ಟುಕೊಳ್ಳುವಿರಿ. ಕಾರ್ತಿಕ ಮಾಸದ ನಂತರ ಪುಷ್ಯ ಮಾಸದವರೆಗೆ ಯತ್ನ ಕಾರ್ಯಗಳಲ್ಲಿ ಜಯ, ನೂತನ ಉದ್ಯೋಗ ಲಾಭ, ಧನ ಲಾಭಗಳು ಉಂಟಾಗುತ್ತವೆ. ವಿವಾಹ ಯೋಗ್ಯರಿಗೆ ಕಂಕಣ ಬಲ ಕೂಡಿಬರುವುದು.

ನೀಲಾಂಜನ ಸಮಾಭಾಸನಾದ ಶ್ರೀ ಶನಿಮಹಾತ್ಮನು ದಶಮ ಕರ್ಮಭಾವದಲ್ಲಿ ಗೋಚರಿಸುವುದರಿಂದ ಸಾರ್ವಜನಿಕರಿಂದ ಅಪವಾದ ಗಳಿಗೆ ಗುರಿಯಾಗುವಿರಿ. ಭಯ ಪ್ರಸಂಗಗಳಿಂದ ಮಾನಸಿಕ ದುಗುಡತೆ, ಕುಟುಂಬದಲ್ಲಿ ಮನಸ್ತಾಪಗಳು, ಮಾಡುವ ಕೆಲಸದಲ್ಲಿ ಭಂಗ ಉಂಟಾಗಿ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯದು. ರೈತಾಪಿ ಜನರಿಗೆ ನಿರೀಕ್ಷಿತ ಫಸಲು ಬರದೆ ನಷ್ಟವೇ ಜಾಸ್ತಿ. ರಾಜಕೀಯ ಪ್ರತಿಸ್ಪರ್ಧಿಗಳು ನಿಮ್ಮನ್ನು ಅವಮಾನಕ್ಕೆ ಗುರಿ ಮಾಡುವರು. ಕೆಲವೊಮ್ಮೆ ಸ್ಥಾನ ಲಾಭವಾದರೂ ಧನಕ್ಷಯವನ್ನು ಅನುಭವಿಸುವಿರಿ.

ರಾಹು ಫಲ: **ಗೃಹದಲ್ಲಿ ಶುಭ ಸಮಾರಂಭಗಳು, ತೀರ್ಥಯಾತ್ರೆ, ಹಿರಿಯರೊಬ್ಬರು ವಿಯೋಗ.**
ಕೇತು ಫಲ: **ಸಾಹಸ ಪ್ರವೃತ್ತಿ, ಕ್ರೀಡೆಯಲ್ಲಿ ಜಯ, ಸಹೋದರರೊಂದಿಗೆ ಮಾತಿನಿಂದ ಕಲಹ, ಆರ್ಥಿಕ ಸಂಕಷ್ಟಗಳು.**

ಆಯ-8, ವ್ಯಯ-11.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು
ಸಂಚಾಲಕರು, ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು. ಮೊ: 9740973224, 9739548720

ಕಟಕ

ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ

ಆತುರತೆ ಹಾಗೂ ಶೀಘ್ರ ನಿರ್ಣಯ ನಿಮ್ಮ ರಾಶಿ ಜನ್ಯ ಸ್ವಭಾವ. ಈ ಸಂವತ್ಸರದ ಹೆಚ್ಚಿನ ಸಮಯ ವ್ಯಯ ಸ್ಥಾನ ಹಾಗೂ ಜನ್ಮ ರಾಶಿಯಲ್ಲಿ ಸಂಚರಿಸುವ ಬೃಹಸ್ಪತಿ ನಿಮಗೆ ಅನೇಕ ರೀತಿಯಲ್ಲಿ ಅಗ್ನಿ ಪರೀಕ್ಷೆಯನ್ನು ಒಡ್ಡಲಿದ್ದಾನೆ. ನೀವಿರುವ ಸ್ಥಾನಕ್ಕೆ ಚ್ಯುತಿ ಹಾಗೂ ವ್ಯಾಜ್ಯಗಳಿಂದ ಬವಣೆ ಪಡುವಿರಿ. ಧನ, ಸಂಪತ್ತಿನ ಪಂಥಾಹ್ವಾನಗಳಿಂದ ದುಃಖ-ನಷ್ಟಗಳು ಎದುರಾಗುವುದು. ಸರ್ಕಾರಿ ನೌಕರರು ಅಮಾನತು, ಇಲಾಖಾ ವಿಚಾರಣೆಗಳಂತಹ ಸಂಕಷ್ಟಗಳು ಎದುರಾಗದಂತೆ ಎಚ್ಚರಿಕೆಯಿಂದ ಇರಬೇಕು. ಆರೋಗ್ಯವೂ ಸಮರ್ಪಕವಾಗಿರದೆ ವೈದ್ಯೋಪಚಾರಕ್ಕೆ ಹೆಚ್ಚಿನ ಹಣ ವ್ಯಯವಾಗುವುದು. ಜೂಜು, ರೇಸುಗಳಿಂದ ಯಾರೂ ಶ್ರೀಮಂತರಾಗಿಲ್ಲ ಎಂಬ ಅರಿವಿರಲಿ. ಈ ನಡುವೆ ದೀಪಾವಳಿಯಿಂದ ಸಂಕ್ರಾಂತಿಯವರೆಗೆ ಅತಿಚಾರ ಹೊಂದುವ ಗುರು ಕೆಲವೊಂದು ನೆಮ್ಮದಿಯ ಪ್ರಸಂಗಗಳಿಂದ ಮನ, ಮನೆಯಲ್ಲಿ ಹರುಷ, ಸಿರಿ ಸಂಪದಗಳು, ಧನ ಸಂಚಯ, ಯಶಃ, ಕೀರ್ತಿಗಳನ್ನು ನೀಡಲಿದ್ದಾನೆ. ಆರೋಗ್ಯವೂ ಸುಧಾರಿಸುವುದು. ವ್ಯಾಪಾರ-ವ್ಯವಹಾರಗಳು ಲಾಭದಲ್ಲಿ ನಡೆಯುವುದು. ಹೊಸ ಯೋಜನೆ ಆರಂಭಿಸಲು ಪ್ರೇರಣೆ ಆಗುವುದು.

ನೀತಿ ಮಾರ್ಗ ಕೋವಿದನಾದ ಶ್ರೀ ಶನಿದೇವನು ನವಮ ಭಾವದಲ್ಲಿ ಗೋಚರಿಸುವ ಫಲವಾಗಿ ಧಾರ್ಮಿಕ ಕಾರ್ಯಗಳಲ್ಲಿ ವಿಘ್ನಗಳು ಉಂಟಾಗುತ್ತವೆ. ದಾರಾ-ಪುತ್ರರಲ್ಲಿ ಕಲಹ ಮನಸ್ತಾಪಗಳಿಗೆ ಕಾರಣನಾಗುತ್ತಾನೆ. ಕೃಷಿಕರಿಗೆ ಉತ್ತಮ ಬೆಳೆಯಾದರೂ ಸೂಕ್ತ ಬೆಲೆ ದೊರೆಯದೆ ನಿರಾಶೆಯಾಗುವುದು. ನಿಮ್ಮ ಆರೋಗ್ಯದ ಬಗ್ಗೆ ಉಪೇಕ್ಷೆ ಸಲ್ಲದು.

ರಾಹು ಫಲ: **ಧನ ನಷ್ಟ, ಎಲ್ಲರಲ್ಲಿಯೂ ವಿರೋಧ, ಅಪಘಾತ, ಆಕಸ್ಮಿಕ ಧನಪ್ರಾಪ್ತಿ, ವಾತ ರೋಗ.**
ಕೇತು ಫಲ: **ಕಠಿಣ ಮಾತಿನಿಂದ ಸ್ನೇಹ ಭಂಗ, ಆರ್ಥಿಕವಾಗಿ ಮೋಸ ಹೋಗುವಿಕೆ, ನರ ದೌರ್ಬಲ್ಯ**

ಆಯ-8-ವ್ಯಯ-2.

ಸಿಂಹ

ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ

ಏಕಾಂತ ಪ್ರಿಯತೆ ಹಾಗೂ ವನ ಸಂಚಾರ ಪ್ರಿಯರಾದ ನಿಮಗೆ ಈ ಸಂವತ್ಸರ ಹೆಚ್ಚಿನ ಶುಭ ಫಲಗಳನ್ನು ತರಲಿದೆ. ವ್ಯಾಪಾರ-ವ್ಯವಹಾರಗಳಲ್ಲಿ ಹೆಚ್ಚಿನ ಧನಾದಾಯವಾಗುವುದು. ಶೇರು ವ್ಯವಹಾರದಲ್ಲಿ ಉತ್ತಮ ಲಾಭವಾಗುವುದು. ಸುರಗುರುವಿನ ಕೃಪೆಯಿಂದ ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು. ಹೊಸ ಸಂಪತ್ತು ಹೊಂದಲು ಅವಕಾಶವಿದೆ. ಸತ್ಕರ್ಮಾಚರಣೆಯಿಂದಲೂ, ಸಾಮಾಜಿಕ ಸೇವೆಯಿಂದಲೂ ಕೀರ್ತಿ, ಸತ್ಕಾರ್ಯಗಳಿಗೆ ಭಾಜನರಾಗುವಿರಿ. ಉದ್ಯೋಗಾಕಾಂಕ್ಷಿಗಳು ಉತ್ತಮ ಬುದ್ಧಿಮತ್ತೆಯಿಂದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ವಿಜಯವನ್ನು ಸಾಧಿಸುವರು. ಐಟಿ, ಬಿಟಿ ಮಂದಿಗಳಿಗೆ ಇನ್ನೂ ಹೆಚ್ಚಿನ ಸ್ಥಾನಮಾನಗಳು ದೊರೆತು ವಿದೇಶಕ್ಕೆ ತೆರಳುವ ಯೋಗವಿದೆ. ಮಧ್ಯೆ ಕೆಲವು ಸಮಯವಷ್ಟೇ ಸ್ವಸ್ಥಾನ ತ್ಯಾಗ, ಸಜ್ಜನರೊಂದಿಗೆ ಜಗಳ, ವ್ಯಾಪಾರ ಮಟ್ಟ ಕುಸಿತಗಳನ್ನು ಎದುರಿಸಬೇಕಾಗುವುದು. ಶರೀರ ಸ್ವಾಸ್ಥ್ಯದ ಬಗ್ಗೆಯೂ ಗಮನ ನೀಡಬೇಕಾಗುತ್ತದೆ.

ಛಾಯಾಪುತ್ರನಾದ ಶನಿರಾಜನು ಸಂವತ್ಸರ ಪೂರ್ತಿ ಅಷ್ಟಮದಲ್ಲಿ ಸಂಚರಿಸುವುದರಿಂದ ಪ್ರಯತ್ನ ಪೂರ್ವಕವಾಗಿ ಮಾಡುವ ಕೆಲಸಗಳಲ್ಲಿ ತೊಂದರೆ, ಕಷ್ಟಗಳು ಅನುಭವಕ್ಕೆ ಬರುವುದು. ಹೃದಯ ಸಂಬಂಧಿ ಕಾಯಿಲೆ ಮರುಕಳಿಸಬಹುದು. ಎಣ್ಣೆಕಾಳು ಬೆಳೆಗಳು ಸರಿಯಾಗಿ ಫಲಿಸದೆ ರೈತರಿಗೆ ನಷ್ಟವಾಗುವುದು. ಶತ್ರುಗಳ ಉಪಟಳ ಹೆಚ್ಚುವುದು.

ರಾಹು ಫಲ: **ಸತಿ-ಪತಿಯರಲ್ಲಿ ಒಮ್ಮತವಿರದೆ ಅಸಮಾಧಾನ. ಕ್ರೀಡೆಯಲ್ಲಿ ಜಯ, ಎದುರಾಳಿ ಹಿಮ್ಮೆಟ್ಟುವರು.**
ಕೇತು ಫಲ: **ಚಿತ್ತ ಭ್ರಮೆ, ಉದ್ವೇಗಕ್ಕೆ ಗುರಿಯಾಗುವಿಕೆ, ಶಸ್ತ್ರ ಚಿಕಿತ್ಸೆಯ ಸಾಧ್ಯತೆ.**

ಆಯ-5, ವ್ಯಯ-5.

ಕನ್ಯಾ

ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ.

ಬಹುಮುಖ ಪ್ರತಿಭೆ ನಿಮಗೆ ದೈವದತ್ತವಾದ ವರ. ಅದನ್ನು ಸಮರ್ಥವಾಗಿ ಬಳಸಿಕೊಳ್ಳಲು ಸಂವತ್ಸರದ ಆರಂಭಕ್ಕೆ ಕರ್ಮ ಸ್ಥಾನದಲ್ಲಿ ಗೋಚರಿಸುವ ಶ್ರೀಗುರು ಮಾಡುವ ಕೆಲಸಗಳಲ್ಲಿ ನೀವು ನಿರೀಕ್ಷಿಸಿದಷ್ಟು ಫಲವನ್ನು ನೀಡನು. ಕಷ್ಟಗಳು ಜಾಸ್ತಿ, ಪ್ರತಿಫಲ ಕಡಿಮೆ. ವಿದ್ಯಾರ್ಥಿಗಳು ಆಲಸಿಗರಾಗುವರು. ದೀಪಾವಳಿಯ ವೇಳೆಗೆ ಗುರುವು ವಕ್ರಗತಿಯಿಂದ ಲಾಭ ಸ್ಥಾನಕ್ಕೆ ಬರುವ ಫಲವಾಗಿ ನಿಮ್ಮ ಹಲವು ಸಮಯದ ಆಸೆ-ಆಕಾಂಕ್ಷೆಗಳು ಸಾಕಾರವಾಗುವುದು. ಹೊಸ ಆಸ್ತಿ-ಪಾಸ್ತಿ ಹೊಂದಲು, ಸಣ್ಣಪುಟ್ಟ ಚುನಾವಣೆ ಗೆಲ್ಲಲು ಅವಕಾಶವಿರುತ್ತದೆ. ಶುಭ ಕಾರ್ಯಾಚರಣೆ, ಧಾನ-ಧರ್ಮ ಬುದ್ಧಿಯಿಂದ ಖ್ಯಾತನಾಮರಾಗುವಿರಿ. 'ಬಲ್ಲವರ ಒಡನಾಟ ಬೆಲ್ಲವನು ಮೆದ್ದಂತೆ' ಎಂಬಂತೆ ಮುಂದೆ ಸಾಗಿ.

ರವಿ ನಂದನನಾದ ಶನಿಸ್ವಾಮಿ ಸಂವತ್ಸರದ ನ್ಯಾಯಾಂಕಿತ 'ಪರಾಭವ' ಎಂಬಂತೆ ಎಲ್ಲ ರಂಗಗಳಲ್ಲೂ ಹಿನ್ನಡೆಯನ್ನು ಅನುಭವಿಸಬೇಕಾಗಬಹುದು. ದೊಡ್ಡ ಉದ್ದಿಮೆದಾರರಿಗೆ ಕಾರ್ಮಿಕ ವರ್ಗದವರ ಅಸಹಕಾರದಿಂದ ನಷ್ಟ ಉಂಟಾಗಲಿದೆ. ರೈತಾಪಿ ಜನರಿಗೆ ಪ್ರಕೃತಿ ವಿಕೋಪ ಹಾಗೂ ವನ್ಯಜೀವಿಗಳ ಉಪಟಳದಿಂದ ಬೆಳೆ ನಷ್ಟ ಉಂಟಾಗುವುದು. ಹೊಸ ಬಂಡವಾಳ ಹೂಡಿಕೆಯಲ್ಲಿ ಅತ್ಯಂತ ಜಾಗರೂಕರಾಗಿರಿ. ಪಾಲುದಾರಿಕೆ ವ್ಯವಹಾರಗಳಲ್ಲಿ ಒಮ್ಮತವಿರದೆ ನಷ್ಟವನ್ನು ಅನುಭವಿಸಬೇಕಾಗಬಹುದು. ಶ್ರೀ ಶನಿ ಶಾಂತಿಗೆ 'ಶ್ರೀ ಶನಿ ಚಾಲೀಸ' ಪಠಿಸಿ.

ರಾಹು ಫಲ: **ಶತ್ರುಗಳು ಹಿಂದೆ ಸರಿಯುವರು, ಪಂಥಾಹ್ವಾನದಲ್ಲಿ ಜಯ, ಕಂಪ್ಯೂಟರ್ ವಿದ್ಯಾರ್ಜನೆಯಿಂದ ಲಾಭ.**
ಕೇತು ಫಲ: **ಅಪರಿಚಿತರಿಂದ ಲಾಭ, ದೈಹಿಕ ಪೀಡೆಗಳು.**

ಆಯ-8, ವ್ಯಯ-11.

ತುಲಾ

ರ, ರಿ, ರು, ರೆ, ರೊ, ತ, ತಿ, ತು, ತೆ.

ನ್ಯಾಯ ನಿಷ್ಠೂರತೆ ಜೊತೆಗೆ ಹುಟ್ಟು ವ್ಯಾಪಾರ ನಿಮ್ಮ ಜನ್ಮಗತ ಗುಣ. ಈ ಸಂವತ್ಸರದಲ್ಲಿ ಗುರು ಕೃಪೆಯಿಂದ ಅನೇಕ ರೀತಿಯಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಸಫಲತೆಯನ್ನು ಸಾಧಿಸುವವರಿದ್ದೀರಿ. ತತ್ವ ವಿಚಾರ ಹಾಗೂ ಆಧ್ಯಾತ್ಮ ವಿಚಾರಗಳಲ್ಲಿ ಆಸಕ್ತಿ ಮೂಡುವುದು. ಹಲವು ಬಾರಿ ಪುಣ್ಯಕ್ಷೇತ್ರ ಸಂದರ್ಶನ ಯೋಗವಿದೆ. ಸಂತರ ಹಾಗೂ ವಿದ್ವಜ್ಜನರ ಭೇಟಿ, ಆಶೀರ್ವಾದಗಳು ದೊರೆಯಲಿವೆ. ವ್ಯಾಪಾರ-ವ್ಯವಹಾರಗಳು ಚೆನ್ನಾಗಿ ನಡೆದು ಧನ ಸಂಗ್ರಹವಾಗಿ ಕನಕಾದಿ ವಸ್ತು ವಾಹನಗಳನ್ನು ಹೊಂದುವಿರಿ. ಜ್ಯುವೆಲರಿ ವ್ಯಾಪಾರಿಗಳಿಗೆ ಬಂಪರ್ ವ್ಯಾಪಾರ ಹಾಗೂ ಧನ ಲಾಭವಾಗುವುದು. ವಿವಾಹಯೋಗ್ಯರು ಮಧು-ಚಂದ್ರಕ್ಕೆ ತೆರಳಲು ಸಿದ್ಧತೆ ಮಾಡಿಕೊಳ್ಳಿ.

ಕಲಿ ಕರ್ಮಕ್ಕೆ ಫಲ ನೀಡುವ ದಂಡಾಧಿಕಾರಿ ಎನಿಸಿದ ಶ್ರೀ ಶನಿದೇವನೂ ಉತ್ತಮ ಭಾವದಲ್ಲಿ ಸಂಚರಿಸುತ್ತಿದ್ದು, ಆತನ ಕೃಪೆಯಿಂದ ಕೃಷಿಯಲ್ಲಿ ಉತ್ತಮ ಬೆಳೆ ಹಾಗೂ ಬೆಲೆಯನ್ನು ಪಡೆಯುವರು. ನಿವೇಶನ, ನೂತನ ಗೃಹ ಹೊಂದುವ ಯೋಗವಿದೆ. ಬೃಹತ್ ಉದ್ದಿಮೆದಾರರಿಗೆ ಕಾರ್ಮಿಕರ ಸಹಕಾರ ದೊರೆತು ಹೆಚ್ಚಿನ ಆದಾಯವಾಗುವುದು. ಋಣ ಮುಕ್ತ, ರೋಗ ಮುಕ್ತಿಗಳನ್ನು ಹೊಂದುವಿರಿ. ಶರಣರ ಸಂಗ ಆಶೀರ್ವಾದಗಳಿಂದ ಸಾಂಸಾರಿಕ ಸಮಸ್ಯೆಗಳು ಪರಿಹಾರವಾಗುವುದು.

ರಾಹು ಫಲ: **ವಿದ್ಯಾಭ್ಯಾಸದಲ್ಲಿ ಪ್ರಗತಿ, ಗಣಕ ಯಂತ್ರ ವ್ಯಾಪಾರಿಗಳಿಗೆ ಉತ್ತಮ ಮಟ್ಟದ ವ್ಯಾಪಾರ.**
ಕೇತು ಫಲ: **ವಾಹನದಿಂದ ನಷ್ಟ, ಮಾನಸಿಕ ಪೀಡೆ.**

ಆಯ-5, ವ್ಯಯ-14.

ವೃಶ್ಚಿಕ

ತೊ, ನ, ನಿ, ನು, ನೆ, ನೊ, ಯ, ಯಿ, ಯು

ಗುಪ್ತತೆ ನಿಮ್ಮ ರಾಶಿಗತ ಗುಣ. ಈ 'ಪರಾಭವ' ನಾಮ ಸಂವತ್ಸರ ಸ್ವಲ್ಪ ನಿರಾಶೆಯನ್ನು ಅನುಭವಿಸುವಿರಿ. ನ್ಯಾಯಯುತ ಮಾರ್ಗದಲ್ಲಿ ಸಾಗಿದರೂ ಅಸಫಲತೆ ಉಂಟಾಗುತ್ತದೆ. ವ್ಯಾಪಾರ-ವ್ಯವಹಾರಗಳಲ್ಲಿ ಹೆಜ್ಜೆ ಹೆಜ್ಜೆಗೂ ಪ್ರತಿಸ್ಪರ್ಧಿಗಳ ಕಾಟ. ಬಂಧು-ಮಿತ್ರರಲ್ಲಿ ವಿರಸ. ಮುಖ್ಯ ಕಾರ್ಯ ಕಲಾಪಗಳು ಪ್ರಗತಿಯನ್ನು ಕಾಣದೆ ಬೇಸರ. ಕೌಟುಂಬಿಕ ಕಲಹಗಳಿಂದ ಮನಸ್ಸು ವ್ಯಾಕುಲಗೊಳ್ಳುವುದು. ಜೊತೆಗೆ ಅನಾರೋಗ್ಯವೂ, ಔಷಧಿ ಖರ್ಚುಗಳು ಎದುರಾಗುವುದು. ಗಣಪತಿ ಹಬ್ಬದಿಂದ ದೀಪಾವಳಿವರೆಗೆ ವಕ್ರಗತಿಯಿಂದ ಸಂಚರಿಸುವ ಶ್ರೀಗುರುವಿನ ವರಪ್ರಸಾದವೆಂಬಂತೆ ನಿಮ್ಮ ನಿಪುಣತೆ, ವಾಕ್ಚಾತುರ್ಯದಿಂದ ಹಾಗೂ ಪ್ರಾಮಾಣಿಕ ಶ್ರಮದಿಂದ ಧನ-ಧಾನ್ಯ ಲಾಭ, ಅಧಿಕಾರ ಲಾಭ, ಮನೆಯಲ್ಲಿ ನೆಮ್ಮದಿ ವಾತಾವರಣಗಳನ್ನು ಅನುಭವಿಸುವಿರಿ. ಉತ್ಸಾಹಭರಿತರಾಗಿ ನಿಮ್ಮ ದೈನಂದಿನ ಕಾರ್ಯಗಳನ್ನು ನಿಭಾಯಿಸುವಿರಿ.

ತೃತೀಯ, ಚತುರ್ಥಾಧಿಪತಿಯಾದ ಕಾಕವಾಹನನಾದ ಶನಿದೇವ ಸಂವತ್ಸರ ಪೂರ್ತ ಪಂಚಮದಲ್ಲಿ ಗೋಚರಿಸುವಾಗ 'ಸುತ ಧನಪರಿ ಹೀನ ಪಂಚಮಸ್ಥೇ' ಎಂಬ ಶಾಸ್ತ್ರವಾಕ್ಯದಂತೆ ಸತಿ-ಸುತರಲ್ಲಿ ಜಗಳಗಳು, ಧನ ಹೀನತೆಯಿಂದ ಚಿಂತೆ, ವ್ಯಾಕುಲತೆಗಳು ಉಂಟಾಗುತ್ತದೆ. ಧನ ಸಂಪತ್ತಿನ ಅವನತಿ ಹಾಗೂ ಹತ್ತಿರದವರ ವಿಯೋಗದಿಂದ ದುಃಖ.

ರಾಹು ಫಲ: **ಭೂ ವಿವಾದಗಳು, ಸ್ಥಾನಕ್ಕೆ ಚ್ಯುತಿ, ವಾಹನ ರಿಪೇರಿ ಖರ್ಚು, ಸಾಹಸ ಕಾರ್ಯದಲ್ಲಿ ಯಶಸ್ಸು.**
ಕೇತು ಫಲ: **ಆಕಸ್ಮಿಕ ಧನಲಾಭ, ವಿಷಜಂತು ಭಯ.**

ಆಯ-11, ವ್ಯಯ-5.

ಧನುಸ್ಸು

ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ

ದೂರದರ್ಶಿತ್ವ ಹಾಗೂ ನೇರ ನುಡಿ ನಿಮ್ಮ ಜನ್ಮಗತ ಗುಣ. 'ಶಕ್ತಿಗಿಂತ ಯುಕ್ತಿ ಮೇಲು', ಇದು ನಿಮಗೆ 'ಗುರು ಕೃಪೆಯ ಫಲ. ಈ ಸಂವತ್ಸರದಲ್ಲಿ ನಿಮ್ಮ ಅನೇಕ ಕನಸಿನ ಯೋಜನೆಗಳು ಸಾಕಾರವಾಗಲಿವೆ. ಹೊಲ, ಮನೆ ಹೊಂದಲು ಸಕಾಲವಾಗಿದೆ. ಬೃಹತ್ ಬಂಡವಾಳ ಹೂಡುವವರಿಗೂ ಸಮಯ ಕೂಡಿಬಂದಿದೆ. ಜ್ಯುವೆಲರಿ ಹಾಗೂ ಪ್ರಸಾಧನ ವರ್ತಕರು ಪೈಪೋಟಿಯ ನಡುವೆಯೂ ಉತ್ತಮ ಲಾಭವನ್ನು ಗಳಿಸುವರು. ವಿವಾಹಯೋಗ್ಯರು ಶೀಘ್ರವೇ ಹನಿಮೂನ್‌ಗೆ ತೆರಳಲು ತಯಾರಿ ಮಾಡಿಕೊಳ್ಳಲಿ.

ಏರು-ಪೇರು ಜೀವನದ ಧರ್ಮ, ಗುರುದೇವ ಕೆಲವು ಸಮಯ ಅಷ್ಟಮದಲ್ಲಿ ಸಂಚರಿಸುವುದರಿಂದ ಅನೇಕ ತರಹದ ಪರೀಕ್ಷೆಗಳನ್ನು ಒಡ್ಡುವನು. ನಿಮ್ಮ ಗೌರವ, ಪ್ರತಿಷ್ಠೆಗಳಿಗೆ ಹಾನಿ ಉಂಟಾಗಬಹುದು. 'ಅನಾರೋಗ್ಯ, ವೈದ್ಯಕೀಯ ಖರ್ಚುಗಳು, ಎದುರಾಗುವುದು. ಶಿಕ್ಷಣಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಅಡಚಣೆಗಳು ಉಂಟಾಗುವುದು. ಅಪರಿಚಿತ ವ್ಯಕ್ತಿಗಳಿಂದ ಧನ ಸಂಬಂಧ ಮೋಸ ನಡೆಯುವ ಸಂಭವ ಇರುತ್ತದೆ. ಮಾನಸಿಕ ಕ್ಲೇಶಗಳಿಂದ ನವಿಲಿನ ನರ್ತನವಾಗಲೀ, ಕೋಗಿಲೆಯ ಮಧುರ ಧ್ವನಿಯಾಗಲೀ ಬೇಕೆನಿಸುವುದಿಲ್ಲ. ಗುರು ಶಾಂತಿಗೆ 'ಓಂ ಬ್ರಂ ಬೃಹಸ್ಪತಿಯೇ ನಮಃ' ಎಂಬ ಮಂತ್ರ ಜಪಿಸಿ.

ಯಮಾಗ್ರಜನಾದ ಶ್ರೀ ಶನಿದೇವನ ಅರ್ಧಾಷ್ಟಮ ಸಂಚಾರದಿಂದ ಹೊಸ ಹೊಸ ಸಮಸ್ಯೆಗಳು ಉಂಟಾಗುತ್ತವೆ. ಯಾವ ಕೆಲಸದಲ್ಲಿಯೂ ಹೆಚ್ಚಿನ ಪ್ರಗತಿ ಕಂಡು ಬರುವುದಿಲ್ಲ. ಹೊಸ ಬಂಡವಾಳ ಹೂಡಿಕೆಗಳನ್ನು ಮುಂದೂಡುವುದು ಒಳಿತು. ಸಾರ್ವಜನಿಕರಿಂದ ಅಪವಾದದ ಭೀತಿ ಇರುತ್ತದೆ. ಸ್ತುತಿ-ನಿಂದನೆಗಳನ್ನು ಸಮಾನವಾಗಿ ಸ್ವೀಕರಿಸಿ.

ರಾಹು ಫಲ: **ಸಹೋದರರೊಂದಿಗೆ ಕಲಹ, ನ್ಯಾಯಾಲಯದಲ್ಲಿ ಹಿನ್ನಡೆ, ಕ್ರೀಡೆಯಲ್ಲಿ ಯಶಸ್ಸು, ಕೀರ್ತಿ.**
ಕೇತು ಫಲ: **ನಾನಾ ರೀತಿಯ ಮನೋವ್ಯಥೆ, ಕರುಳು ಬೇನೆ, ತೀರ್ಥಯಾತ್ರೆಯಿಂದ ಕಳವಳ ನಿವಾರಣೆ.**

ಆಯ-14, ವ್ಯಯ-11.

ಮಕರ

ಬೊ, ಜ, ಜಿ, ಶಿ, ಶು, ಶೆ, ಶೊ, ಗ, ಗಿ.

ಕುಶಾಗ್ರ ಮತಿತ್ವ ನಿಮ್ಮ ರಾಶಿಗತ ಗುಣ. ಶ್ರೀ ಪರಾಭವ ಸಂವತ್ಸರದಲ್ಲಿ ಶ್ರೀ ಗುರುವು ಬಹು ಸಮಯ ನಿಮಗೆ ಅನೇಕ ತರದ ಅಗ್ನಿ ಪರೀಕ್ಷೆಗಳನ್ನು ಒಡ್ಡಲಿದ್ದಾನೆ. 'ಅಟ್ಟಕ್ಕೆ ಹತ್ತದವನು ಬೆಟ್ಟವನ್ನು ಹತ್ತುವನೇ' ಎಂಬಂತೆ ಆಗುವುದು ನಿಮ್ಮ ಪರಿಸ್ಥಿತಿ. ನಿಮ್ಮವರೇ ನಿಮ್ಮನ್ನು ತಿರಸ್ಕಾರ ಭಾವದಿಂದ ನೋಡುವರು. ಹೊಸ ವೈರಿಗಳು ಹುಟ್ಟಿಕೊಳ್ಳುವರು. ಕೈಗೆ ಬಂದ ಹಣ ಕೈಯ್ಯಲ್ಲಿ ನಿಲ್ಲದೆ ಸಾಲ ಮಾಡಬೇಕಾದ ಪರಿಸ್ಥಿತಿಗೆ ಗುರಿಯಾಗುವಿರಿ. ಉದ್ಯೋಗ ನಿಮಿತ್ತ ಅನ್ಯಸ್ಥಳ ವಾಸಗಳಿಂದ ಪರಸ್ಥಳವೋ, ಪರದಾಟವೋ ಎಂಬಂತೆ ಆಗಿ, ಮಡದಿ, ಮಕ್ಕಳ ಸನಿಹತೆ ಬೇಕೆನಿಸುವುದು. ಆಗಾಗ ಆರೋಗ್ಯ ತಪಾಸಣೆ ಮಾಡಿಕೊಳ್ಳುವುದು ಒಳ್ಳೆಯದು. ಧೃತಿಗೆಡುವ ಅಗತ್ಯವಿಲ್ಲ. ದೀಪಾವಳಿ ನಂತರ 'ಮರಳುಗಾಡಿನಲ್ಲಿ ಓಯಸಿಸ್' ಎಂಬಂತೆ ಶ್ರೀ ಬೃಹಸ್ಪತಿಯು ಕರುಣಾ ವರ್ಷವನ್ನು ಮಾಡಲಿದ್ದಾರೆ. ಮಂಗಳ ದ್ರವ್ಯ, ರೇಷ್ಮೆ, ಬಂಗಾರ, ಬೆಳ್ಳಿ ವ್ಯಾಪಾರಗಳು ಲಾಭದ ಹಾದಿಯಲ್ಲಿ ನಡೆಯುವುದು.

ನ್ಯಾಯ ಮಾರ್ಗ ಪ್ರೇರಕನಾದವನೂ, ನಿಮ್ಮ ರಾಶ್ಯಾಧಿಪತಿಯೂ ಆದ ಶ್ರೀ ಶನಿಮಹಾತ್ಮನು ನಿಮ್ಮನ್ನು ಸಾಡೇ ಸಾತಿ ಶನಿಕಾಟದಿಂದ ಬಿಡುಗಡೆಗೊಳಿಸಿ ವಿಕ್ರಮ ಸ್ಥಾನಕ್ಕೆ ಬಂದಾಗಿದೆ. 'ಕಾದಾಗ ಕಬ್ಬಿಣ ತಟ್ಟಿಕೊ' ಎಂಬ ನಾಣ್ಣುಡಿಯಂತೆ ನಿಮ್ಮ ಬಹು ಸಮಯದ ಮಹತ್ವದ ಕೆಲಸಗಳನ್ನು ಪೂರೈಸಿಕೊಳ್ಳಿ. ಕೃಷಿಕರು, ಗುತ್ತಿಗೆದಾರರು, ಇಂಜಿನಿಯರ್‌ಗಳು ಹೆಚ್ಚಿನ ಧನಾದಾಯವನ್ನು ಹೊಂದುವರು. ಗುಡಿ-ಕೈಗಾರಿಕೆಯವರಿಗೆ ಸರ್ಕಾರದ ಸಹಾಯ ದೊರೆಯುವುದು.

ರಾಹು ಫಲ: **ಎಲ್ಲರಲ್ಲಿ ವಿರೋಧ, ಮನಸ್ತಾಪ, ಮಹಾಭಯ ಪ್ರಸಂಗಗಳು, ನ್ಯಾಯಾಲಯ ವಿಚಾರದಲ್ಲಿ ನಷ್ಟ.**
ಕೇತು ಫಲ: **ದೈಹಿಕ ಪೀಡೆ, ದಾಂಪತ್ಯದಲ್ಲಿ ವಿರಸ, ವಿವಾಹ ಮುಂದೂಡಲ್ಪಡುವುದು.**

ಆಯ-2, ವ್ಯಯ-8.

ಕುಂಭ

ಗು, ಗೆ, ಗೊ, ಸ, ಸಿ, ಸು, ಸೆ, ಸೊ, ದ.

'ತುಂಬಿದ ಕೊಡ ತುಳುಕದಂತೆ' ಇರುವುದು ನಿಮ್ಮ ರಾಶಿ ಸ್ವಭಾವ. ಈ ಪರಾಭವ ಸಂವತ್ಸರದ ಪೂರ್ವಾರ್ಧಕ್ಕೆ ಎಲ್ಲಾ ವಿಚಾರಗಳು ಸುಗಮ, ಸುಲಲಿತವಾಗಿ ಸಾಗಿ ಮನಸ್ಸು ಪ್ರಫುಲ್ಲವಾಗಿರುವುದು. ಇಚ್ಛಿತ ಕಾರ್ಯಗಳು ನಿಮ್ಮ ಯೋಜನೆಯಂತೆ ನಡೆಯಲಡ್ಡಿ ಇಲ್ಲ. ನೂತನ ವ್ಯಾಪಾರ, ಉದ್ಯಮ ಆರಂಭಿಸಲು ಅನುಭವಿಗಳ ಮಾರ್ಗದರ್ಶನ, ಸಹಾಯ ದೊರಕುವುದು. ಸಂದಿಗ್ಧ ಪರಿಸ್ಥಿತಿಗಳನ್ನು ನಿಮ್ಮ ಬುದ್ಧಿಕುಶಲತೆ ಹಾಗೂ ಸಮಯೋಚಿತ ಮಾತಿನಿಂದ ನಿಭಾಯಿಸುವಿರಿ. ಉನ್ನತ ಶಿಕ್ಷಣಾರ್ಥಿಗಳಿಗೆ, ಸೃಜನಶೀಲ ವ್ಯಕ್ತಿಗಳಿಗೆ ಇಂದು ವಿಶೇಷ ಸಾಧನೆಯ ವರ್ಷವೆನಿಸಲಿದೆ. ಸಂವತ್ಸರದ ಉತ್ತರಾರ್ಧಕ್ಕೆ ಮಾಡುವ ಕೆಲಸಗಳಲ್ಲಿ ಅನಾನುಕೂಲತೆಗಳು ಕಾಣಬರುವುದು. ಬರಬೇಕಾದ ಹಣ ಕೈ ಸೇರದೆ ಆರ್ಥಿಕ ಮುಗ್ಗಟ್ಟುಗಳನ್ನು ಅನುಭವಿಸುವಿರಿ. 'ಈರುಳ್ಳಿಯಲ್ಲಿ ಬಂದ ಲಾಭ ಬೆಳ್ಳುಳ್ಳಿಯಲ್ಲಿ ಹೋದಂತೆ' ಆಗುವುದು. ಆರೋಗ್ಯದ ಕಡೆ ಗಮನ ನೀಡಿ ಸೂಕ್ತ ವೈದ್ಯೋಪಚಾರ ಪಡೆಯಿರಿ.

ನೀಲಾಂಜನ ಸಮಾಭಾಸನಾದ ಶ್ರೀ ಶನಿದೇವನ ಸಾಡೇ ಸಾತಿಯ ಅಂತಿಮ ಚರಣ ಈ ಸಂವತ್ಸರ ಪೂರ್ಣ ಜಾರಿಯಲ್ಲಿರುವ ಕಾರಣ ಧನ ಸಂಪಾದನೆಯಾದರೂ ಹೆಚ್ಚು ಕಾಲ ಸುಖವನ್ನು ಅನುಭವಿಸಲಾರಿರಿ. ತೇಜೋಹೀನವಾದ ವದನ, ಜೀರ್ಣ ಶರೀರ, ಅಕಾರಣವಾಗಿ ಎಲ್ಲರಲ್ಲಿಯೂ ವಿರೋಧವನ್ನು ಎದುರಿಸಬೇಕಾಗುವುದು. ಕೃಷಿಕರಿಗೆ 'ಕೈಗೆ ಬಂದ ತುತ್ತು ಬಾಯಿಗಿಲ್ಲ' ಎಂಬಂತೆ ಆಗುವುದು. ಶ್ರೀ ಶನಿ ಶಾಂತಿಗೆ 'ದಶರಥ ಕೃತ ಶನಿ ಸ್ತೋತ್ರ' ಪಠಿಸಿ

ರಾಹು ಫಲ: **ಚೋರರಿಂದ ಹಾನಿ. ಕೊಡಿಟ್ಟ ಹಣ ಅಪವ್ಯಯ. ಭಯ ಪ್ರಸಂಗಗಳು.**
ಕೇತು ಫಲ: **ಕೇತು ಗ್ರಹದ ದೃಷ್ಟಿಯಿಂದಾಗಿ ಆರೋಗ್ಯದಲ್ಲಿ ಏರಿಳಿತಗಳಾಗುವ ಸಾಧ್ಯತೆ ಇರುವುದರಿಂದ ನವಗ್ರಹ ಶಾಂತಿ ಮಾಡಿಸಿ, ಶನಿಮಂತ್ರ ಹಾಗೂ ಕೇತು ಮಂತ್ರಗಳನ್ನು ಪಠಿಸುವುದು ಉತ್ತಮ. ದೀಪಾವಳಿಯ ನಂತರ ಉತ್ತಮ ಫಲಗಳನ್ನು ನಿರೀಕ್ಷಿಸಬಹುದಾಗಿದೆ.**

ಆಯ-02, ವ್ಯಯ-8.

ಮೀನ

ದಿ, ದು, ಖ, ಝ, ಥ, ದೆ, ದೊ, ಚ, ಚಿ.

ಸಮದರ್ಶಿತ್ವದೊಂದಿಗೆ ದ್ವಿಸ್ವಭಾವ ಗುಣವುಳ್ಳ ನಿಮಗೆ ಈ ಪರಾಭವ ಸಂವತ್ಸರದ ಪೂರ್ವಾರ್ಧದಲ್ಲಿ ನೀವಿರುವ ಸ್ಥಾನಕ್ಕೆ ಚ್ಯುತಿ, ಶತ್ರು ಜನರಿಂದ ತೊಂದರೆ, ಚಿತ್ತ ಚಾಂಚಲ್ಯ, ಮನೋವಿಕಾರಗಳು ಕಾಡುವುದು. ತಿಳಿಯದೇ ಮಾಡಿದ ತಪ್ಪಿನಿಂದ ದೀನತ್ವ ಉಂಟಾಗುತ್ತದೆ. ಚತುಷ್ಪಾದ ಪ್ರಾಣಿಗಳಿಂದ ಪೀಡೆ ಉಂಟಾಗುವ ಸಂಭವವಿದೆ. ಸಮುದ್ರ ಜನ್ಯ ವಸ್ತು ವ್ಯಾಪಾರಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯದು. ಸಂವತ್ಸರದ ಉತ್ತರಾರ್ಧಕ್ಕೆ ನಿಮ್ಮ ಕಷ್ಟ-ಕಾರ್ಪಣ್ಯಗಳು ಸೂರ್ಯನೆದುರಲ್ಲಿ ಮಂಜು ಕರಗಿದಂತೆ ದೂರವಾಗಲಿವೆ. ಕಾಲ, ಕರ್ಮ, ಕಾರಣಗಳು ಕೂಡಿ ಬಂದ ಫಲವಾಗಿ ನೀವು ಬಯಸಿದ್ದನ್ನು ಗಳಿಸಿಕೊಳ್ಳುವಿರಿ. ಹಲವು ಮೂಲಗಳಿಂದ ಧನ ಸಂಚಯವಾಗುವುದು. ಪ್ರೀತಿ-ಪ್ರಣಯ ವಿಷಯಗಳು ಧನಾತ್ಮಕ ಫಲಿತಾಂಶವನ್ನು ನೀಡುವುದು. ವಿವಾಹಯೋಗ್ಯರಿಗೆ ಕಂಕಣ ಬಲ ಕೂಡಿ ಬರಲಿದೆ.

ಪರಮ ವಿಷ್ಣು ಭಕ್ತನಾದ ಶ್ರೀ ಶನಿದೇವ ಈ ಪರಾಭವ ಸಂವತ್ಸರದಲ್ಲಿ ನಿಮ್ಮ ಜನ್ಮ ರಾಶಿಯಲ್ಲೇ ಸಂಚರಿಸುವ ಪರಿಣಾಮ ಉದ್ಯಮಪತಿಗಳಿಗೆ ಕಾರ್ಮಿಕರ ಅಸಹಕಾರ, ಜಗಳಗಳಿಂದ ನಷ್ಟ ಉಂಟಾಗುವುದು. ರೈತಾಪಿ ಜನರಿಗೆ ನಿರೀಕ್ಷಿತ ಬೆಳೆ ಬಾರದು. ಸರ್ಕಾರಿ ನೌಕರರಿಗೆ ಅನಪೇಕ್ಷಿತ ವರ್ಗಾವಣೆ ಹಾಗೂ ಇಲಾಖಾ ವಿಚಾರಣೆಯ ಸನ್ನಿವೇಶ ಎದುರಾಗುವುದು. ದಾಯಾದಿ ಕಲಹಗಳು ವಿಕೋಪಕ್ಕೆ ಹೋಗಬಹುದು. ಪರಿಹಾರಕ್ಕೆ ಕರಿ ನಾಯಿಯ ಸೇವೆ, 'ಕಾಲಭೈರವಾಷ್ಟಕ' ಪಠಿಸಿ.

ರಾಹು ಫಲ: **ಕೈಗೊಂಡ ಕಾರ್ಯದಲ್ಲಿ ಯಶಸ್ಸು, ಮರಣ ಶಾಸನದಿಂದ ಧನ-ಆಸ್ತಿ ಲಭಿಸಬಹುದು.**
ಕೇತು ಫಲ: **ವಿವಾದಗಳು ಬಗೆಹರಿಯುವಿಕೆ, ನೂತನ ಉದ್ಯಮಕ್ಕೆ ಪ್ರೇರಣೆ ಕರುಳು ಬೇನೆ.**

ಆಯ-14, ವ್ಯಯ-11.

ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸರ್ವ ಸನ್ನದ್ಧ


ಫೈಲ್ ಚಿತ್ರ

ಮಡಿಕೇರಿ, ಮಾ.17–ಮಾ.18 ರಿಂದ ಆರಂಭವಾಗಲಿರುವ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಜಿಲ್ಲಾಡಳಿತ ಹಾಗೂ ಶಾಲಾ ಶಿಕ್ಷಣ ಇಲಾಖೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಬಸವರಾಜು ತಿಳಿಸಿದ್ದಾರೆ.

ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ–1 ಸಂಬಂಧ ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಅಚ್ಚುಕಟ್ಟಾಗಿ ನಡೆಸಲು ಅಗತ್ಯ ತಯಾರಿ ಮಾಡಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ 6,183 ವಿದ್ಯಾರ್ಥಿಗಳು ನೋಂದಣಿ ಮಾಡಿದ್ದಾರೆ. ಇವರಲ್ಲಿ 3,049 ಮಂದಿ ಬಾಲಕರು ಹಾಗೆಯೇ 3,134 ಮಂದಿ ಬಾಲಕಿಯರು ಪರೀಕ್ಷೆ ಬರೆಯಲಿದ್ದಾರೆ. ಹಾಗೆಯೇ 399 ಮಂದಿ ಪುನರಾವರ್ತಿತ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದರು.

ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು, ಕಸ್ಟೋಡಿಯನ್, ಸಾರಿಗೆ ಜಾಗೃತ ದಳ, ಮಾರ್ಗಾಧಿಕಾರಿಗಳು, ಕೊಠಡಿ ಮೇಲ್ವಿಚಾರಕರನ್ನು ನಿಯೋಜಿಸಲಾಗಿದೆ. ಜಿಲ್ಲೆಯ 28 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಮಡಿಕೇರಿ 8, ವಿರಾಜಪೇಟೆ 8 ಹಾಗೂ ಸೋಮವಾರಪೇಟೆ 12 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದು ಹೇಳಿದರು.

ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಅಳವಡಿಕೆ, ಕುಡಿಯುವ ನೀರಿನ ಸೌಲಭ್ಯ, ಬೆಳಕಿನ ವ್ಯವಸ್ಥೆ, ಶೌಚಾಲಯ, ಶುಶ್ರೂಷಕರ ನೇಮಕ, ಪೊಲೀಸರ ನಿಯೋಜನೆ ಸೇರಿದಂತೆ ವಿವಿಧ ಇಲಾಖೆಗಳ ಸಹಕಾರದಲ್ಲಿ ಅಗತ್ಯ ಕ್ರಮವಹಿಸಲಾಗಿದೆ. ವಸತಿ ಶಾಲೆ ವಿದ್ಯಾರ್ಥಿಗಳು ಸೇರಿದಂತೆ ಸರ್ಕಾರಿ, ಅನುದಾನಿತ, ಅನುದಾನ ರಹಿತ ಶಾಲೆಯ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ

ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ಅಗತ್ಯ ಪೀಠೋಪಕರಣ, ಶೌಚಾಲಯ, ಶುದ್ಧ ಕುಡಿಯುವ ನೀರು, ಪರೀಕ್ಷಾ ಕೊಠಡಿಯಲ್ಲಿ ಗಾಳಿ–ಬೆಳಕಿನ ವ್ಯವಸ್ಥೆ, ವಿಶೇಷ ಅಗತ್ಯತೆವುಳ್ಳ ಮಕ್ಕಳಿಗೆ ಸೌಲಭ್ಯ ಹೀಗೆ ಹಲವು ಮೂಲ ಸೌಕರ್ಯ ಒದಗಿಸಲಾಗಿದೆ ಎಂದು ಎಸ್ಸೆಸ್ಸೆಲ್ಸಿ ಪರೀಕ್ಷಾ ನೋಡಲ್ ಅಧಿಕಾರಿ ಬಿಂದು ಮಾಹಿತಿ ನೀಡಿದರು.

ಬಿಜೆಪಿ ಮಹಾಶಕ್ತಿ ಕೇಂದ್ರಕ್ಕೆ ಅಧ್ಯಕ್ಷ, ಉಪಾಧ್ಯಕ್ಷ ಆಯ್ಕೆ

ನಾಪೋಕ್ಲು, ಮಾ.17– ಭಾರತಿಯ ಜನತಾ ಪಾರ್ಟಿ ಮಹಾಶಕ್ತಿ ಕೇಂದ್ರಕ್ಕೆ ಅಧ್ಯಕ್ಷರಾಗಿ ಬಿದ್ದಂಡ ರಾಜೇಶ್ ಅಚ್ಚಯ್ಯ ಉಪಾಧ್ಯಕ್ಷರಾಗಿ ಪಾಡಿಯಂಡ ಕಟ್ಟಿ ಕುಶಾಲಪ್ಪರನ್ನು ಆಯ್ಕೆ ಮಾಡಲಾಗಿದೆ.

ಭಾರತೀಯ ಜನತಾ ಪಾರ್ಟಿ ಚೆಯ್ಯಾಂಡಾಣೆ, ಕೊಣಂಜಗೇರಿ, ಹಾಗೂ ಕಕ್ಕಬ್ಬೆ ಶಕ್ತಿ ಕೇಂದ್ರಕ್ಕೆ ಮಹಾಶಕ್ತಿ ಅಧ್ಯಕ್ಷರಾಗಿ ನರಿ ಯಂದಡ ಗ್ರಾ.ಪಂ. ಮಾಜಿ ಅಧ್ಯಕ್ಷ ಬಿದ್ದಂಡ ರಾಜೇಶ್ ಅಚ್ಚಯ್ಯ, ಉಪಾಧ್ಯಕ್ಷರಾಗಿ ಕೊಣಂಜಗೇರಿ ಗ್ರಾಪಂ ನಿಕಟಪೂರ್ವ ಅಧ್ಯಕ್ಷ ಪಾಡಿಯಂಡ ಕಟ್ಟಿ ಕುಶಾಲಪ್ಪರವರು, ಮತ್ತು ಮಹಿಳಾ ಸದಸ್ಯರಾಗಿ ಪರದಂಡ ಪ್ರಮೀಳಾ, ಒಬಿಸಿ ವರ್ಗದಿಂದ ಬಿ. ಜನಾರ್ಧನ ಕೆಎಸ್‌ಟಿ ವರ್ಗದಿಂದ ಹೆಚ್.ಯು.ನಾಣಯ್ಯ ಇವರುಗಳು ಸರ್ವಾನುಮತದಿಂದ ಆಯ್ಕೆಯಾಗಿರುತ್ತಾರೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಅಡುಗೆ ಅನಿಲ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ


ಅಡುಗೆ ಅನಿಲ ಬೆಲೆ ಏರಿಕೆ ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟಿಸಿದರು.

ಕುಶಾಲನಗರ, ಮಾ.17–ಅಡುಗೆ ಅನಿಲ ಬೆಲೆ ಏರಿಕೆ ಹಾಗೂ ವಿತರಣೆಯಲ್ಲಿ ಆಗುತ್ತಿರುವ ಸಮಸ್ಯೆ ನಿಭಾಯಿಸುವಲ್ಲಿ ವಿಫಲವಾಗಿರುವ ಕೇಂದ್ರದ ಧೋರಣೆ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಮಂಗಳವಾರ ಪಟ್ಟಣದಲ್ಲಿ ಪ್ರತಿಭಟಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್ ನೇತೃತ್ವದಲ್ಲಿ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಬ್ಯಾನರ್ ಹಿಡಿದು, ಸಿಲಿಂಡರ್ ಚಿತ್ರ ಹಿಡಿದು ಕಾಂಗ್ರೆಸ್ ಕಚೇರಿಯಿಂದ ಐಬಿ ವೃತ್ತದ ಮೂಲಕ ಐಎಂ ರಸ್ತೆಯಲ್ಲಿ ಸಾಗಿದ ಪ್ರತಿಭಟನಾಕಾರರು ಕಾರ್ಯಪ್ಪ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ಮೋದಿ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿ, ಸರ್ಕಲ್‌ನಲ್ಲಿ ಸೌದೆಯಿಂದ ಅಡುಗೆ ಮಾಡುವ ಮೂಲಕ ಅಣಕು ಪ್ರದರ್ಶನ ನೀಡಿ ಅಸಮಾಧಾನ ವ್ಯಕ್ತಪಡಿಸಿದರು.

ವಿ.ಪಿ.ಶಶಿಧರ್ ಮಾತನಾಡಿ, ಯುದ್ಧದ ಪರಿಣಾಮ ನಿತ್ಯ ಬಳಕೆಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಿಸುವಲ್ಲಿ ವಿಫಲವಾಗಿದೆ. ಇದರಿಂದ ದೇಶದಲ್ಲಿ ಮಧ್ಯಮ ವರ್ಗ ಜೀವಿಗೆ ಜೀವಿಸುವ ಸ್ಥಿತಿ ನಿರ್ಮಾಣವಾಗಿದೆ. ಅಡುಗೆ ಅನಿಲದ ಬೆಲೆಯು ಹೆಚ್ಚಿದ ದುಡ್ಡು ಹಣ ನೀಡಿದರೂ ಸಿಗದ ಪರಿಸ್ಥಿತಿಯು ಎದುರಾಗಿದೆ ಎಂದರು.

ಅತ್ತು ಸಹಕಾರ ಸಮಿತಿ ಅಧ್ಯಕ್ಷ ಗೋವಿಂದಪ್ಪ, ಮುಖಂಡರಾದ ಕೃಷ್ಣೇಗೌಡ, ರಮೇಶ್, ವಿ.ಎಸ್.ಆನಂದ ಕುಮಾರ್, ಅಬ್ದುಲ್ ರಜಾಕ್, ಟಿ.ಕೆ.ಪಾಂಡುರಂಗ, ಧರಣೇಂದ್ರಕುಮಾರ್, ಎಸ್.ಎಸ್. ಶ್ರೀನಿವಾಸ್, ರಫೀಕ್, ಅಜೀಜ್, ಟಿ.ಬಿ.ಜಗದೀಶ್, ಮಲ್ಲಿಕಾರ್ಜುನ, ಶಶಿಧರಯ್ಯ, ದಾಮೋದರ್, ಜಗದೀಶ್, ನಂಜುಂಡಸ್ವಾಮಿ, ಸುನೀತಾ, ಪದ್ಮ ಸರೋಜ, ಜಯಲಕ್ಷ್ಮಮ್ಮ, ಗೀತಾ, ಮತ್ತಿತರರು ಪಾಲ್ಗೊಂಡಿದ್ದರು.

ವೃದ್ಧರ ಮನೆಯಲ್ಲಿ ಕಳವು ಮಾಡಿದ್ದ ಆರೋಪಿ ಬಂಧನ: 5 ಲಕ್ಷ ನಗದು ಸೇರಿ ಚಿನ್ನಾಭರಣ ವಶ


ಬಸಪ್ಪ

ಮಡಿಕೇರಿ, ಮಾ.17– ವಯೋವೃದ್ಧರೊಬ್ಬರ ಮನೆಯಲ್ಲಿ ನರ್ಸಿಂಗ್ ಕೇರ್ ಟೇಕರ್ ಕೆಲಸಕ್ಕೆಂದು ಸೇರಿ ಚಿನ್ನಾಭರಣ ನಗದು ಕಳ್ಳತನ ಮಾಡಿದ್ದ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ.

ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿ ತಾಲೂಕಿನ ಮಣ್ಣೂರು ಗ್ರಾಮದ ಭದ್ರಪ್ಪ ಬಸಪ್ಪ ಹಡಪದ (27) ಬಂಧಿತ ಆರೋಪಿ. ಈತನ ಬಳಿಯಿಂದ ರೂ.5,9 ಲಕ್ಷ ನಗದು, 137 ಗ್ರಾಂ ಚಿನ್ನಾಭಾರಣಗಳು ಹಾಗೂ ಮೊಬೈಲ್ ಫೋನ್‌ನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಫೀ. ಮಾ.ಕೆ.ಎಂ.ಕಾರ್ಯಪ್ಪ ಕಾಲೇಜು ಹಿಂಭಾಗದ ಬಡಾವಣೆಯ ನಿವಾಸಿ ಪಾರ್ಥಸಾರಥಿ ಎಂಬುವರ ಅಣ್ಣ ವಯೋವೃದ್ಧರಾಗಿದ್ದು, ಇವರನ್ನು ನೋಡಿಕೊಳ್ಳುವ ಸಲುವಾಗಿ ಹೋಂ ನರ್ಸಿಂಗ್ ಕೆಲಸಕ್ಕಾಗಿ ಕೊಪ್ಪಳ ಜಿಲ್ಲೆ ಮೂಲದವನೆಂದು ಹೇಳಿಕೊಂಡ ವ್ಯಕ್ತಿಯೊಬ್ಬ ನೇಮಕಗೊಂಡಿದ್ದ. ಈತ ಫೆ28 ರಂದು ಮನೆಯಲ್ಲಿಟ್ಟಿದ್ದ ಅಂದಾಜು 80 ಗ್ರಾಂ ತೂಕದ ಚಿನ್ನಾ ಭರಣಗಳನ್ನು ಹಾಗೂ ರೂ.5.50 ಲಕ್ಷ ರೂ. ನಗದನ್ನು ಕಳವು ಮಾಡಿದ್ದಾನೆ ಎಂದು ಆರೋಪಿಸಿ ಪಾರ್ಥಸಾರಥಿ ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ ಪತ್ತೆಗಾಗಿ ವಿಶೇಷ ತನಿಖಾ ತಂಡವನ್ನು ರಚಿಸಿ ಮಾಹಿತಿ ಸಂಗ್ರಹಿಸಿದಾಗ ಆರೋಪಿ ಭದ್ರಪ್ಪ ಬಸಪ್ಪ ಹಡಪದ ಎಂದು ತಿಳಿದು ಬಂದಿತ್ತು ಈತ ಮಹಾಂತೇಶ ಪೂಜಾರ ಎಂಬುವ ಆಧಾರ್ ಕಾರ್ಡ್ ಪ್ರತಿಯನ್ನು ಬಳಸಿ ಹೋಂ ನರ್ಸಿಂಗ್ ಕೆಲಸಕ್ಕೆ ಸೇರಿರುವುದು ಹಾಗೂ ದಾವಣಗೆರೆ ಜಿಲ್ಲೆಯ ಕೆ.ಟಿ.ಜೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳವು ಪ್ರಕರಣದಲ್ಲಿ ಭಾಗಿಯಾಗಿರುವುದು ಪ್ರಾಥಮಿಕ ತನಿಖೆಯಲ್ಲಿ ಕಂಡು ಬಂದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಡಿವೈಎಸ್‌ಪಿ ಸೂರಜ್ ಪಿ.ಎ, ಮಡಿಕೇರಿ ನಗರ ವೃತ್ತದ ಸಿಪಿಐ ರಾಜು ಪಿ.ಕೆ, ಬೆರಳು ಮುದ್ರೆ ಘಟಕದ ಪಿಐ ರಾಮಕೃಷ್ಣ, ಮಡಿಕೇರಿ ನಗರ ಪೊಲೀಸ್ ಠಾಣೆಯ ಪಿಎಸ್‌ಐ ಅನ್ನಪೂರ್ಣ ಎಸ್.ಎಸ್, ಎಎಸ್‌ಐ ರಾಮಪ್ಪ ಸಿಬ್ಬಂದಿಗಳಾದ ಪ್ರಭಾಕರ್, ಗಿರೀಶ್, ಕಿರಣ್, ಕೃಷ್ಣಮೂರ್ತಿ, ಸುಧೀರ್, ಮುನೀರ್, ರಂಜಿತ್, ಪ್ರದೀಪ್, ತಾಂತ್ರಿಕ ವಿಭಾಗದ ಸಿಬ್ಬಂದಿಗಳಾದ ರಾಜೇಶ್, ಶರತ್ ರೈ, ಫೊರೆನ್ಸಿಕ್ ವಿಭಾಗದ ಜಯಕುಮಾರ್, ಸಂತೋಷ, ಡಿಸಿಆರ್‌ಬಿ ವಿಭಾಗದ ಪ್ರವೀಣ್ ಹಾಗೂ ನಿರಂಜನ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.


ಮಾ 24, ಪುರಸಭೆಯ ಐದು ಮಳಿಗೆ ಮರುಹರಾಜು

ವಿರಾಜಪೇಟೆ, ಮಾ.17–ಪುರಸಭೆಯ ವಾರ್ಷಿಕ ಹರಾಜಿನಲ್ಲಿ ನಿರೀಕ್ಷಿತ ಆದಾಯ ಬಾರದ ಕಾರಣ ಹಸಿ ಮೀನಿನ 4 ಮಳಿಗೆ, ಮತ್ತು ಕೋಳಿಯ ಮೂರು ಮಳಿಗೆ, ಹಂದಿ ಮಾಂಸ ಮಳಿಗೆ ಹರಾಜನ್ನು ಮಾ.24 ರ ಬೆಳಗ್ಗೆ 11 ಗಂಟೆಗೆ ಮತ್ತೆ ಹರಾಜು ನಡೆಸಲಾಗುತ್ತಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಪಟ್ಟಚರವಂಡ ನಾಚಪ್ಪ ತಿಳಿಸಿದ್ದಾರೆ.

ಇಂದಿನ ಮರು ಹರಾಜಿನಲ್ಲಿ ಮೂರು ಕುರಿ ಮಾಂಸ ಮಳಿಗೆ ಹರಾಜಾಗಿದ್ದು 1.8ಲಕ್ಷ, 24000 ರೂ, 93,500 ರೂ ಆದಾಯ ಬಂದಿದ್ದು ಕಳೆದ ಸಾಲಿಗಿಂತ ಕಡಿಮೆಯಾ ಗಿದೆ. ಇನ್ನು ಎರಡು ಮಳಿಗೆ ಬಾಕಿ ಉಳಿದಿದೆ, ಹಂದಿ ಮಾಂಸದ ಮಳಿಗೆ ಕಡಿಮೆ ಆದಾಯ ಬಂದ ಕಾರಣ ಹರಾಜು ಮುಂದೂಡಲಾಗಿದೆ. ಹಸಿ ಮೀನಿನ ನಾಲ್ಕು ಮಳಿಗೆ, ಮೂರು ಕೋಳಿಗಳ ಮಳಿಗೆಯನ್ನು ಮತ್ತೆ ಮಾ, 24 ರಂದು ಮರುಹರಾಜು ನಡೆಸಲಾಗುತ್ತದೆ ಎಂದರು.

ಪಾದಚಾರಿ ಮೇಲೆ ಕಾರು ಹರಿದು ತಾಯಿ ಮಗಳಿಗೆ ಗಾಯ


ಪಿ.ಎಮ್ ಲೀಲಾ


ಮೋಕ್ಷಿತ

ನಾಪೋಕ್ಲು, ಮಾ.17 (ದುಗ್ಗಳ)– ರಸ್ತೆ ಬದಿಯಲ್ಲಿ ಸಾಗುತ್ತಿದ್ದವರ ಮೇಲೆ ಕಾರು ಹರಿದ ಪರಿಣಾಮ ತಾಯಿ ಮಗಳು ಗಂಭೀರವಾಗಿ ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ಬೇತು ಗ್ರಾಮದಲ್ಲಿ ಮಂಗಳವಾರ ಜರುಗಿದೆ.

ಪಾಲೂರು ಗ್ರಾಮದ ನಿವಾಸಿಗಳಾದ ಪಿಎಮ್ ಲೀಲಾ ಹಾಗೂ ಮಗಳು ಮೋಕ್ಷಿತ ಎಂಬವರು ಸಂಘದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಾಗುತ್ತಿದ್ದ ಸಂದರ್ಭ ಈ ಘಟನೆ ಜರುಗಿದೆ. ವಿರಾಜಪೇಟೆಯಿಂದ ನಾಪೋಕ್ಲುವಿಗೆ ತೆರಳುತ್ತಿದ್ದ ಎಮ್ಮೆಮಾಡು ನಿವಾಸಿ, ಜಂಶೀರ್ ಎಂಬುವರು ಚಲಾಯಿಸುತ್ತಿದ್ದ ಕಾರು ಹರಿದ ಪರಿಣಾಮ ತಾಯಿ ಮಗಳು ರಸ್ತೆಗೆಸೆಯಲ್ಪಟ್ಟಿದ್ದಾರೆ. ಗಾಯಗೊಂಡವರಿಗೆ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿಗೆ ಕಳಿಸಿಕೊಡಲಾಯಿತು.

ಘಟನಾ ಸ್ಥಳಕ್ಕೆ ಪೊಲೀಸರು ತೆರಳಿದ್ದು ಕಾರನ್ನು ವಶ ಪಡಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಆಕ್ರೋಶ: ಗಾಯಾಳುಗಳನ್ನು ಮಡಿಕೇರಿಗೆ ಕರೆದೊಯ್ಯಲು ತುರ್ತು ಚಿಕಿತ್ಸಾ ವಾಹನದ ಸೌಲಭ್ಯ ದೊರೆಯದೇ ಗಾಯಾಳುಗಳು ಪರದಾಡಬೇಕಾದ ಪ್ರಸಂಗದ ಬಗ್ಗೆ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಂಜಾಬ್ ರಾಷ್ಟ್ರ ಮಟ್ಟದ ಕ್ರೀಡಾಕೂಟ

ಕೊಡಗಿಗೆ ಪದಕಗಳ ಸುರಿಮಳೆ



ಮಡಿಕೇರಿ, ಮಾ.17–ಪಂಜಾಬ್ ಬಟಿಂಡದ ಗುರುಕಾಶಿ ವಿಶ್ವವಿದ್ಯಾಲಯ ಕ್ರೀಡಾಂಗಣದಲ್ಲಿ ಇದೇ ಮಾ.14 ರಿಂದ 16ವರೆಗೆ ನಡೆದ 45ನೇ ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ಜಿಲ್ಲೆಯ ಕ್ರೀಡಾಪಟುಗಳು ಉತ್ತಮ ಸಾಧನೆ ಮಾಡಿದ್ದಾರೆ.

ಬಿಟ್ಟಂಗಾಲ ನಾಂಗಾಲ ಮೂಲದ ಚೇಮಿರ ಸೀತಮ್ಮ (ಪ್ರೇಮ) ಇವರು ಭಾರದ ಗುಂಡು ಎಸೆತದಲ್ಲಿ ಪ್ರಥಮ, ತಟ್ಟೆ ಎಸೆತದಲ್ಲಿ ದ್ವಿತೀಯ, ಸರಪಳಿ ಗುಂಡು ಎಸೆತದಲ್ಲಿ ತೃತೀಯ ಬಹುಮಾನ ಪಡೆದುಕೊಂಡರೆ ಮೋರಿರ ಶಾಂತಿ ಅವರು ಭಾರದ ಗುಂಡು ಎಸೆತದಲ್ಲಿ ತೃತೀಯ ಸ್ಥಾನ ಪಡೆದಿರುತ್ತಾರೆ. ಅರಮಣಮಾಡ ಮಮತಾ ಭಾರದ ಗುಂಡು ಎಸೆತ ಪ್ರಥಮ, ಭರ್ಜಿ ಎಸೆತ ಪ್ರಥಮ, ಸರಪಳಿ ಗುಂಡು ಎಸೆತ ತೃತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಐಮುಡಿಯಂಡ ಶೈಲಾ 200ಮೀ ಅಡೆ ತಡೆ ಓಟದಲ್ಲಿ ಪ್ರಥಮ ಸ್ಥಾನ, 100ಮೀ ಅಡೆ ತಡೆ ಓಟದಲ್ಲಿ ಪ್ರಥಮ ಹಾಗೂ 1500 ಮೀಟರ್ ಓಟದಲ್ಲಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಆಶಾ ಅನಂತ್ ಕುಮಾರ್ ಅವರು ಭಾರದ ಗುಂಡು ಎಸೆತ ಪ್ರಥಮ, ಚಕ್ರ ಎಸೆತ ದ್ವಿತೀಯ, ಸರಪಳಿ ಗುಂಡು ಎಸೆತ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ. ಅಚ್ಚಪಂಡ ಟೀನಾ ಸೋಮಣ್ಣ ಅವರು ಉದ್ದ ಜಿಗಿತದಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ. ಪಟ್ಟಚೆರುವಂಡ ಗಗನ್ ಮೇದಪ್ಪ ಅವರು ಉದ್ದ ಜಿಗಿತದಲ್ಲಿ ಪ್ರಥಮ, 200ಮೀ ಓಟದಲ್ಲಿ ದ್ವಿತೀಯ, 100ಮೀ ಅಡೆ ತಡೆ ಓಟದಲ್ಲಿ ದ್ವಿತೀಯ ಸ್ಥಾನವನ್ನು ಪಡೆದುಕೊಳ್ಳುವ ಮೂಲಕ 45ನೇ ರಾಷ್ಟ್ರ ಮಟ್ಟದಲ್ಲಿ ಕ್ರೀಡಾಕೂಟದಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ.

ಕೋಟ್ಪಾ ಕಾಯ್ದೆ ಉಲ್ಲಂಘನೆ; 1800 ರೂ ದಂಡ

ಮಡಿಕೇರಿ, ಮಾ.17–ಅಕ್ರಮವಾಗಿ ತಂಬಾಕು ಉತ್ಪನ್ನಗಳನ್ನು ಮಾರುತ್ತಿದ್ದ ಆರೋಪದ ಮೇರೆಗೆ ಒಟ್ಟು 10 ಪ್ರಕರಣಗಳಲ್ಲಿ ತಲಾ 1800 ರೂ ದಂಡ ವಿಧಿಸಿದ್ದಾರೆ.

ಬಿಳಿಗೇರಿ ಮತ್ತು ಕಗ್ಗೋಡ್ಲು ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳ ಮಾರಾಟ ಹಾಗೂ ಕೋಟ್ಪಾ ಕಾಯ್ದೆ ಉಲ್ಲಂಘನೆ ಕುರಿತು ಅಂಗಡಿ, ಹೋಟೆಲ್‌ಗಳಿಗೆ ಅನಿರೀಕ್ಷಿತ ಭೇಟಿ ನೀಡಿದಾಗ ಮಾರಾಟವಾಗುತ್ತಿರುವುದನ್ನು ಗಮನಿಸಿ ದಂಡವನ್ನು ವಿಧಿಸಿ ನಿಯಮಗಳ ಕುರಿತು ಆರೋಗ್ಯ ಶಿಕ್ಷಣ ನೀಡಲಾಯಿತು.

ಅನಿರೀಕ್ಷಿತ ಭೇಟಿಯಲ್ಲಿ ತಾಲೂಕು ಆರೋಗ್ಯಾಧಿಕಾರಿ ಕಚೇರಿಯ ಆರೋಗ್ಯ ಶಿಕ್ಷಣಾಧಿಕಾರಿ ಪಾಲಾಕ್ಷ ಮತ್ತು ಆರೋಗ್ಯ ನಿರೀಕ್ಷಣಾಧಿಕಾರಿ ಜಿ.ವಿ.ಶ್ರೀನಾಥ್ ಹಾಗೂ ಜಿಲ್ಲಾ ತಂಬಾಕು ಕೋಶದ ಮಂಜುನಾಥ್ ಹಾಗೂ ಪೊಲೀಸ್ ಇಲಾಖೆಯವರು ಭಾಗವಹಿಸಿದ್ದರು.

ತಲಕಾವೇರಿ: ದೇವಾಲಯಕ್ಕೆ ಪ್ರವೇಶ ನಿಷಿದ್ಧ

ಮಡಿಕೇರಿ ಮಾ.17–ಸ್ವಚ್ಛತಾ ಕಾರ್ಯದ ಪ್ರಯುಕ್ತ ಕಾವೇರಿ ನದಿ ಉಗಮಸ್ಥಾನ ಪುಣ್ಯಕ್ಷೇತ್ರ ಶ್ರೀ ತಲ ಕಾವೇರಿ ದೇವಾಲಯದಲ್ಲಿ ಮಾ.18ರಂದು ಮಧ್ಯಾಹ್ನ 2 ಗಂಟೆಯ ನಂತರ ಶ್ರೀ ತಲಕಾವೇರಿ ದೇವಾಲಯಕ್ಕೆ ಪ್ರವೇಶ ಇರುವುದಿಲ್ಲ ಎಂದು ದೇವಾಲಯದ ಕಾರ್ಯ ನಿರ್ವಾಹಕ ಅಧಿಕಾರಿ ಎನ್.ಜಿ.ಚಂದ್ರಶೇಖರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ವಿದ್ಯುತ್ ಸ್ಪರ್ಶದಿಂದ ಹೆಣ್ಣು ಹುಲಿ ಮರಿ ಸಾವು

ಗುಂಡ್ಲುಪೇಟೆ ಬಳಿಯ ಪಡಗೂರಲ್ಲಿ ಘಟನೆ


ಪಡಗೂರಲ್ಲಿ ವಿದ್ಯುತ್ ಸ್ಪರ್ಶದಿಂದ ಸಾವಿಗೀಡಾದ ಹುಲಿ ಕಳೇಬರವನ್ನು ಪ್ರಭಾಕರನ್ ವೀಕ್ಷಿಸಿದರು.

ಗುಂಡ್ಲುಪೇಟೆ, ಮಾ.17 (ಸೋಮ್.ಜಿ)– ಜಮೀನಿನ ಬೇಲಿಗೆ ಅಕ್ರಮವಾಗಿ ಅಳವಡಿಸಿದ್ದ ವಿದ್ಯುತ್ ಸ್ಪರ್ಶಗೊಂಡ ಪರಿಣಾಮ ಒಂದೂವರೆ ವರ್ಷದ ಹೆಣ್ಣು ಹುಲಿ ಮರಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಬಂಡೀಪುರ ಅಭಯಾರಣ್ಯದ ಬಫರ್ ಜೋನ್ ವಲಯ ವ್ಯಾಪ್ತಿಯ ಪಡಗೂರು ಗ್ರಾಮದಲ್ಲಿ ಸೋಮವಾರ ರಾತ್ರಿ ನಡೆದಿದೆ.

ಗ್ರಾಮದ ಮದ್ದಾನೇಶ್ವರ ಅಡವಿ ಮಠದ ಸಮೀಪವಿರುವ ರವಿಚಂದ್ರ ಅವರ ಜಮೀನಿನಲ್ಲೇ ಹುಲಿ ಸಾವನ್ನಪ್ಪಿರುವುದು. ರವಿಚಂದ್ರ ಅವರು ತಮ್ಮ ಜಮೀನನ್ನು ಕೇರಳ ಮೂಲದ ಪರಮೇಶ್ವರಪ್ಪ ಎಂಬುವರಿಗೆ ಗುತ್ತಿಗೆಗೆ ನೀಡಿದ್ದರು ಎನ್ನಲಾಗಿದೆ. ಜಮೀನಿನಲ್ಲಿ ಬಾಳೆ ಬೆಳೆದಿದ್ದ ಪರಮೇಶ್ವರಪ್ಪನವರು ಬೆಳೆ ರಕ್ಷಣೆಗಾಗಿ ಬೇಲಿಗೆ ಅಕ್ರಮವಾಗಿ ವಿದ್ಯುತ್ ತಂತಿ ಅಳವಡಿಸಿದ್ದರು. ಆದರೆ ಹುಲಿ ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪಿದೆ ಎನ್ನಲಾಗಿದೆ.

ಈ ಭಾಗದ ಸುತ್ತಮುತ್ತಲ ಗ್ರಾಮಗಳಲ್ಲಿ ವನ್ಯ ಜೀವಿಗಳಿಂದ ರೈತರ ಸಾಕು ಪ್ರಾಣಿಗಳು ಸಾವಿಗೀಡಾಗುತ್ತಿದ್ದ ಹಿನ್ನೆಲೆಯಲ್ಲಿ ಅರಣ್ಯಾಧಿಕಾರಿಗಳು ಹುಲಿ ಸೆರೆಗಾಗಿ ಅಲ್ಲಲ್ಲಿ ಬೋನು ಇರಿಸಿದ್ದರೂ, ಯಾವುದೇ ಉಪಯೋಗವಾಗಿರಲಿಲ್ಲ. ಅಲ್ಲದೇ ಸೋಮವಾರ ಸಮೀಪದ ಕಲ್ಲಹಳ್ಳಿ ಗ್ರಾಮದಲ್ಲಿ 3 ಮೇಕೆಗಳನ್ನು ಹುಲಿ ಬಲಿ ಪಡೆದಿತ್ತು. ಈ ಹಿನ್ನೆಲೆಯಲ್ಲಿ ಜಾನುವಾರುಗಳನ್ನು ಕೊಲ್ಲುತ್ತಿದ್ದ ಹುಲಿ ಪತ್ತೆಗೆ ಅರಣ್ಯ ಇಲಾಖೆಯ ಬಫರ್ ವಲಯದ ಅಧಿಕಾರಿಗಳು ಸೋಮವಾರ ರಾತ್ರಿ ಥರ್ಮಲ್ ಡ್ರೋಣ್ ಹಾರಿಸುತ್ತಿದ್ದಾಗ ಘಟನೆ ಬೆಳಕಿಗೆ ಬಂದಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬಂಡೀಪುರ ಹುಲಿಯೋಜನೆ ನಿರ್ದೇಶಕ ಎಸ್.ಪ್ರಭಾಕರನ್ ಪರಿಶೀಲಿಸಿದರು. ಅಲ್ಲದೇ ಸಾವನ್ನಪ್ಪಿದ ಹುಲಿ ನೋಡಲು ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸಿದ್ದರಿಂದ ಜನರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಡುವಂತಾಗಿತ್ತು.

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜ್, ಡಿವೈಎಸ್‌ಪಿ ಸ್ನೇಹಾರಾಜ್, ಬೇಗೂರು ಸಿಪಿಐ ಮೋಹಿತ್ ಸಹದೇವ್, ತೆರಕಣಾಂಬಿ ಠಾಣೆ ಎಸ್‌ಐ ಕೆ.ಎಂ.ಮಹೇಶ್ ಭೇಟಿ ನೀಡಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ಕೈಗೊಂಡಿದ್ದರು. ಹುಲಿ ಕಳೇಬರವನ್ನು ಬಂಡೀಪುರಕ್ಕೆ ಕೊಂಡೊಯ್ದು ಅರಣ್ಯ ಇಲಾಖೆ ಪಶುವೈದ್ಯರಾದ ಡಾ.ವಾಸಿಂ ಮಿರ್ಜಾ ಮತ್ತು ಡಾ. ಆದರ್ಶ್ ಮರಣೋತ್ತರ ಪರೀಕ್ಷೆ ನಡೆಸಿದರು. ನಂತರ ಅಲ್ಲಿಯೇ ಹುಲಿಯನ್ನು ಸುಟ್ಟು ಹಾಕಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಕ್ರೋಶ: ಈ ವೇಳೆ ಘಟನಾ ಸ್ಥಳದಲ್ಲಿದ್ದ ರೈತ ಸಂಘಟನೆಗಳ ಮುಖಂಡರು ಹುಲಿ ಸಾವಿಗೆ ಅರಣ್ಯಾಧಿಕಾರಿಗಳೇ ಕಾರಣ. ಈ ಭಾಗದಲ್ಲಿ ಹುಲಿ ಚಿರತೆಗಳ ದಾಳಿಗೆ ನಿತ್ಯ ಜಾನುವಾರುಗಳು ಸಾಯುತ್ತಿದ್ದರೂ ಅವುಗಳನ್ನು ಸೆರೆ ಹಿಡಿಯುವಲ್ಲಿ ವಿಫಲರಾಗಿದ್ದಾರೆ. ಇದರಿಂದ ಈ ಭಾಗದ ಜನರು ತಮ್ಮ ಹಾಗೂ ಜಾನುವಾರು ಮತ್ತು ಬೆಳೆಗಳ ರಕ್ಷಣೆಗೆ ಮುಂದಾಗಿದ್ದಾರೆ. ಹೀಗಾಗಿ ಅರಣ್ಯ ಇಲಾಖೆಯವರು ಯಾವುದೇ ಕಾರಣಕ್ಕೂ ರೈತರ ಮೇಲೆ ಪ್ರಕರಣ ದಾಖಲಿಸಬಾರದು ಎಂದು ಒತ್ತಾಯಿಸಿದರು.

ಚಾ.ನಗರದಲ್ಲಿ ಗಣ್ಯರಿಗೆ ನುಡಿ ನಮನ, ಪರಮಪೂಜ್ಯರ ಸಂಸ್ಮರಣೋತ್ಸವ

ಹಿರಿಯರ ಮಾರ್ಗದರ್ಶನದಂತೆ ಸಮಾಜ ಮುನ್ನಡೆಯಬೇಕಿದೆ: ಸುತ್ತೂರು ಶ್ರೀಗಳು



ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿದರು.

ಚಾಮರಾಜನಗರ, ಮಾ.17– ಉತ್ತಮ ಸಮಾಜ ನಿರ್ಮಿಸಲು ನಮ್ಮ ಹಿರಿಯರು ಮಾರ್ಗದರ್ಶನ ಮಾಡಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಸಮಾಜ ಮುನ್ನಡೆಸಿದಾಗ ಅದೇ ನಾವು ನಮ್ಮ ಗಣ್ಯರಿಗೆ ಸಲ್ಲಿಸುವ ನುಡಿ ನಮನವಾಗುತ್ತದೆ ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ನಗರದ ಶಿವಕುಮಾರಸ್ವಾಮಿ ಭವನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದಿಂದ ಹಮ್ಮಿಕೊಂಡಿದ್ದ ಸಮಾಜದ ಮುಖಂಡರಾದ ಶಾಮನೂರು ಶಿವಶಂಕರಪ್ಪ ಭೀಮಣ್ಣ ಖಂಡ್ರೆ, ತಿಪ್ಪಣ್ಣನವರಿಗೆ ನುಡಿ ನಮನ ಹಾಗೂ ಜಿಲ್ಲೆಯ ಲಿಂಗೈಕ್ಯ ಪರಮಪೂಜ್ಯರ ಸಂಸ್ಮರಣೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಾಮನೂರು ಶಿವಶಂಕರಪ್ಪ, ಭೀಮಣ್ಣ ಖಂಡ್ರೆ, ತಿಪ್ಪಣ್ಣನವರು ಮಹಾಸಭಾ ಸಂಘಟನೆ ಹಾಗೂ ಸಮಾಜದ ಕಾರ್ಯಗಳಿಗೆ ಅಪಾರ ಕೊಡುಗೆ ನೀಡಿದ್ದಾರೆ. ಸಮಾಜಕ್ಕೆ ತೊಂದರೆಯಾದಾಗ ಏಕ ಮನಸ್ಸಿನಿಂದ ಮುಂದೆ ನಿಂತು ಪ್ರತಿಭಟಿಸಿದ್ದಾರೆ. ಅದರಲ್ಲೂ ಭೀಮಣ್ಣ ಖಂಡ್ರೆಯವರಂತೂ ಆಡಳಿತ ಪಕ್ಷದ ಸದಸ್ಯರಾಗಿ ಸಮಾಜಕ್ಕೆ ಧಕ್ಕೆಯಾದಾಗ ಸರ್ಕಾರದ ವಿರುದ್ಧವೇ ಪ್ರತಿಭಟಿಸಿದ್ದಾರೆ. ಇದು ನಮ್ಮ ಯುವ ಪೀಳಿಗೆಗೆ ಸ್ಫೂರ್ತಿಯಾಗಬೇಕು ಎಂದರು.

ಮಲ್ಲನಮೂಲೆ ಮಠದ ಶ್ರೀಗಳು, ಸಾಲೂರು ಮಠದ ಗುರುಸ್ವಾಮಿಗಳು ಹಾಗೂ ಬಂಡಳ್ಳಿ ಮಠದ ಶ್ರೀಗಳು ಸಹ ಈ ಭಾಗದ ಭಕ್ತರ ಆಶೋತ್ತರಗಳಿಗೆ ಸ್ಪಂದಿಸಿ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಇವರ ಸಂಸ್ಮರಣೋತ್ಸವ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸಂತಸದ ಸಂಗತಿ ಎಂದರು.

> ಶಾಮನೂರು ಶಿವಶಂಕರಪ್ಪ, ಭೀಮಣ್ಣ ಖಂಡ್ರೆಯಂತಹವರು ನಮ್ಮಂತಹ ಯುವ ರಾಜಕಾರಣಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ಅವರ ಕೊಡುಗೆಗಳನ್ನು ಸ್ಮರಿಸುತ್ತಾ ಸಮಾಜವನ್ನು ಕಟ್ಟುವುದರ ಜೊತೆಗೆ ಸಮಾಜದ ಏಳಿಗೆಗೆ ಎಲ್ಲರೂ ಒಗ್ಗೂಡಬೇಕಾಗಿದೆ.– ಗಣೇಶ್ ಪ್ರಸಾದ್, ಶಾಸಕ.

ಈ ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಹರವೆ ಮಠದ ಸರ್ಪಭೂಷಣಸ್ವಾಮೀಜಿ, ಶಿರಮಳ್ಳಿ ಮಠದ ಶ್ರೀಗಳು ಮಾತನಾಡಿದರು. ಸಾಲೂರು ಮಠದ ಶ್ರೀಶಾಂತಮಲ್ಲಿ ಕಾರ್ಜುನ ಸ್ವಾಮೀಜಿ, ಸಿದ್ಧಮಲ್ಲೇಶ್ವರ ವಿರಕ್ತಮ ಠದ ಶ್ರೀಚನ್ನಬಸವ ಸ್ವಾಮೀಜಿ, ಮರಿಯಾಲ ಮಠದ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

ಮಹಾಸಭಾ ಜಿಲ್ಲಾಧ್ಯಕ್ಷ ನಂದೀಶ್, ಪದಾಧಿಕಾರಿಗಳಾದ ಉಮೇಶ್, ನಿರಂಜನ ಮೂರ್ತಿ, ರಾಜೇಂದ್ರ ಪ್ರಸಾದ್, ಶೇಖರ್, ಬಾಲಚಂದ್ರಮೂರ್ತಿ, ಮಹಿಳಾ ಘಟಕದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಮುಖಂಡರು ಸೇರಿದಂತೆ ಇತರರಿದ್ದರು.

ಟಾಟಾ ಏಸ್ ಪ್ಯಾಸೆಂಜರ್ ವಾಹನಕ್ಕೆ ಟಿಪ್ಪರ್ ಡಿಕ್ಕಿ

ಚಾಲಕ ಸೇರಿದಂತೆ 8 ಮಕ್ಕಳಿಗೆ ಗಾಯ


ಸಂಪೂರ್ಣ ನಜ್ಜು ಗುಜ್ಜಾದ ಟಾಟಾ ಏಸ್ ವಾಹನ

ಗುಂಡ್ಲುಪೇಟೆ, ಮಾ.17(ಸೋಮ್.ಜಿ)– ಶಾಲಾ ಮಕ್ಕಳು ತೆರಳುತ್ತಿದ್ದ ಟಾಟಾ ಏಸ್ ಪ್ಯಾಸೆಂಜರ್ ವಾಹನಕ್ಕೆ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಚಾಲಕ ಹಾಗೂ 8 ಮಕ್ಕಳು ಗಾಯಗೊಂಡಿರುವ ಘಟನೆ ಚಿಕ್ಕತುಪ್ಪೂರು ಗೇಟ್ ಬಳಿ ಮಂಗಳವಾರ ಸಂಜೆ ನಡೆದಿದೆ.


ತಾಲೂಕಿನ ಅಣ್ಣೂರು ಗ್ರಾಮದ ನಿವಾಸಿಯೂ ಆದ ಟಾಟಾ ಏಸ್ ಚಾಲಕ ರಂಜಿತ್(22), ಪಟ್ಟಣದ ಸೆಂಟ್ ಜಾನ್ಸ್ ಹಾಗೂ ನಿರ್ಮಲಾ ಕಾನ್ವೆಂಟ್ ವಿದ್ಯಾರ್ಥಿಗಳಾದ ಯಾನವಿ, ಜೈಶಿಕ, ಸಮಿತ್, ಅನ್ವಿತ್, ಇಶ, ತಸ್ಮಿತ್ ಸೇರಿದಂತೆ 8 ಮಕ್ಕಳು ಗಾಯಗೊಂಡವರು.

ವಿವರ: ಮಂಗಳವಾರ ಶಾಲೆ ಬಿಟ್ಟ ಬಳಿಕ ಮಕ್ಕಳನ್ನು ಅವರ ಮನೆಗೆ ಬಿಡಲು ಟಾಟಾ ಏಸ್ ಚಾಲಕ ರಂಜಿತ್ ತಾಲೂಕಿನ ಕಂದೇಗಾಲ, ಶಿಂಡನಪುರ, ಮೊಳ್ಳಯ್ಯನಹುಂಡಿ, ಕೊಡಸೋಗೆ ಗ್ರಾಮಗಳಿಗೆ ಕರೆದೊಯ್ಯುವ ಮಾರ್ಗಮಧ್ಯೆ ಚಿಕ್ಕತುಪ್ಪೂರು ಗೇಟ್ ಬಳಿ ಟಾಟಾ ಏಸ್(ಕೆಎ.10, 4431,)ಗೆ ಟಿಪ್ಪರ್(ಕೆಎ.51, ಎಜಿ.4006) ಡಿಕ್ಕಿ ಹೊಡೆದಿದೆ. ಈ ವೇಳೆ ಟಾಟಾ ಏಸ್ ವಾಹನ ಸಂಪೂರ್ಣ ನಜ್ಜು ಗುಜ್ಜಾಗಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಆದರೆ ಡಿಕ್ಕಿ ರಭಸಕ್ಕೆ ಚಾಲಕ ರಂಜಿತ್ ತೀವ್ರ ಗಾಯಗೊಂಡರೇ, 8 ಮಕ್ಕಳು ಗಾಯಗೊಂಡಿದ್ದರು. ಈ ವೇಳೆ ಸ್ಥಳದಲ್ಲಿದ್ದವರು ಆಂಬುಲೆನ್ಸ್‌ನಲ್ಲಿ ಚಾಲಕ ಸೇರಿದಂತೆ ಮಕ್ಕಳನ್ನು ಗುಂಡ್ಲುಪೇಟೆ ಸಾರ್ವಜನಿಕ ಆಸ್ಪತ್ರೆಗೆ ಕರೆತಂದು ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ರವಾನಿಸಿದರು.

ಘಟನೆ ವೇಳೆ ಸ್ಥಳದಲ್ಲಿದ್ದ ಸಾರ್ವಜನಿಕರು ಟಿಪ್ಪರ್ ಚಾಲಕ ವಾಸೀಂ ಅಕ್ರಂ ನನ್ನು ಹಿಡಿದು ಥಳಿಸಿ ಪೊಲೀಸರಿಗೆ ಒಪ್ಪಿಸಿದರು. ಚಾಲಕನನ್ನು ವಶಕ್ಕೆ ಪಡೆದ ಗುಂಡ್ಲುಪೇಟೆ ಪೊಲೀಸರು ವಿಚಾರಣೆಗೆ ಒಪ್ಪಿಸಿದ್ದಾರೆ. ವಿಷಯ ತಿಳಿದು ಸಿಪಿಐ ಜಯಕುಮಾರ್, ಎಸ್‌ಐ ನರೇಶ್ ಕುಮಾರ್ ಹಾಗೂ ಸಿಬ್ಬಂದಿ ಪರಿಶೀಲಿಸಿದರು. ಈ ಸಂಬಂಧ ಗುಂಡ್ಲುಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಂದೇಗಾಲ ಗ್ರಾಮ ಮಾರ್ಗದಲ್ಲಿ ಸಮರ್ಪಕವಾಗಿ ಸಾರಿಗೆ ಬಸ್ ಸೌಲಭ್ಯವಿಲ್ಲದ ಕಾರಣ ವಿದ್ಯಾರ್ಥಿಗಳು ನಿತ್ಯ ಟಾಟಾ ಏಸ್ ವಾಹನದಲ್ಲಿ ಶಾಲೆಗೆ ಬಂದು ಹೋಗುತ್ತಿದ್ದರು ಎಂದು ಪಾಲಕರು ತಿಳಿಸಿದ್ದಾರೆ.

ಮಾ.22, ಕೈವಾರ ಯೋಗಿ ನಾರೇಯಣರ ಕುರಿತು ವಿಚಾರ ಸಂಕಿರಣ


ಸುದ್ದಿಗೋಷ್ಠಿಯಲ್ಲಿ ಮೈಸೂರು ವಿವಿ ವಿಶ್ರಾಂತ ಪ್ರಾಧ್ಯಾಪಕ ಡಾ.ಎಸ್.ಶಿವರಾಜಪ್ಪ ಮಾತನಾಡಿದರು.

ಚಾಮರಾಜನಗರ, ಮಾ.17– ಚಾಮರಾಜನಗರ ವಿಶ್ವವಿದ್ಯಾನಿಲಯ, ಶ್ರೀಯೋಗಿ ನಾರೇಯಣ ಯತೀಂದ್ರರ ಪ್ರಚಾರ ಸಭಾ ವತಿಯಿಂದ ಮಾ.22ರಂದು ನಗರದಲ್ಲಿ ಕೈವಾರ ಸದ್ಗುರು ಯೋಗಿ ನಾರೇಯಣ ಯೋಗಿಗಳ ಪರಿಚಯ ಮತ್ತು ಆತ್ಮ ಬೋಧೆ ಕುರಿತು ವಿಚಾರ ಸಂಕಿರಣ ಹಾಗೂ ಯತೀಂದ್ರಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಮೈಸೂರು ವಿವಿ ವಿಶ್ರಾಂತ ಪ್ರಾಧ್ಯಾಪಕ ಡಾ.ಎಸ್.ಶಿವರಾಜಪ್ಪ ತಿಳಿಸಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ನಗರದ ವರನಟ ಡಾ.ರಾಜಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಸಮಾರಂಭ ನಡೆಯಲಿದ್ದು, ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಶ್ರೀ ಕ್ಷೇತ್ರ ಕೈವಾರ ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್ ಘನ ಉಪಸ್ಥಿತಿ ಇರಲಿದ್ದು, ಚಾ.ನಗರ ವಿವಿ ಕುಲಪತಿ ಡಾ.ಎಂ.ಆರ್. ಗಂಗಾಧರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ಬೆಂಗಳೂರಿನ ಎಂ.ಎಸ್.ರಾಮಯ್ಯ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಹಾಗೂ ಎಂಎಲ್‌ಸಿ ಡಾ.ಎಂ.ಆರ್.ಸೀತಾರಾಮ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕಬ್ಬಹಳ್ಳಿ ಶ್ರೀಮದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಎಂ.ಎನ್.ಕವಿತಾ ವಿಷಯ ಮಂಡನೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಶ್ರೀರೂಪ, ಎಸ್ಪಿ ಮುತ್ತುರಾಜು ಭಾಗವಹಿಸಲಿದ್ದಾರೆ ಎಂದರು.

ಬೆಂಗಳೂರಿನ ರೈಟ್ಸ್ ಜನರಲ್ ಮ್ಯಾನೇಜರ್ ಎಂ.ಜಿ.ಸುದೀಪ್, ಹೈಕೋರ್ಟ್ ವಕೀಲ ಬಿ.ಎಂ.ಅರುಣ್, ಮುಖ್ಯ ಇಂಜಿನಿಯರ್ ಕೆ.ಟಿ.ರವಿಕುಮಾರ್, ಹಿರಿಯ ಲೆಕ್ಕ ಪರಿಶೋಧಕ ಸುರೇಂದ್ರ ಹೆಗಡೆ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ. ಇದಕ್ಕೂ ಮುನ್ನ ಬೆಳಗ್ಗೆ 9.30 ರಿಂದ 10.30ರವರೆಗೆ ಶ್ರೀ ಯೋಗಿ ನಾರೇಯಣ ಯತೀಂದ್ರರ ಕೀರ್ತನೆಗಳು ಹಾಗೂ ಸಾಮೂಹಿಕ ನಾಮ ಸಂಕೀರ್ತನೆಯ ಕೀರ್ತನೆಗಳನ್ನು ವಾನರಾಶಿ ಬಾಲಕೃಷ್ಣ ಭಾಗವತರ್ ಹಾಡಲಿದ್ದಾರೆ. ಶ್ರೀಕ್ಷೇತ್ರ ಕೈವಾರ ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್ ಘನ ಉಪಸ್ಥಿತಿ ವಹಿಸಲಿದ್ದು ಡಾ.ಎಸ್.ಶಿವರಾಜಪ್ಪ ಪುಷ್ಪಾರ್ಚನೆ ಮಾಡಲಿದ್ದಾರೆ. ಸಮಾಜ ಸೇವಕ ಚಂದ್ರಶೇಖರ್, ನಿವೃತ್ತ ಇಂಜಿನಿಯರ್ ಎಂ.ನಾರಾಯಣ, ಹಿರಿಯ ಲೆಕ್ಕ ಪರಿಶೋಧಕ ಕೆ.ಎನ್.ಮೋಹನ್ ಕುಮಾರ್ ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಿ.ವಿ.ಶ್ರೀನಿವಾಸ ಶೆಟ್ಟಿ, ನಾಡದೇಶಶೆಟ್ಟರು ವೈ.ವಿ.ಲೋಕನಾಥ್, ದಾಸ ಬಣಜಿಗರ ಸಂಘದ ಅಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ಸತೀಶ್, ಕಾರ್ಯದರ್ಶಿ ಆರ್.ಸುಬ್ರಹ್ಮಣ್ಯ, ನಿರ್ದೇಶಕರಾದ ಪದ್ಮಪುರುಷೋತ್ತಮ, ಸಿ.ವಿ.ಶ್ರೀಧರ್ ಇದ್ದರು.

ಹಳೇ ಮೀಸಲಾತಿಯಡಿಯೇ ತ್ವರಿತ ನೇಮಕಾತಿಗೆ ಆಗ್ರಹಿಸಿ ಮಾ. 24ಕ್ಕೆ ಬೆಂಗಳೂರಲ್ಲಿ ಬೃಹತ್ ಸಮಾವೇಶ

● ಚಿತ್ರದುರ್ಗದ ಬೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ವಿವರಣೆ ● ಸಾಗರೋಪಾದಿಯಲ್ಲಿ ಸಮಾವೇಶಕ್ಕೆ ಆಗಮಿಸಲು ಸಲಹೆ

ಮೈಸೂರು,ಮಾ.17(ಎಂಟಿವೈ)– ಒಳಮೀಸಲಾತಿ ವಿರೋಧಿಸಿ, ಹಳೇ ಮೀಸಲಾತಿ ನಿಯಮದಂತೆ ತ್ವರಿತ ನೇಮಕಾತಿಗೆ ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಮಾ.24ರಂದು ಬೆಳಗ್ಗೆ 10ಕ್ಕೆ ಬೃಹತ್ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ಚಿತ್ರದುರ್ಗದ ಬೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ತಿಳಿಸಿದ್ದಾರೆ.

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಬಂಜಾರ, ಬೋವಿ, ಕೊರಮ, ಕೊರಚ, ಚರ್ಮಕಾರ, ಸೂಕ್ಷ್ಮ ಪರಿಶಿಷ್ಟ ಜಾತಿಗಳ ಹೋರಾಟ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಗಳಿಗೆ ಅವೈಜ್ಞಾನಿಕ ಒಳಮೀಸಲಾತಿ ಹಾಗೂ ರೋಸ್ಟರ್ ಪದ್ಧತಿ ಜಾರಿ ಮಾಡಿದ್ದು, ಇದು ಎಸ್‌ಸಿ ಒಳಮೀಸಲಾತಿ ವರ್ಗೀಕರಣದಲ್ಲಿ ಸಿ–ಪ್ರವರ್ಗದಲ್ಲಿರುವ ಬಂಜಾರ, ಭೋವಿ, ಕೊರಚ, ಕೊರಮ, ಆದಿಯಾ, ಅಗೇರ ಸೇರಿದಂತೆ 63 ಜಾತಿಗಳಿಗೆ ಮಾರಕವಾಗಿದೆ. ರೋಸ್ಟರ್ ಪದ್ಧತಿ ಜೀವಂತ ಶವವಾಗಿದೆ. ಈ ಅನ್ಯಾಯ ಸರಿಪಡಿಸಲು ಆಗ್ರಹಿಸಿ ಸಮಾವೇಶವನ್ನು ಆಯೋಜಿಸಲಾಗಿದ್ದು, ಈ ಸಮುದಾಯಗಳ ಪ್ರತಿ ಮನೆಯಿಂದ ಒಬ್ಬ ಸದಸ್ಯರು ಭಾಗವಹಿಸುವ ಮೂಲಕ ಶಕ್ತಿ ಪ್ರದರ್ಶಿಸಬೇಕಾಗಿದೆ. ಆದ್ದರಿಂದ ಸಾಗರೋಪಾದಿಯಾಗಿ ಸಮುದಾಯದ ಜನರು ಸೇರಬೇಕು ಎಂದು ತಿಳಿಸಿದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮಂಗಳವಾರ ನಡೆದ ಬಂಜಾರ, ಬೋವಿ, ಕೊರಮ, ಕೊರಚ, ಚರ್ಮಕಾರ, ಸೂಕ್ಷ್ಮ ಪರಿಶಿಷ್ಟ ಜಾತಿಗಳ ಹೋರಾಟ ಸಂಕಲ್ಪ ಸಮಾವೇಶದಲ್ಲಿ ಚಿತ್ರದುರ್ಗದ ಬೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಬಂಜಾರ ಗುರುಪೀಠದ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಮಾಜಿ ಸಚಿವ ಅರವಿಂದ ಲಿಂಬಾವಳಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಎಸ್‌ಸಿ ರೋಸ್ಟರ್ ಪದ್ಧತಿ ಪ್ರಕಾರ ಈ 63 ಸಮುದಾಯದವರಿಗೆ ಮೀಸಲು ಸೌಲಭ್ಯ ದೊರೆಯಬೇಕಾದರೆ ಎರಡು ತಲೆಮಾರು ಬೇಕಾಗುತ್ತದೆ. ಇದು ಶಾಶ್ವತವಾಗಿ ಜಾರಿಯಾದರೆ ಈ ಸಮುದಾಯಗಳೆಲ್ಲ ಅಧೋಗತಿಯತ್ತ ಮುಖ ಮಾಡಲಿವೆ. ಸಮಾಜದ ಬೆಳವಣಿಗೆಯೂ ಇಳಿಮುಖವಾಗಲಿದೆ ಎಂದು ಎಚ್ಚರಿಸಿದರು.

ಅಪೂರ್ಣವಾಗಿರುವ ನ್ಯಾ.ನಾಗಮೋಹನದಾಸ ವರದಿಯಲ್ಲೇ 29 ಕೋಷ್ಟಕಗಳ ಪೈಕಿ 19 ಕೋಷ್ಟಕಗಳಲ್ಲಿ ಈ ಸಮುದಾಯಗಳು ಸಾಮಾಜಿಕವಾಗಿ ಹಿಂದುಳಿದಿವೆ. ಸುಪ್ರೀಂಕೋರ್ಟ್ ತೀರ್ಪಿನ ಪ್ರಕಾರ ಹಿಂದುಳಿವಿಕೆಯ ಆಧಾರದ ಮೇಲೆ ಒಳಮೀಸಲಾತಿ ವರ್ಗೀಕರಣವಾದರೆ ಇವುಗಳೆಲ್ಲವೂ ಎ–ಪ್ರವರ್ಗದಲ್ಲಿ ಬರಬೇಕು. ಆದರೆ, ರಾಜಕೀಯ ಶಕ್ತಿ, ಧ್ವನಿವಿಲ್ಲದ ಕಾರಣಕ್ಕೆ ಸಿ–ಪ್ರವರ್ಗಕ್ಕೆ ಸೇರಿಸಲಾಗಿದೆ. ಆದ್ದರಿಂದ ಒಳ ಮೀಸಲಾತಿ ವರ್ಗೀಕರಣವನ್ನೇ ಮರುಪರಿಶೀಲನೆ ಮಾಡಬೇಕು ಎಂದೂ ಆಗ್ರಹಿಸಿದರು.

ಕೇಂದ್ರ ಸರ್ಕಾರದಿಂದ ಜನಗಣತಿ ನಡೆಯಲಿದ್ದು, ಇದರಿಂದ ದೊರೆಯುವ ಎಸ್‌ಸಿ ಜನಸಂಖ್ಯೆ ದತ್ತಾಂಶದ ಮೇಲೆ ಒಳಮೀಸಲಾತಿ ನಿಗದಿ ಪಡಿಸಬೇಕು. ಈಗ ಆಗಿರುವ ಅನ್ಯಾಯ ಸರಿಪಡಿಸಿದ್ದರೆ ಸಿಡಿದೇಳಬೇಕಾಗುತ್ತದೆ ಎಂದೂ ಎಚ್ಚರಿಸಿದರು.

ಎಲ್ಲರ ಜೊತೆ ಕರೆದೊಯ್ಯಬೇಕು: ಇದೇ ವೇಳೆ ಮಾಜಿ ಸಚಿವ ಅರವಿಂದ ಲಿಂಬಾವಳಿ ಮಾತನಾಡಿ, ಮೀಸಲಾತಿ ವಿಷಯದಲ್ಲಿ ಅನ್ಯಾಯ ಮಾಡಿದ ಹಿಂದಿನ ಬಿಜೆಪಿ ಸರ್ಕಾರಕ್ಕೆ ಪಾಠ ಕಲಿಸಿದ್ದು, ಇದೀಗ ಒಳಮೀಸಲಾತಿಯಲ್ಲಿನ ಸಮಸ್ಯೆ ಬಗೆಹರಿಸದಿದ್ದರೆ ಕಾಂಗ್ರೆಸ್ ಸರ್ಕಾರಕ್ಕೂ ಪಾಠ ಕಲಿಸುವುದು ನಿಶ್ಚಿತ. ಎಸ್‌ಸಿ ಶೇ.15ರಷ್ಟು ಪ್ರಕಾರ ನೇಮಕಾತಿ ಕೈಗೊಂಡಿರುವುದು ತಾತ್ಕಾಲಿಕವಾಗಿ ನಿರಾಳತೆ ಸಿಕ್ಕಿದೆ. ನಮಗೆ ದುರಾಸೆ ಇಲ್ಲ. ಎಸ್‌ಸಿಗಳೆಲ್ಲರನ್ನೂ ಜತೆಯಲ್ಲಿ ಕರೆದುಕೊಂಡು ಹೋಗಬೇಕು. ಯಾರನ್ನೂ ನಿರ್ಲಕ್ಷ್ಯ ಮಾಡಬಾರದು. ನ್ಯಾಯ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಎಸ್‌ಸಿ–ಎಸ್‌ಟಿ ಮೀಸಲಾತಿ ಪ್ರಮಾಣ ಏರಿಕೆಯನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಬೇಕು. ಎಸ್‌ಸಿಪಿ–ಟಿಎಸ್‌ಪಿ ಹಣವನ್ನು ಪೂರ್ಣ ಪ್ರಮಾಣದಲ್ಲಿ ಪರಿಶಿಷ್ಟರ ಕಲ್ಯಾಣಕ್ಕೆ ಬಳಕೆ ಮಾಡಬೇಕು. ಅನ್ಯ ಉದ್ದೇಶಕ್ಕೆ ಬಳಕೆಗೆ ಕಡಿವಾಣ ಹಾಕಬೇಕು. ಹೀಗಾಗಿ, ಈ ಎಲ್ಲ ಬೇಡಿಕೆ ಈಡೇರಿಕೆಗಾಗಿ ಬೆಂಗಳೂರಿನಲ್ಲಿ ಬೃಹತ್ ಸಮಾವೇಶವನ್ನು ರೂಪಿಸಲಾಗಿದೆ ಎಂದು ತಿಳಿಸಿದರು.

ಬಂಜಾರ ಗುರುಪೀಠದ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಮಾತನಾಡಿ, ಮೀಸಲಾತಿ ಸೌಲಭ್ಯದಿಂದ ಬಂಜಾರ, ಬೋವಿ, ಕೊರಮ, ಕೊರಚ, ಚರ್ಮಕಾರ, ಸೂಕ್ಷ್ಮ ಪರಿಶಿಷ್ಟ ಜಾತಿ ಹೊರಗೆ ಹಾಕುವ ಹುನ್ನಾರ ನಡೆದಿದೆ. ಹೀಗಾಗಿ, ಈ ಜಾತಿಗಳನ್ನು ಗುರಿ ಮಾಡಲಾಗಿದೆ. ಹೀಗಾಗಿ, ನಮ್ಮ ಸಮುದಾಯಗಳ ಶಕ್ತಿಯನ್ನು ಬೆಂಗಳೂರಿನ ಸಮಾವೇಶ ಮೂಲಕ ಪ್ರದರ್ಶಿಸಬೇಕಾಗಿದೆ. ಇಲ್ಲವಾದರೆ ಭವಿಷ್ಯದಲ್ಲಿ ದೊಡ್ಡ ಅನ್ಯಾಯವಾಗಲಿದೆ ಎಂದು ಎಚ್ಚರಿಸಿದರು.

ಕರ್ನಾಟಕ ಬೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ಮಾತನಾಡಿ, ಒಳಮೀಸಲಾತಿ ರೋಸ್ಟರ್ ಹಂಚಿಕೆಯಲ್ಲಿ ಅನ್ಯಾಯವಾಗಲಿದ್ದು, ಇದು ಅಳಿವು–ಉಳಿವಿನ ಪ್ರಶ್ನೆ. ನಾವುಗಳೆಲ್ಲ ಜಾಗೃತರಾಗಿ ಹೋರಾಟದಲ್ಲಿ ಸಕ್ರಿಯವಾಗಬೇಕು. ಅದಕ್ಕಾಗಿಯೇ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಲು ಈ ಸಮಾವೇಶ ರೂಪಿಸಲಾಗಿದೆ. ಈ ರೀತಿಯ ಹೋರಾಟಕ್ಕೆ ಎಸ್‌ಸಿಯಲ್ಲಿನ ಬಲಗೈ ಸಮುದಾಯದವರು ನಮ್ಮೊಂದಿಗೆ ಇದ್ದಾರೆ ಎಂದರು.

ಸಮಾವೇಶದಲ್ಲಿ ಶ್ರೀ ಹೇಮಂತ್ ಕುಮಾರ್ ಸ್ವಾಮೀಜಿ, ಬೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ.ಸೀತಾರಾಮು, ಕೆಪಿಸಿಸಿ ಕಾನೂನು ವಿಭಾಗದ ಕಾರ್ಯಾಧ್ಯಕ್ಷ ಎನ್.ಅನಂತನಾಯ್ಕ್, ಮೈಸೂರು ಭೋವಿ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಎಸ್.ವಿಜಯಕುಮಾರ್, ಪ್ರಧಾನ ಕಾರ್ಯದರ್ಶಿ ಕೆ.ಹೆಚ್.ದೇವರಾಜು, ಮಾಜಿ ಅಧ್ಯಕ್ಷ ಜಿ.ನಾಗರಾಜ ಆದರ್ಶ ಯಲಪ್ಪ, ಬಂಜಾರ ಸಮುದಾಯದ ರವಿ ನಾಯ್ಕ ಇನ್ನಿತರರು ಪಾಲ್ಗೊಂಡಿದ್ದರು.

ಆಕಸ್ಮಿಕ ಬೆಂಕಿಯಿಂದ ವೃದ್ಧ ವಾಚ್‌ಮನ್ ಸಜೀವ ದಹನ

ಮೈಸೂರಿನ ಗೋಕುಲ್ ಥಿಯೇಟರ್‌ನಲ್ಲಿ ಮನಕಲಕುವ ಘಟನೆ



ಮೈಸೂರು, ಮಾ.17(ಬಿಎಲ್‌ಯು)– ಆಕಸ್ಮಿಕ ಬೆಂಕಿ ಅವಘಡದಲ್ಲಿ ವೃದ್ಧ ವಾಚ್‌ಮನ್ ಸಜೀವ ದಹನವಾದ ಮನಕಲಕುವ ಘಟನೆ ಮೈಸೂರಿನ ಗೋಕುಲಂನಲ್ಲಿ ನಡೆದಿದೆ.

ಮೈಸೂರು ಜಿಲ್ಲೆ ಹುಲ್ಲಹಳ್ಳಿಯ ಮರಿಶೆಟ್ಟಿ(75) ಮೃತ ದುರ್ದೈವಿಯಾಗಿದ್ದಾರೆ. ಮೈಸೂರಿನ ಕೆಆರ್‌ಎಸ್ ರಸ್ತೆಯ ಗೋಕುಲ್ ಚಿತ್ರಮಂದಿರ ಬಹಳ ವರ್ಷಗಳ ಹಿಂದೆಯೇ ಮುಚ್ಚಿದೆ. ಆದರೆ, ಅಲ್ಲೇ ಕೆಲಸ ಮಾಡುತ್ತಿದ್ದ ಮರಿಶೆಟ್ಟಿ ಹಾಗೂ ಆತನ ಪತ್ನಿ ಚಿತ್ರಮಂದಿರದ ಆವರಣದಲ್ಲಿರುವ ಶೆಡ್‌ನಲ್ಲಿ ವಾಸವಾಗಿದ್ದರು.

ಆವರಣದಲ್ಲಿರುವ ಕಸವನ್ನು ಇಂದು ಗುಡಿಸಿ, ಗುಡ್ಡೆ ಹಾಕಿದ ಮರಿಶೆಟ್ಟಿ ಅವರು ಕೊನೆಗೆ ಅದಕ್ಕೆ ಬೆಂಕಿ ಹಾಕಿದ್ದಾರೆ. ಆದರೆ ಕಸಕ್ಕೆ ಹಾಕಿದ್ದ ಬೆಂಕಿ ಜ್ವಾಲೆ ಅಲ್ಲಿ ಸಂಗ್ರಹಿಸಿದ್ದ ಸೌದೆಗೂ ವ್ಯಾಪಿಸಿದೆ.

ಸೌದೆ ಬೆಂಕಿಯಲ್ಲಿ ಬೂದಿಯಾಗುತ್ತದೆ ಎಂದು ಗಾಬರಿಯಲ್ಲಿ ಅದನ್ನು ಹೊರಗೆ ಎಳೆಯಲು ಮುಂದಾಗಿದ್ದಾರೆ. ಆ ವೇಳೆ ಕಾಲು ಜಾರಿ ಸೌದೆ ಒಳಗೆ ಬಿದ್ದಿದ್ದಾರೆ. ಕ್ಯಾನ್ಸರ್ ರೋಗಿಯೂ ಆಗಿದ್ದ ವೃದ್ಧ ಮರಿಶೆಟ್ಟಿ ಅವರು, ಬೆಂಕಿಯಿಂದ ಬಚಾವಾಗಿ ಬರಲಾಗದೆ ಸಜೀವ ದಹನವಾಗಿದ್ದಾರೆ.

ಮರಿಶೆಟ್ಟಿಯನ್ನು ಬೆಂಕಿಯಿಂದ ಪಾರು ಮಾಡಲು ಆತನ ಪತ್ನಿಗೂ ಸಾಧ್ಯವಾಗಿಲ್ಲ. ಸುತ್ತ ಕಾಂಪೌಂಡ್ ಇದ್ದ ಕಾರಣ ಆತ ಬೆಂಕಿಯಲ್ಲಿ ಬಿದ್ದಿರುವುದು ಯಾರಿಗೂ ಕಾಣಿಸಲಿಲ್ಲ, ಅವರ ಚೀರಾಟವೂ ಹೊರಗೆ ಕೇಳಿಲ್ಲ.

ಸೌದೆಗೆ ಆವರಿಸಿದ್ದ ದಟ್ಟ ಹೊಗೆ ನೋಡಿದ ದಾರಿ ಹೋಕರು ಅಗ್ನಿಶಾಮಕ ದಳವರಿಗೆ ಕರೆ ಮಾಡಿದ್ದಾರೆ. ಅಗ್ನಿಶಾಮಕ ದಳವರು ಬರುವ ಹೊತ್ತಿಗೆ ಮರಿಸ್ವಾಮಿ ಬೆಂಕಿಯಲ್ಲಿ ಸುಟ್ಟು ಕರಕಲಾಗಿದ್ದರು. ಈ ಸಂಬಂಧ ವಿ.ವಿ.ಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಸರ್ವೀಸ್ ಅಪಾರ್ಟ್‌ಮೆಂಟ್‌ನಲ್ಲಿ 4 ಲಕ್ಷ ಮೌಲ್ಯದ ಡ್ರಗ್ಸ್ ಪತ್ತೆ: ಓರ್ವನ ಬಂಧನ

ಕ್ರೈಂ ಟಾಕ್

ಮೈಸೂರು, ಮಾ.17(ಬಿಎಲ್‌ಯು)– ಸರ್ವೀಸ್ ಅಪಾರ್ಟ್‌ಮೆಂಟ್‌ನಲ್ಲಿ ಇಟ್ಟಿದ್ದ 4 ಲಕ್ಷ ಮೌಲ್ಯದ ಎಂಡಿಎಂಎ ಮಾದಕ ವಸ್ತುವನ್ನು ವಶಪಡಿಸಿ ಕೊಂಡಿರುವ ಮೈಸೂರಿನ ಕುವೆಂಪುನಗರ ಪೊಲೀಸರು ಒಬ್ಬನನ್ನು ಬಂಧಿಸಿದ್ದಾರೆ.

ಕೇರಳದ ಕಾಸರಗೋಡಿನ ಬಲ್ಲಾ ಗ್ರಾಮದ ಶಬೀರ್ ಬಂಧಿತ. ತಮಗೆ ದೊರೆತ ಖಚಿತ ಮಾಹಿತಿ ಮೇರೆಗೆ ಕುವೆಂಪುನಗರ ಪೊಲೀಸರ ವಿಶೇಷ ತಂಡವು ಇಂದು ಕನಕದಾಸ ನಗರದ ಹಾಲಿಡೇ ಇನ್ ಸರ್ವೀಸ್ ಅಪಾರ್ಟ್‌ಮೆಂಟ್ ಮೇಲೆ ದಾಳಿ ಮಾಡಿತು. ಈ ವೇಳೆ ಆರೋಪಿ ಶಬೀರ್ ರೂಂನಲ್ಲಿ ಇಟ್ಟಿದ್ದ 4 ಲಕ್ಷ ರೂಪಾಯಿ ಮೌಲ್ಯದ 40 ಗ್ರಾಂ ಎಂಡಿಎಂಎ ಮಾದಕ ವಸ್ತುವನ್ನು ವಶಪಡಿಸಿಕೊಂಡು, ಆತನನ್ನು ಬಂಧಿಸಿದರು.

ಆರೋಪಿ ಶಬೀರ್ ವಿರುದ್ಧ ಕಾಸರಗೋಡು ಜಿಲ್ಲೆಯ ಹೊಸದುರ್ಗ ಪೊಲೀಸ್ ಠಾಣೆಯಲ್ಲಿ ದರೋಡೆ ಪ್ರಕರಣ ಹಾಗೂ ಬೆಂಗಳೂರಿನ ಬಾಣಸವಾಡಿ ಪೊಲೀಸ್ ಠಾಣೆಯಲ್ಲಿ ಎನ್ ಡಿಪಿಎಸ್ ಕಾಯ್ದೆಯಡಿ ಒಂದು ಪ್ರಕರಣ ದಾಖಲಾಗಿದ್ದು, ಈತನ ಬಗ್ಗೆ ಸ್ಥಳೀಯ ಪೊಲೀಸರು ಹೆಚ್ಚಿನ ವಿಚಾರಣೆ ನಡೆಸುತ್ತಿದ್ದಾರೆ.

ರೂಂ ನೀಡುವಾಗ ಎಚ್ಚರ

ಸರ್ವೀಸ್ ಅಪಾರ್ಟ್‌ಮೆಂಟ್, ಲಾಡ್ಜ್‌ಗಳಲ್ಲಿ ರೂಂ ನೀಡುವಾಗ ಎಚ್ಚರಿಕೆ ವಹಿಸಬೇಕು ಎಂದು ಪೊಲೀಸರು ಸಲಹೆ ನೀಡಿದ್ದಾರೆ. ರೂಂ ಪಡೆಯುವ ವ್ಯಕ್ತಿಯ ಪೂರ್ವಾಪರ ವಿಚಾರಣೆ ಮಾಡಬೇಕು. ಆತನನಿಂದ ಆಧಾರ್‌ಕಾರ್ಡ್, ಇತರೆ ಐಡಿ ಕಾರ್ಡ್, ಮೊಬೈಲ್ ನಂಬರ್ ಅನ್ನು ಕಡ್ಡಾಯವಾಗಿ ಪಡೆದುಕೊಳ್ಳುವಂತೆಯೂ ಸೂಚಿಸಿದ್ದಾರೆ.

ಮೈಸೂರಲ್ಲಿ ಗಾಂಜಾ ಸಾಗಾಟ: ವ್ಯಕ್ತಿ ಬಂಧನ, 8.65 ಲಕ್ಷ ಮೌಲ್ಯದ ಮಾದಕ ವಸ್ತು ವಶಕ್ಕೆ



ಮೈಸೂರು, ಮಾ.17(ಬಿಎಲ್‌ಯು)– ಗಾಂಜಾ ಸಾಗಾಟ ಮಾಡುತ್ತಿದ್ದ ನಾಲ್ವರನ್ನು ಬಂಧಿಸಿರುವ ಮೈಸೂರಿನ ಸಿಸಿಬಿ ಪೊಲೀಸರು 8.65 ಲಕ್ಷ ಮೌಲ್ಯದ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಅಮ್ಜದ್ ಪಾಷ ಅಲಿಯಾಸ್ ಅಮ್ಜದ್, ಜಿಯಾ ಖಾನ್ ಅಲಿಯಾಸ್ ಜಿಯಾ, ಮಹಮ್ಮದ್ ಸಕ್ಲೈನ್ ಹಾಗೂ ಸೈಯದ್ ಬೇಗ್ ಬಂಧಿತ ಆರೋಪಿಗಳಾಗಿದ್ದಾರೆ.

ತಮಗೆ ದೊರೆತ ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ ಸಿಸಿಬಿ ಒಸಿಡಬ್ಲ್ಯೂ (ಸೆಂಟ್ರಲ್ ಕ್ರೈಂ ಬ್ರ್ಯಾಂಚ್– ಆರ್ಗನೈಜ್ಡ್ ಕ್ರೈಂ ವಿಂಗ್) ನವರು ಮಾದಕ ವಸ್ತು ಗಾಂಜಾ ಸಾಗಾಟವನ್ನು ಪತ್ತೆ ಮಾಡಿದರು.

ಆರೋಪಿಗಳಿಂದ 5 ಕೆ.ಜಿ. 320 ಗ್ರಾಂ ಗಾಂಜಾ ಹಾಗೂ ಸಾಗಾಟಕ್ಕೆ ಬಳಸುತ್ತಿದ್ದ ಸ್ವಿಫ್ಟ್ ಕಾರು (ಕೆಎ–51, ಎಂಬಿ 9556) ವಶಪಡಿಸಿಕೊಂಡಿದ್ದಾರೆ.

ಸಿಸಿಬಿ ಎಸಿಪಿ ಮಹಮ್ಮದ್ ಶರೀಫ್ ರಾವುತರ್, ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಸಬ್ ಇನ್ಸ್‌ಪೆಕ್ಟರ್ ಕೆ.ಲೇಪಾಕ್ಷ, ಜ್ಯೋತ್ಸ್ನಾ, ಆರ್.ರಾಜ್, ರೇವಣ ಸಿದ್ದಯ್ಯ, ಅನಿಲ್ ಹಾಗೂ ಸಿಬ್ಬಂದಿಗಳಾದ ಸಮೀರ್, ರಾಜಾಸಾಬ್, ಚೇತನ್, ಆದಂ, ಮಧುಕುಮಾರ್, ಕಿರಣ್ ರಾಥೋಡ್, ಸಂತೋಷ್ ಪವಾರ್, ಯಶ್ವಂತ್, ದೇವರಾಜ್, ಮಮತ, ಸಿದ್ದರಾಜು ಹಾಗೂ ಸುರೇಶ್ ಅವರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ವಿವಿ 2 ವರ್ಷ ನನ್ನ ಕೈಗೆ ಕೊಟ್ಟು ನೋಡಿ ತೋರಿಸ್ತೀನಿ!

ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ ಸವಾಲು



ಮೈಸೂರು, ಮಾ.17(ಜಿಎ)– ಮೈಸೂರು ವಿಶ್ವವಿದ್ಯಾನಿಲಯದ ಕೆಲವು ನಿರ್ಣಯಗಳಿಂದ ವಿಶ್ವ ವಿದ್ಯಾನಿಲಯದ ವಿವಿಧ ಕೋರ್ಸ್‌ಗಳನ್ನು ಹಂತ ಹಂತವಾಗಿ ಮುಚ್ಚಲಾಗಿದೆ. ಜೊತೆಗೆ ಯಾವುದೇ ಕಮಿಟ್‌ಮೆಂಟ್ ಇಲ್ಲದೆ ವಿಶ್ವವಿದ್ಯಾನಿಲಯವನ್ನು ನಡೆಸುತ್ತಿದ್ದಾರೆ. ಹೀಗೆ ಆದರೆ 5 ವರ್ಷಗಳಲ್ಲಿ ವಿಶ್ವ ವಿದ್ಯಾನಿಲಯಗಳನ್ನು ಮುಚ್ಚಬೇಕಾಗುತ್ತದೆ ಎಂದು ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನೂರು ವರ್ಷ ಪೂರೈಸಿರುವ ಮೈಸೂರು ವಿಶ್ವವಿದ್ಯಾಲಯದ ಘನತೆ ಕುಂದುತ್ತಿದೆ. ಎಲ್ಲಾ ಕೋರ್ಸ್‌ಗಳನ್ನು ಒಂದು ಕಡೆಯಿಂದ ಮುಚ್ಚುತ್ತಿದ್ದಾರೆ. ಖಾಸಗಿ ಸಂಸ್ಥೆಗಳಲ್ಲಿ ದಾಖಲಾತಿ ಆಗುತ್ತಿವೆ. ನನ್ನ 70 ವರ್ಷದ ಸರ್ವಿಸ್‌ನಲ್ಲಿ ಮೈಸೂರು ವಿವಿಗೆ ದಾಖಲಾತಿ ಕೊರತೆ ಬಂದೇ ಇಲ್ಲ. ಮೈಸೂರು ವಿವಿಗೆ ಮೊದಲ ಆದ್ಯತೆ ಕೊಡುತ್ತಾರೆ. ಈ ನಡುವೇ ಕೊರತೆ ಇದೆ ಎಂದರೆ ನಾನು ನಂಬುವುದಿಲ್ಲ. ಮೈಸೂರು ವಿವಿಗೆ ಕಮಿಟ್‌ಮೆಂಟ್ ಇಲ್ವಾ ಅಥವಾ ಏನಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳುವುದು ಬಹಳ ಕಷ್ಟ ಆಗುತ್ತಿದೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜು ಹಾಗೂ ಮಹಾರಾಜ ಕಾಲೇಜು ಎರಡು ಕಣ್ಣುಗಳು ಇದ್ದ ಹಾಗೆ. ನಾವು ಇದ್ದ ಸಮಯದಲ್ಲಿ ಕಷ್ಟಪಟ್ಟು ಯುವರಾಜ ಕಾಲೇಜನ್ನು ಸ್ವಾಯತ್ತ ಸಂಸ್ಥೆಯಾಗಿ ಮಾಡಿದ್ದೆವು. ಈಗ ಅದನ್ನು ತೆಗೆಯಲು ಹೊರಟಿದ್ದಾರೆ. ಇದು ಸರಿಯಲ್ಲ. ಈ ಬಗ್ಗೆ ರಾಜ್ಯ ಸರ್ಕಾರ ಹಾಗೂ ರಾಜ್ಯಪಾಲರು ಮಧ್ಯ ಪ್ರವೇಶ ಮಾಡಬೇಕು ಎಂದು ಆಗ್ರಹಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳು ಬರುತ್ತಿಲ್ಲ ಎಂಬುದು ಸರಿಯಲ್ಲ. ನನಗೆ 2 ವರ್ಷ ಸಮಯ ಕೊಡಿ, ಅಧಿಕಾರ ಕೊಡಿ, ನಡೆಸಿ ತೋರಿಸುತ್ತೇನೆ ಎಂದು ಸವಾಲು ಎಸೆದರು.

> ❝ ಮೈಸೂರು ವಿವಿಯ ವ್ಯಾಪ್ತಿಯ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಕೆಲವು ಖಾಸಗಿ ವ್ಯಕ್ತಿಗಳು ತಮ್ಮ ಆಸ್ತಿ ಎಂದು ಹೇಳಿಕೊಂಡು, ಅಲ್ಲಿ ಹೋಟೆಲ್ ಕಟ್ಟಲು ಹೊರಟಿರುವುದು ಸರಿಯಲ್ಲ. ಮಹಾರಾಜರ ಕಾಲದಲ್ಲಿನ ನಕ್ಷೆಯನ್ನು ನೋಡಿದರೆ ಆ ಜಾಗ ಯಾವುದೆಂದು ಗೊತ್ತಾಗಲಿದೆ.
> -ಪ್ರೊ.ಕೆ.ಎಸ್.ರಂಗಪ್ಪ, ವಿಶ್ರಾಂತ ಕುಲಪತಿ

ಗ್ಯಾಸ್ ಸಿಲಿಂಡರ್ ಸಮಸ್ಯೆ ಕುರಿತು ಪ್ರತಿಕ್ರಿಯಿಸಿ, ಈಗ ಅಮೆರಿಕ ಹಾಗೂ ಇಸ್ರೇಲ್ ಸೇರಿ ಇರಾನ್ ಮೇಲೆ ದಾಳಿ ಮಾಡುತ್ತಿವೆ. ಇದರಿಂದಾಗಿ ನಮ್ಮಲ್ಲಿ ಗ್ಯಾಸ್ ಸಿಲಿಂಡರ್ ಸಮಸ್ಯೆ ಉಂಟಾಗಿದೆ. ಇದಕ್ಕೆ ಪರಿಹಾರ ಇದೆ. ಆದರೆ, ಸಮಯ ಬೇಕು. ಜೊತೆಗೆ ಬಿಕ್ಕಟ್ಟನ್ನು ಮಾತು ಕತೆಯ ಮೂಲಕ ಪರಿಹರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮೈಸೂರು ನಗರ ಪೊಲೀಸ್ ಕಾನೂನು-ಸುವ್ಯವಸ್ಥೆ

ನೂತನ ಡಿಸಿಪಿ ಡಾ.ಹರ್ಷ ಪ್ರಿಯಂವದ



ಮೈಸೂರು,ಮಾ.17(ಪಿಎಂ)– ರಾಜ್ಯ ಸರ್ಕಾರ ಮೂವರು ಮಹಿಳಾ ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದು, ಅಂತೆಯೇ ಹಲವು ದಿನಗಳಿಂದ ಖಾಲಿ ಇದ್ದ ಮೈಸೂರು ನಗರ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಉಪ ಪೊಲೀಸ್ ಆಯುಕ್ತ ಹುದ್ದೆಗೆ ಡಾ.ಹರ್ಷ ಪ್ರಿಯಂವದ ಅವರನ್ನು ನೇಮಿಸಲಾಗಿದೆ.

ಬೆಂಗಳೂರಲ್ಲಿ ಅಪರಾಧ ತನಿಖೆ ವಿಭಾಗದ (ಸಿಐಡಿ) ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ಡಾ.ಹರ್ಷ ಪ್ರಿಯಂವದ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾವಣೆ ಮಾಡಿ ಮುಂದಿನ ಆದೇಶದವರೆಗೆ ಮೈಸೂರು ನಗರ ಪೊಲೀಸ್ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಉಪ ಪೊಲೀಸ್ ಆಯುಕ್ತರನ್ನಾಗಿ ನಿಯೋಜಿಸಿ ಸರ್ಕಾರ ಆದೇಶಿಸಿದೆ.

ಜಾರ್ಖಂಡ್ ಮೂಲದ ಡಾ.ಹರ್ಷ ಪ್ರಿಯಂವದ ಅವರು 2020ರ ಬ್ಯಾಚಿನ ಐಪಿಎಸ್ ಅಧಿಕಾರಿ. ಎಂಬಿಬಿಎಸ್ ಪದವೀಧರರಾದ ಇವರು, ಉಡುಪಿ ಜಿಲ್ಲೆಯ ಕಾರ್ಕಳ ಉಪವಿಭಾಗದ ಎಎಸ್‌ಪಿ ಆಗಿ ಬಳಿಕ ಮುಂಬಡ್ತಿ ಪಡೆದು ಬೆಂಗಳೂರು ಸಿಐಡಿ ವಿಭಾಗದ ಎಸ್‌ಪಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಇದೀಗ ಮೈಸೂರು ಡಿಸಿಪಿ ಆಗಿ ವರ್ಗಾವಣೆಗೊಂಡಿದ್ದಾರೆ.

ಅದೇ ರೀತಿ ಹುದ್ದೆ ನಿರೀಕ್ಷೆಯಲ್ಲಿದ್ದ 2016 ಬ್ಯಾಚಿನ ಐಪಿಎಸ್ ಅಧಿಕಾರಿ ಉಮಾ ಪ್ರಶಾಂತ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಅಪರಾಧ ತನಿಖೆ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿಯಾಗಿ ವರ್ಗಾಯಿಸಲಾಗಿದೆ. ಅಂತೆಯೇ 2019ನೇ ಬ್ಯಾಚಿನ ಐಪಿಎಸ್ ಅಧಿಕಾರಿ ಎನ್.ಎಸ್.ಶ್ರುತಿ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾವಣೆ ಮಾಡಿ, ಮುಂದಿನ ಆದೇಶದವರೆಗೆ ಹುಬ್ಬಳ್ಳಿ–ಧಾರವಾಡ ನಗರದ ಕಾನೂನು ಮತ್ತು ಸುವ್ಯವಸ್ಥೆ ಉಪ ಆಯುಕ್ತರನ್ನಾಗಿ ಖಾಲಿ ಹುದ್ದೆಗೆ ವರ್ಗಾಯಿಸಲಾಗಿದೆ.

ದಿವ್ಯ ಬಲಿಪೂಜೆ

ಮೈಸೂರು, ಮಾ.17– ಮೈಸೂರಿನ ದೀನಾಶ್ರಮ ಸಂಸ್ಥಾಪಕರಾದ ವಂ. ಸ್ವಾಮಿ ಮೈಕಲ್ ಮತ್ತು ವಂ ಸ್ವಾಮಿ ಮರಿ ಜೋಸೆಫ್ ಸಂಸ್ಮರಣಾರ್ಥ ಮಾ.19ರಂದು ಬೆಳಗ್ಗೆ 10.30ಕ್ಕೆ ದೀನಾಶ್ರಮ ತೋಟದ ಬೆಳ್ಳಿವನದಲ್ಲಿ ದಿವ್ಯ ಬಲಿಪೂಜೆಯನ್ನು ಅರ್ಪಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಈ ಮಹನೀಯರ ಆತ್ಮ ಶಾಂತಿಗಾಗಿ ಪ್ರಾರ್ಥಿಸುವ ಪವಿತ್ರ ಕೂಟದಲ್ಲಿ ಭಾಗವಹಿಸುವಂತೆ ಮೈಸೂರಿನ ಕನ್ನಡ ಯಾಜಕರು ಆಹ್ವಾನಿಸಿದ್ದಾರೆ.

ಪುನೀತ್ ರಾಜಕುಮಾರ್ ಹುಟ್ಟು ಹಬ್ಬ



ಮೈಸೂರಿನ ಗೌರಿಶಂಕರ ನಗರದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದತ್ತನಗರ ಅಭಿಮಾನಿ ಬಳಗದಿಂದ ಡಾ॥ ಪುನೀತ್ ರಾಜಕುಮಾರ್ ಅವರ ಹುಟ್ಟು ಹಬ್ಬವನ್ನು ವಿಶೇಷವಾಗಿ ಆಚರಿಸಲಾಯಿತು. ಈ ವೇಳೆ ಮಕ್ಕಳಿಗೆ ಕಲಿಕಾ ವಸ್ತುಗಳನ್ನು ನೀಡಿ, ಊಟದ ವ್ಯವಸ್ಥೆಯನ್ನು ಮಾಡಲಾಯಿತು.


ಉತ್ತರಾದಿ ಮಠದಲ್ಲಿ ಇಂದಿನಿಂದ ಸತ್ಯ ಸಂತುಷ್ಟ ಆರಾಧನೆ



ಮೈಸೂರು, ಮಾ.17(ಬಿಎಲ್‌ಯು)– ಮೈಸೂರಿನ ಅಗ್ರಹಾರದ ಶ್ರೀ ಉತ್ತರಾದಿ ಮಠದಲ್ಲಿ ನಾಳೆ (ಮಾರ್ಚ್ 18) ಯಿಂದ ಮೂರು ದಿನಗಳ ಶ್ರೀ ಸತ್ಯ ಸಂತುಷ್ಟ ತೀರ್ಥರ 184ನೇ ವೈಭವಪೂರ್ಣ ಆರಾಧನಾ ಮಹೋತ್ಸವ ಆರಂಭವಾಗಲಿದೆ.

ಗುರುಗಳ ಮೂಲ ವೃಂದಾವನದಲ್ಲಿ ಮಾರ್ಚ್ 18ರಂದು ಪೂರ್ವಾರಾಧನೆ, 19ರಂದು ಮಧ್ಯಾರಾಧನೆ ಹಾಗೂ 20ರಂದು ಉತ್ತರ ಆರಾಧನೆ ನಡೆಯಲಿದೆ. ಮೂರು ದಿನಗಳ ಕಾಲ ಗುರುಗಳ ಮೂಲ ವೃಂದಾವನಕ್ಕೆ ವಿಶೇಷ ಅಭಿಷೇಕ, ಅಲಂಕಾರ, ಸಾತ್ವಿಕರಿಂದ ಪಾರಾಯಣ ಸೇರಿದಂತೆ ಇತರೆ ಧಾರ್ಮಿಕ ಕಾರ್ಯಕ್ರಮಗಳು ನೆರವೇರಲಿದೆ. ಅಲ್ಲದೆ ದಾಸ ವಾಣಿ ಸಂಗೀತ ಕಚೇರಿ ಸೇರಿದಂತೆ ಇತರೆ ಕಾರ್ಯಕ್ರಮಗಳನ್ನು ಕೂಡ ಆಯೋಜಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಶಾಸಕ ಹರೀಶ್‌ಗೌಡರಿಂದ ಶುಭ ಹಾರೈಕೆ



ಮೈಸೂರು, ಮಾ.17(ಎಸ್‌ಪಿಎನ್)– ನಾಳೆ(ಬುಧವಾರದಿಂದ)ಯಿಂದ ಆರಂಭವಾಗುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಶುಭ ಹಾರೈಸಿದ್ದಾರೆ.

ಬುಧವಾರದಿಂದ ಆರಂಭವಾಗುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ವಿದ್ಯಾರ್ಥಿಗಳು ನಿರ್ಭಯದಿಂದ ಆಗಮಿಸಿ ಯಾವುದೇ ದುಗುಡವಿಲ್ಲದೆ, ಪರೀಕ್ಷೆಯಲ್ಲಿ ಬರೆಯಬೇಕು ಹಾಗೂ ರಾಜ್ಯದಲ್ಲಿ ಮೈಸೂರು ಜಿಲ್ಲೆಗೆ ಉತ್ತಮ ಸ್ಥಾನ ದೊರಕಿಸಿಕೊಡಬೇಕು. ಇದಕ್ಕೆ ಚಾಮರಾಜ ಕ್ಷೇತ್ರದ ವ್ಯಾಪ್ತಿಯ ಪ್ರೌಢಶಾಲಾ ಶಿಕ್ಷಕರು, ಅಧಿಕಾರಿಗಳು ಸೇರಿದಂತೆ ಜಿಲ್ಲೆಯ ಎಲ್ಲಾ ಪ್ರೌಢಶಾಲಾ ಶಿಕ್ಷಕರು ಹಾಗೂ ಶಿಕ್ಷಾಧಿಕಾರಿಗಳು ಹಲವು ದಿನಗಳಿಂದ ವಿದ್ಯಾರ್ಥಿಗಳ ವಿಶೇಷ ಕಲಿಕೆಯಲ್ಲಿ ತೊಡಗಿಸಿಕೊಂಡು ಪರಿಶ್ರಮಪಟ್ಟಿದ್ದಾರೆ. ಹಾಗಾಗಿ ಎಲ್ಲರಿಗೂ ಧನ್ಯವಾದ ಅರ್ಪಿಸಿದ್ದಾರೆ.

ಸಿದ್ದಪ್ಪಾಜಿ–ರಾಜಪ್ಪಾಜಿ ಉತ್ಸವ



ಮೈಸೂರಿನ ಕುರುಬಾರಹಳ್ಳಿಯಲ್ಲಿ ಸಿದ್ದಪ್ಪಾಜಿ ರಾಜಪ್ಪಾಜಿ ಉತ್ಸವ ವಿಜೃಂಭಣೆಯಿಂದ ನೆರವೇರಿತು. ಬಿಎಂಕೆ ಟ್ರಸ್ಟ್ ಕಾರ್ಯದರ್ಶಿ ದೇವರಾಜ, ಕುರುಬಾರಹಳ್ಳಿ ಪ್ರಕಾಶ್, ಶಿವು, ಬೀರಣ್ಣ, ಗೌಡ್ರು ಚಂದ್ರು ಕ್ಯಾಂಟೀನ್ ರವಿ, ನಾಗಣ್ಣ, ರಮೇಶ್ ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ಹೊಸಹುಂಡಿ ಬಳಿ ಫ್ಲೈಓವರ್ ನಿರ್ಮಾಣಕ್ಕೆ ಗ್ರಾಮಸ್ಥರ ವಿರೋಧ

ಸಂಚಾರಿ ವ್ಯವಸ್ಥೆ ಸುಧಾರಣೆಗೆ ಅನ್ಯಮಾರ್ಗೋಪಾಯಕ್ಕೆ ಆಗ್ರಹ

ಮೈಸೂರು, ಮಾ.17(ಎಸ್‌ಪಿಎನ್)–ರಾಷ್ಟ್ರೀಯ ಹೆದ್ದಾರಿ 275ರ ಹೊಸಹುಂಡಿಯಿಂದ ದೇವಲಾಪುರದ ಕಡೆಗೆ ಸಾಗುವ ರಸ್ತೆಗೆ ಹಾಗೂ ಹೊಸಹುಂಡಿ ಗ್ರಾಮದ ಕಡೆಗೆ ವಾಹನಗಳ ಓಡಾಟಕ್ಕೆ ನಿರ್ಮಾಣ ಮಾಡಲು ಉದ್ದೇಶಿಸಿರುವ ಫ್ಲೈಓವರ್ ಕಾಮಗಾರಿ ರದ್ದುಗೊಳಿಸುವಂತೆ ಒತ್ತಾಯಿಸಿ ಹೊಸಹುಂಡಿ ಗ್ರಾಮಸ್ಥರು, ಪರಿಸರಕ್ಕಾಗಿ ನಾವು ಸಂಘಟನೆಯ ಪದಾಧಿಕಾರಿಗಳು ಹೊಸಹುಂಡಿ ಗ್ರಾಮದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಒಮ್ಮತ ತೀರ್ಮಾನ ಕೈಗೊಂಡರು.

ಸಭೆಯಲ್ಲಿ ಪಾಲ್ಗೊಂಡಿದ್ದ ಗ್ರಾಮದ ಮುಖಂಡ ಕೃಷ್ಣ ಮಾತನಾಡಿ, ಹೊಸಹುಂಡಿಯಿಂದ ದೇವಲಾಪುರದ ಕಡೆಗೆ ವಾಹನಗಳು ಓಡಾಡಲು ಫ್ಲೈಓವರ್ ಅಗತ್ಯವಿದೆಯೇ? ಎಂಬುದನ್ನು ಮೊದಲು ಅಧಿಕಾರಿಗಳು ಸ್ಪಷ್ಟಪಡಿಸಬೇಕು ಹಾಗೂ ಈ ಕಾಮಗಾರಿಗಾಗಿ 48 ಅಮೂಲ್ಯ ಮರಗಳನ್ನು ಬಲಿಕೊಡಬೇಕಾದ ಪರಿಸ್ಥಿತಿಯಿದೆ.

ಹಾಗೂ ಫ್ಲೈ ಓವರ್ ಕಾಮಗಾರಿಯಿಂದ ಈ ಜಂಕ್ಷನ್‌ನಲ್ಲಿ ಅಂಗಡಿ ಮುಗಟ್ಟುಗಳಿಗೆ ವ್ಯಾಪಾರ ಕಡಿಮೆಯಾಗಲಿದ್ದು, ಈಗಾಗಲೇ ರಿಂಗ್ ರೋಡ್ ನಿರ್ಮಾಣಕ್ಕಾಗಿ ನೂರಾರು ಮರಗಳು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಬಲಿ ಪಡೆದಿದೆ. ಆ ಜಾಗದಲ್ಲಿ ಕೆಲವೇ ಗಿಡಗಳನ್ನು ಹಾಕಿ ಅಧಿಕಾರಿಗಳು ಕೈತೊಳೆದುಕೊಂಡಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.



ಫ್ಲೈಓವರ್ ಕಾಮಗಾರಿಗೆ ವಿರೋಧ ವ್ಯಕ್ತಪಡಿಸುತ್ತಿರುವ ಹೊಸಹುಂಡಿ ಗ್ರಾಮಸ್ಥರು

ಕಳೆದ ಮೂರು ವರ್ಷಗಳಿಂದ ಈ ಜಂಕ್ಷನ್‌ನಲ್ಲಿ ಐವರು ವಾಹನ ಸವಾರರು ಅಪಘಾತದಿಂದ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಈ ಕಾಮಗಾರಿಗಾಗಿ ಕುಂಟು ನೆಪ ಹೇಳುತ್ತಿದ್ದಾರೆ. ಆದರೆ, ಮೈಸೂರು ಸುತ್ತಮುತ್ತಲಿನ ರಸ್ತೆಗಳಲ್ಲಿ ದಿನವೊಂದಕ್ಕೆ ಹತ್ತಾರು ಅಪಘಾತಗಳು ಸಂಭವಿಸಿ, ಸಾವು–ನೋವು ಸಂಭವಿಸುತ್ತಿವೆ. ಆ ಜಾಗದಲ್ಲೆಲ್ಲ ಏಕೆ ಫ್ಲೈಓವರ್ ನಿರ್ಮಾಣ ಮಾಡುತ್ತಿಲ್ಲ. ಈ ಜಾಗದಲ್ಲಿ ಮಾತ್ರ ಫ್ಲೈಓವರ್ ಕಾಮಗಾರಿ ಏಕೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ಪ್ರಶ್ನಿಸಿದ್ದಾರೆ.

ಈ ಜಾಗದಲ್ಲಿ ಟ್ರಾಫಿಕ್ ಸಮಸ್ಯೆಯಿದ್ದರೆ, ಅಪಘಾತ ಸ್ಥಳವಾಗಿದ್ದರೆ, ಸಿಗ್ನಲ್ ಅಳವಡಿಸಿ, ಸಂಚಾರಿ ಪೊಲೀಸರನ್ನು ನಿಯೋಜಿಸಲಿ. ಅದು ಬಿಟ್ಟು 20 ಕೋಟಿ ವೆಚ್ಚದಲ್ಲಿ ಫ್ಲೈಓವರ್ ನಿರ್ಮಾಣ ಅಗತ್ಯವಿಲ್ಲ ಎಂದು ಒತ್ತಾಯಿಸಿದ ಅವರು, ಅಭಿವೃದ್ಧಿ ಮಾಡಲು ಸಾಕಷ್ಟು ಸ್ಥಳಗಳಿವೆ. ಅದು ಬಿಟ್ಟು ಟ್ರಾಫಿಕ್ ಇಲ್ಲದ ಜಂಕ್ಷನ್‌ನಲ್ಲಿ ಫ್ಲೈಓವರ್ ನಿರ್ಮಾಣ ಮಾಡುವುದರ ಹಿಂದೆ ಕಾಣದ ಕೈಗಳ ಕೈವಾಡವಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪರಿಸರಕ್ಕಾಗಿ ನಾವು ಸಂಘಟನೆಯ ಸದಸ್ಯ ಭಾನು ಪ್ರಶಾಂತ್ ಮಾತನಾಡಿ, ಕಳೆದ ಜನವರಿಯಲ್ಲೇ ಈ ಕಾಮಗಾರಿಗಾಗಿ ಗುರುತು ಮಾಡಿರುವ 48 ಮರಗಳನ್ನು ಯಾವುದೇ ಕಾರಣಕ್ಕೂ ಕಡಿಯಬಾರದು ಹಾಗೂ ಫ್ಲೈಓವರ್ ನಿರ್ಮಾಣ ಕಾಮಗಾರಿ ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸಲಾಗಿತ್ತು. ಆಗ ಸಾರ್ವಜನಿಕರ ಒತ್ತಾಯದ ಮೇರೆಗೆ ಅಧಿಕಾರಿಗಳು ಒಪ್ಪಿಕೊಂಡು ಎರಡು ತಿಂಗಳು ತಾತ್ಕಾಲಿಕವಾಗಿ ಕಾಮಗಾರಿ ನಿಲ್ಲಿಸಿದ್ದರು. ಈಗ ಏಕಾಏಕಿ ಹೆದ್ದಾರಿ ಬಂದ್ ಮಾಡಿ, ಕಾಮಗಾರಿ ಆರಂಭಿಸಲು ಯತ್ನಿಸಿರುವುದೇಕೆ ಎಂದು ಪ್ರಶ್ನಿಸಿದರು.

ಈ ಕಾಮಗಾರಿಯನ್ನು ವಿರೋಧಿಸಿ ಈ ಭಾಗದ ಶಾಸಕರಾದ ಜಿ.ಟಿ.ದೇವೇಗೌಡರು, ಸಂಸದ ಯದುವೀರ್‌ಕೃಷ್ಣದತ್ತ ಚಾಮರಾಜ ಒಡೆಯರ್ ಸೇರಿದಂತೆ ಇತರೆ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಲು ನಿರ್ಧರಿಸಲಾಯಿತು.


ಈ ಸಭೆಯಲ್ಲಿ ಪರಿಸರಕ್ಕಾಗಿ ನಾವು ಸಂಘಟನೆಯ ಕಾರ್ಯದರ್ಶಿ ಪರಶುರಾಮೇಗೌಡ, ಸದಸ್ಯರಾದ ಕೆ.ವಿ.ಭಾನುಪ್ರಶಾಂತ್, ವಿಶ್ವನಾಥ್, ಶೈಲೇಶ್, ಲೀಲಾ ಶಿವಕುಮಾರ್, ಸುಶೀಲಾ, ಭಾಗ್ಯಶಂಕರ್, ಸುಗುಣ ಹಾಗೂ ಹೊಸಹುಂಡಿ ಗ್ರಾಮದ ಮುಖಂಡರಾದ ಪ್ರಭಾಕರ್, ಕೋಳಿಕುಮಾರ್, ಕೃಷ್ಣ, ನಂಜುಂಡಸ್ವಾಮಿ, ರವಿ, ಗಿರೀಶ್, ಮಹದೇವ್, ಚಂದ್ರು ಸೇರಿದಂತೆ ಪರಿಸರ ಪ್ರಿಯರು ಉಪಸ್ಥಿತರಿದ್ದರು.

ತಿ.ನರಸೀಪುರ ಪುರಸಭೆ ಬಜೆಟ್ ಪೂರ್ವಭಾವಿ ಸಭೆ

ಪಟ್ಟಣದ ಅಭಿವೃದ್ಧಿಗೆ ಮುಖಂಡರಿಂದ ಹಲವು ಸಲಹೆ, ಸೂಚನೆ

ತಿ.ನರಸೀಪುರ, ಮಾ.17– ಮುಖ್ಯಾಧಿಕಾರಿಗಳಿಗೆ ತಪ್ಪು ಮಾಹಿತಿ ನೀಡುತ್ತಿದ್ದ ಇಂಜಿನಿಯರ್‌ಗೆ ತರಾಟೆ...! ಕೋತಿ ಹಾಗೂ ನಾಯಿ, ದನಗಳ ಹಾವಳಿ ಕಡಿವಾಣಕ್ಕೆ ಕ್ರಮ ಕೈಗೊಳ್ಳಲು ಒತ್ತಾಯ...! ಪುರಸಭೆ ವ್ಯಾಪ್ತಿಯ ಗಡಿಯಲ್ಲಿ ಸ್ವಾಗತ ಕಮಾನು ನಿರ್ಮಿಸಲು ಆಗ್ರಹ...! ದಲಿತ ಕಾಲೋನಿಗಳ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಒತ್ತಾಯ...! ಬಂಗಾರಪ್ಪ ಬಡಾವಣೆಯಲ್ಲಿ ನಕಲಿ ಹಕ್ಕು ಪತ್ರಗಳ ಹಾವಳಿ ಆರೋಪ...! ನೆನೆಗುದಿಗೆ ಬಿದ್ದಿರುವ ಲಿಂಕ್ ರಸ್ತೆ, ತಾಲೂಕು ಕಚೇರಿ ರಸ್ತೆ ಅಗಲೀಕರಣ ಮಾಡಲು ಆಗ್ರಹ...! ಲಿಂಕ್ ರಸ್ತೆ ಹಾಗೂ ಮಾರುಕಟ್ಟೆ ರಸ್ತೆ ಬದಿ ವ್ಯಾಪಾರಿಗಳಿಗೆ ಶಾಶ್ವತ ನೆಲೆ ಗುರುತಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಒತ್ತಾಯ...!





ತಿ.ನರಸೀಪುರ ಪುರಸಭೆ ಸಭಾಂಗಣದಲ್ಲಿ ಬಜೆಟ್ ಪೂರ್ವಭಾವಿ ಸಭೆ ನಡೆಯಿತು. ಮತ್ತೊಂದು ಚಿತ್ರದಲ್ಲಿ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಸಭೆಗೆ ಉಪಯುಕ್ತ ಸಲಹೆ ನೀಡಿದರು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಮುಖ್ಯಾಧಿಕಾರಿ ಸಿ.ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ 2026–27ನೇ ಸಾಲಿನ ಆಯವ್ಯಯ ಪೂರ್ವ ಭಾವಿ ಸಭೆಯಲ್ಲಿ ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳಿಂದ ಪಟ್ಟಣದ ಅಭಿವೃದ್ಧಿಗಾಗಿ ಕೇಳಿ ಬಂದ ಒತ್ತಾಯಗಳಿವು.

ಸಭೆಯಲ್ಲಿ ಮೊದಲಿಗೆ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾತನಾಡಿ, ಕಳೆದ ಬಜೆಟ್‌ನಲ್ಲಿ ಪಟ್ಟಣದ ಗಡಿ ಗುರುತು ಮಾಡಿ ಸ್ವಾಗತ ಕಮಾನು ನಿರ್ಮಿಸುವಂತೆ ಒತ್ತಾಯಿಸಲಾಗಿತ್ತಾದರೂ ಅದು ಕಾರ್ಯ ರೂಪ ಪಡೆದಿಲ್ಲ. ಪ್ರಮುಖ ರಸ್ತೆಗಳಿಗೆ ಮಹನೀಯರ ಹೆಸರಿಡುವಂತೆ ಕೂಡ ಒತ್ತಾಯಿಸಲಾಗಿತ್ತು. ದಲಿತರ ಕಾಲೋನಿಗಳ ಪಾರ್ಕ್‌ಗಳು ಗಬ್ಬು ನಾರುತ್ತಿದ್ದರೂ, ಅದರ ನಿರ್ವಹಣೆ ಮಾಡಲು ಸಂಬಂಧಪಟ್ಟ ಇಂಜಿನಿಯರ್, ಆರೋಗ್ಯಾಧಿಕಾರಿಗಳು ವಿಫಲರಾಗಿದ್ದಾರೆ. ಅಲ್ಲದೇ ಪ್ರಮುಖ ವೃತ್ತಗಳ ಅಗಲೀಕರಣ ಮಾಡಿಲ್ಲ ಎಂದು ಆರೋಪಿಸಿದರು.

ಮುಖ್ಯಾಧಿಕಾರಿ ಶ್ರೀನಿವಾಸ್ ಮಾತನಾಡಿ, ವಿದ್ಯೋದಯ ಕಾಲೇಜು ವೃತ್ತ ಅಗಲೀಕರಣ ಮಾಡಲಾಗುತ್ತಿದೆ ಎಂದು ಹೇಳುತ್ತಿದ್ದಂತೆ, ಅದು ಯಾವ ಇಲಾಖೆಯಿಂದ ಮಾಡಲಾಗುತ್ತಿದೆ ಎಂದು ಇಂಜಿನಿಯರ್ ಅವರನ್ನು ಮರಯ್ಯ ಪ್ರಶ್ನಿಸಿದರು. ಆದರೆ ಇಂಜಿನಿಯರ್ ಚಂದ್ರಶೇಖರ್ ವಿದ್ಯೋದಯ ಕಾಲೇಜು ಅಗಲೀಕರಣ ಮಾಡಲು ಪುರಸಭೆಯಿಂದ ಸಾಧ್ಯವಿಲ್ಲ ಸರ್ಕಲ್ ಇನ್ಸ್‌ಪೆಕ್ಟರ್ ಅವರು ಹೈಮಾಸ್ಟ್ ದೀಪವನ್ನು ಕಾಲೇಜು ವೃತ್ತದ ಮಧ್ಯ ಭಾಗದಲ್ಲಿ ಸ್ಥಾಪಿಸಿದರೆ ಅನುಕೂಲವಾಗುತ್ತದೆ ಎಂದು ಹೇಳಿದ ಹಿನ್ನೆಲೆಯಲ್ಲಿ ರಸ್ತೆಯ ಪಕ್ಕದಲ್ಲಿದ್ದ ಹೈಮಾಸ್ಟ್ ದೀಪವನ್ನು ಮಧ್ಯ ಭಾಗಕ್ಕೆ ಹಾಕಲು ವೃತ್ತ ನಿರ್ಮಾಣ ಮಾಡಿ ವಿದ್ಯುತ್ ತಂತಿ ಅಳವಡಿಸಲಾಗಿದೆ ಎನ್ನುತ್ತಿದ್ದಂತೆಯೇ ಮುಖ್ಯಾಧಿಕಾರಿಗಳು ವಿದ್ಯೋದಯ ಕಾಲೇಜು ವೃತ್ತ ಅಗಲೀಕರಣ ಮಾಡಲಾಗಿದೆ ಎಂದು ಹೇಳುತ್ತಿದ್ದಾರೆ. ನೀವು ಮಾತ್ರ ಪುರಸಭೆಯಿಂದ ಅಗಲೀಕರಣ ಮಾಡಲು ಅವಕಾಶ ಇಲ್ಲ ಎಂದು ಹೇಳುತ್ತಿದ್ದೀರಾ. ನೀವಿಲ್ಲಿ ಹೊಸದಾಗಿ ಬಂದಿರುವ ಮುಖ್ಯಾಧಿಕಾರಿಯನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದೀರಾ ಎಂದು ಇಂಜಿನಿಯರ್ ಮೇಲೆ ಮರಯ್ಯ ವಾಗ್ದಾಳಿ ನಡೆಸಿದರು.

ಬಂಗಾರಪ್ಪ ಬಡಾವಣೆಯಲ್ಲಿ ನಕಲಿ ಹಕ್ಕು ಪತ್ರದ ಹಾವಳಿ: ಬಂಗಾರಪ್ಪ ಬಡಾವಣೆಯಲ್ಲಿ ದೊಡ್ಡ ಭೂ ಹಗರಣ ನಡೆದಿದೆ ಎಂದು ದಲಿತ ಸಂಘಟನೆ ಮುಖ್ಯಸ್ಥ ಆಲಗೂಡು ಶಿವಕುಮಾರ್ ಆರೋಪಿಸಿ ಈ ಬಡಾವಣೆಯಲ್ಲಿ ಭೂ ಪರಿವರ್ತನೆಯನ್ನೇ ಮಾಡದೇ ನಿವೇಶನ ಹಂಚಿಕೆ ಮಾಡಲು ಹೊರಟಿರುವುದು ಸರಿಯಲ್ಲ. ಹಕ್ಕುಪತ್ರ ವಿತರಣೆ ಕ್ರಮವಾಗಿ ನಡೆದಿಲ್ಲ. ಉಳ್ಳವರು ಡೂಪ್ಲಿಕೇಟ್ ಹಕ್ಕು ಪತ್ರಗಳನ್ನು ಪಡೆದುಕೊಂಡಿದ್ದಾರೆ. ಮಾಜಿ ಸಿಎಂ ಬಂಗಾರಪ್ಪನವರ ಹಿಂದೆ ಓಡಾಡಿಕೊಂಡಿದ್ದ ಹಿಂಬಾಲಕರು ಅಲ್ಲಿ ನಿವೇಶನದ ಹಕ್ಕುಪತ್ರಗಳನ್ನು ಪಡೆದುಕೊಂಡಿದ್ದಾರೆ. ಇಂತಹ ನಕಲಿ ಹಕ್ಕುಪತ್ರಗಳು ನನ್ನ ಬಳಿ ಸಾಕಷ್ಟಿದ್ದು, ಅದನ್ನು ಬಹಿರಂಗಪಡಿಸುತ್ತೇನೆ. ಅಲ್ಲದೇ ಈ ಬಗ್ಗೆ ನಾವು ಕಾನೂನು ಹೋರಾಟಕ್ಕೆ ಸಿದ್ದರಾಗಿದ್ದೇವೆ ಎಂದ ಅವರು ನಿಜವಾಗಿಯೂ ನಿವೇಶನ ಇಲ್ಲದವರಿಗೆ ನಿವೇಶನ ನೀಡಿದರೆ ಯಾವುದೇ ಅಭ್ಯಂತರವಿಲ್ಲ ಎಂದರು.

ಅವಕಾಶಗಳ ಸದ್ಬಳಕೆಗೆ ಮುಂದಾಗಿಲ್ಲ: ಕರೋಹಟ್ಟಿ ಪ್ರಭುಸ್ವಾಮಿ ಮಾತನಾಡಿ, ಪುರಸಭೆ ವ್ಯಾಪ್ತಿಯ 24 ವಾರ್ಡ್‌ಗಳ ಪೈಕಿ 17 ವಾರ್ಡ್ ಸಿಎಂ ಸಿದ್ದರಾಮಯ್ಯ ಪ್ರತಿನಿಧಿಸುವ ವರುಣ ಕ್ಷೇತ್ರಕ್ಕೆ, ಉಳಿದ 7 ವಾರ್ಡ್‌ಗಳು ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಸ್ಪರ್ಧಿಸುವ ತಿ.ನರಸೀಪುರ ಕ್ಷೇತ್ರದಲ್ಲಿದ್ದು, ಇಂತಹ ಸಂದರ್ಭ ನಾವು ಅವಕಾಶದ ಸದ್ಬಳಕೆಗೆ ಮುಂದಾಗಿಲ್ಲ. ಎಂಎಲ್‌ಸಿ ಡಾ.ಯತೀಂದ್ರ ಅವರು 10.50 ಕೋಟಿಯನ್ನು ಎಸ್‌ಎಫ್‌ಸಿ ಯೋಜನೆಯಡಿ ನೀಡಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೂ ಅಭಿವೃದ್ಧಿ ಮಾತ್ರ ಆಗಿಲ್ಲ. ನರಸೀಪುರ ರಸ್ತೆ ಪರಿಸ್ಥಿತಿ ಹೇಳುವಂತಿಲ್ಲ. ಲಿಂಕ್ ರಸ್ತೆ ಅಭಿವೃದ್ಧಿಗೆ 2 ಬಾರಿ ಗುದ್ದಲಿ ಪೂಜೆ ಆದರೂ ಕೆಲಸ ಮಾತ್ರ ಆರಂಭವಾಗಿಲ್ಲ. ರಸ್ತೆ ಅಭಿವೃದ್ಧಿ ವಿಷಯ ಒಂದೆಡೆ ಇರಲಿ, ಇಲ್ಲಿ ರಸ್ತೆಗಳೇ ಇಲ್ಲದಂತಾಗಿವೆ. ರಸ್ತೆ ಅರ್ಧ ಭಾಗವನ್ನು ಬೀದಿ ಬದಿ ವ್ಯಾಪಾರಸ್ಥರು ಆಕ್ರಮಿಸಿಕೊಂಡಿದ್ದಾರೆ. 2016–17ರಲ್ಲಿ ಒಂದು ಕೋಟಿ ರೂ.ವೆಚ್ಚದಲ್ಲಿ ನಿರ್ಮಾಣವಾದ ಮಾರುಕಟ್ಟೆ ಕಟ್ಟಡಕ್ಕೆ ಬೀಗ ಬಿದ್ದಿದೆ. ಇತ್ತ ತರಕಾರಿ ವ್ಯಾಪಾರಿಗಳು, ಮಾಂಸ ವ್ಯಾಪಾರಿಗಳಿಗಾಗಲೀ ಅದು ಬಳಕೆಯಾಗದ ಹಿನ್ನೆಲೆಯಲ್ಲಿ ವ್ಯಾಪಾರಿಗಳು ಬೀದಿಗೆ ಬಂದಿದ್ದಾರೆ. ಮಾರ್ಕೆಟ್ ಎದುರಿನಲ್ಲೇ ಒಂದು ಎಕರೆ ಜಾಗ ಖಾಲಿ ಇದೆ ಮುಖ್ಯಾಧಿಕಾರಿಗಳು ಆ ಜಾಗ ಅಭಿವೃದ್ಧಿ ಪಡಿಸಿ ಓಪನ್ ಮಾರ್ಕೆಟ್ ಮಾಡಿ ಲಿಂಕ್ ರಸ್ತೆ ವ್ಯಾಪಾರಿಗಳಿಗೆ ಅಲ್ಲಿ ಹಾಗೂ ಮಾಂಸ ಮಾರಾಟಗಾರರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಿ ಆ ಜಾಗದಲ್ಲಿ ಮಾರುಕಟ್ಟೆ ರಸ್ತೆ ಬಳಿಯ ವ್ಯಾಪಾರಸ್ಥರಿಗೆ ಅವಕಾಶ ಕಲ್ಪಿಸಿ ಕೊಟ್ಟರೆ ಸಂಚಾರ ಸಮಸ್ಯೆ ಬಗೆಹರಿಸಬಹುದಾಗಿದೆ ಎಂದು ಸಲಹೆ ನೀಡಿದರು.

ಬಾಕಿ ವಸೂಲಿ ಮಾಡಿ, ಮಳಿಗೆ ಮರು ಹಂಚಿಕೆ ಮಾಡಿ: ಗೋಪಾಲಪುರ ರವೀಂದ್ರ ಮಾತನಾಡಿ, ಪುರಸಭೆಗೆ ಮೂಲ ಆದಾಯವಿರುವುದು ವಾಣಿಜ್ಯ ಮಳಿಗೆ ಕಟ್ಟಡದಿಂದ. ಆದರೆ ಪುರಸಭೆಯವರು ಮಳಿಗೆದಾರರಿಂದ ಬರಬೇಕಾದ 2.50 ಕೋಟಿ ರೂ. ಬಾಡಿಗೆಯನ್ನು ವಸೂಲಿ ಮಾಡಿಲ್ಲ. ಹಾಗೂ 10 ರಿಂದ 15 ವರ್ಷಗಳಾದರೂ ಮಳಿಗೆಯನ್ನು ಮರು ಹಂಚಿಕೆ ಮಾಡಿಲ್ಲ. ಹಾಗಾಗಿ ಕೂಡಲೇ ಮಳಿಗೆ ಮರು ಹಂಚಿಕೆ ಮಾಡಿದಲ್ಲಿ ಪುರಸಭೆ ಆದಾಯವನ್ನು ಹೆಚ್ಚಿಸಬಹುದಾಗಿದೆ ಎಂದರು.

ಆಟೋ ಕಾರು ಸ್ಟ್ಯಾಂಡ್‌ಗೆ ಮೇಲ್ಛಾವಣಿ ನಿರ್ಮಿಸಿ: ಪುರಸಭೆ ಮಾಜಿ ಅಧ್ಯಕ್ಷ ಸೋಮು ಮಾತನಾಡಿ, ಆಟೋ ಹಾಗೂ ಕಾರು ನಿಲ್ದಾಣಗಳಿಗೆ ಮೇಲ್ಛಾವಣಿ ನಿರ್ಮಿಸಿಕೊಡುವುದು ಹಾಗೂ ಪುರಸಭೆ ಗಡಿ ವ್ಯಾಪ್ತಿಯಲ್ಲಿ ಸ್ವಾಗತ ಕಮಾನು ನಿರ್ಮಾಣ ಮಾಡುವ ಕುರಿತಂತೆ ಸಲಹೆ ನೀಡಿದರು.

ರುದ್ರಭೂಮಿಯಲ್ಲಿ ಆರ್‌ಓ ಪ್ಲಾಂಟ್ ಮಾಡಿ: ಮಹಾನಾಯಕ ವೃತ್ತದಲ್ಲಿ ಡಕ್ ಸ್ಲಾಬ್ ನಿರ್ಮಾಣ ಹಾಗೂ ದಲಿತರ ರುದ್ರಭೂಮಿಯಲ್ಲಿ ಕುಡಿಯುವ ನೀರಿನ ಆರ್‌ಓ ಪ್ಲಾಂಟ್ ನಿರ್ಮಾಣ ಹಾಗೂ ಕೂರಲು ಕಲ್ಲು ಬೆಂಚ್ ಹಾಕಿಸುವಂತೆ ತ್ರಿವೇಣಿ ನಗರ ಕಾಲೋನಿಯ ಕೆಂಚಪ್ಪ ಮನವಿ ಮಾಡಿದರು.

ಸುಳ್ಳು ಹೇಳಿ ಕಾಲ ಕಳೆಯಬೇಡಿ: ಅಧಿಕಾರಿಗಳು ಮುಖ್ಯಮಂತ್ರಿ ಕ್ಷೇತ್ರದಲ್ಲಿ ಸುಳ್ಳು ಹೇಳಿ ಕಾಲ ಕಳೆಯುವುದನ್ನು ಬಿಟ್ಟು ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿ ಆಯವ್ಯಯದಲ್ಲಿ ಬೀದಿ ದೀಪಗಳಿಗೆ ಹೆಚ್ಚಿನ ಹಣ ಮೀಸಲಿಡುವ ಜೊತೆಗೆ ಅಂಬೇಡ್ಕರ್ ಹಾಗೂ ಬಾಬು ಜಗಜೀವನರಾಂ ಪುತ್ಥಳಿಗೆ ಮೇಲ್ಛಾವಣಿ ನಿರ್ಮಿಸುವಂತೆ ಮಾಜಿ ಸದಸ್ಯ ಗಣೇಶ್ ಸಲಹೆ ನೀಡಿದರು.

ಪರಿಸರ ನಿರ್ಮಾಣಕ್ಕೆ ಆದ್ಯತೆ ನೀಡಿ: ಪ.ಜಾತಿ ಮತ್ತು ವರ್ಗದ ಉಪಯೋಗಕ್ಕೆ ನಿರ್ಮಿಸಿದ ಶೌಚಾಲಯಗಳು ಉಪಯೋಗಕ್ಕೆ ಬರುತ್ತಿಲ್ಲ. ಲಿಂಕ್ ರಸ್ತೆ, ತಾಲೂಕು ಕಚೇರಿ ರಸ್ತೆ ಅಗಲೀಕರಣಕ್ಕೆ ಸಚಿವ ಮಹದೇವಪ್ಪ ಶಿಫಾರಸ್ಸು ಮಾಡಿದ್ದರೂ, ಕಾಮಗಾರಿ ನೆನೆಗುದಿಗೆ ಬಿದ್ದಿದೆ. ಸ್ಮಶಾನಗಳ ಅಭಿವೃದ್ಧಿ ಆಗಬೇಕು. ಸ್ಮಶಾನಗಳು, ಪಟ್ಟಣ ವ್ಯಾಪ್ತಿಯ ಶಾಲಾ ಕಾಲೇಜು, ಸರ್ಕಾರಿ ಕಚೇರಿ ಆವರಣದಲ್ಲಿ ಗಿಡಗಳನ್ನು ನೆಟ್ಟು ಪರಿಸರಕ್ಕೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಕೃಷಿಕ ಸಮಾಜದ ಉಪಾಧ್ಯಕ್ಷ ಆಲಗೂಡು ನಾಗರಾಜು ಒತ್ತಾಯಿಸಿದರು.

ಪುರಸಭೆ ಮಾಜಿ ಅಧ್ಯಕ್ಷ ಸಿ.ಪ್ರಕಾಶ್, ಮಾಜಿ ಸದಸ್ಯರಾದ ಮಂಜುನಾಥ್, ಎನ್.ಲೋಕೇಶ್, ಡಾ.ಚಂದ್ರಶೇಖರ್, ಸಿ.ಮಹದೇವ್, ಎಪಿಎಂಸಿ ಮಾಜಿ ಅಧ್ಯಕ್ಷ ಮಹೇಶ್, ಕೃಷಿಕ ಸಮಾಜದ ಉಪಾಧ್ಯಕ್ಷ ಆಲಗೂಡು ನಾಗರಾಜು, ಪುರಿ ನಟೇಶ್, ರವೀಂದ್ರ, ಎಂ.ಮಿಥುನ್, ಆಲಗೂಡು ರಾಜು, ಕಚೇರಿ ವ್ಯವಸ್ಥಾಪಕ ಮಹೇಂದ್ರ, ಇಂಜಿನಿಯರ್ ಚಂದ್ರಶೇಖರ್, ಸಿದ್ದಪ್ಪ, ಆರೋಗ್ಯ ನಿರೀಕ್ಷಕಿ ಚಂಪಾಶ್ರೀ, ಹರೀಶ್ ಸೇರಿದಂತೆ ಇನ್ನಿತರರಿದ್ದರು.

2026–27ನೇ ಸಾಲಿಗೆ 5.50 ಕೋಟಿ ಆದಾಯ ನಿರೀಕ್ಷೆ

ತಿ.ನರಸೀಪುರ: ಸಾರ್ವಜನಿಕರು, ಜನಪ್ರತಿನಿಧಿಗಳು ಹಾಗೂ ಪ್ರಮುಖರ ಸಲಹೆ ಸ್ವೀಕರಿಸಿ ಮಾತನಾಡಿದ ಪುರಸಭೆ ಮುಖ್ಯಾಧಿಕಾರಿ ಸಿ.ಶ್ರೀನಿವಾಸ್, 2026–27ನೇ ಸಾಲಿನಲ್ಲಿ ಸ್ವಂತ ಸಂಪನ್ಮೂಲಗಳಿಂದ 5.50 ಕೋಟಿ ರೂ. ಆದಾಯ ನಿರೀಕ್ಷಿಸಲಾಗಿದ್ದು, ಕಳೆದ ಸಭೆಯಲ್ಲಿ ಸ್ವಾಗತ ಕಮಾನು ನಿರ್ಮಿಸಲು ಒತ್ತಾಯ ಕೇಳಿ ಬಂದ ಹಿನ್ನೆಲೆಯಲ್ಲಿ ಪುರಸಭೆಯಲ್ಲಿ ಉಳಿದಿರುವ 2.45 ಕೋಟಿ ರೂ. ಹಣದಲ್ಲಿ 2 ತಿಂಗಳ ಒಳಗಾಗಿ ಸ್ವಾಗತ ಕಮಾನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತದೆ. 2 ಕೋಟಿ ರೂ. ವೆಚ್ಚದಲ್ಲಿ ಟೆಂಡರ್ ಕರೆದು ಅಮೃತ ಯೋಜನೆಯಡಿ ಪುರಸಭೆ ವ್ಯಾಪ್ತಿಯ 5 ಕಡೆ ಉದ್ಯಾನವನ ಅಭಿವೃದ್ಧಿ ಪಡಿಸುವ ಜೊತೆಗೆ ಪುರಸಭೆ ಕಚೇರಿ ಎದುರು ಪಾರ್ಕ್ ನಿರ್ಮಿಸಲಾಗುವುದು ಎಂದರು.

ಈಗಿರುವ ಒಂದು ಶವಸಂಸ್ಕಾರ ವಾಹನದೊಂದಿಗೆ ಮತ್ತೊಂದು ವಾಹನ ಖರೀದಿಸಲಾಗುವುದು. ಆಟೋ ನಿಲ್ದಾಣಕ್ಕೆ ನೀರಿನ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಬೀದಿ ನಾಯಿ ಕಡಿತಕ್ಕೊಳಗಾದವರಿಗೆ 5 ಸಾವಿರ ರೂ. ಪರಿಹಾರ ಧನ ವಿತರಿಸಲಾಗುತ್ತಿದ್ದು, ನಾಯಿಗಳ ಸಂತಾನಹರಣ ಶಸ್ತ್ರಚಿಕಿತ್ಸೆಯನ್ನು ಟೆಂಟರ್ ಮೂಲಕ ನಿರ್ವಹಿಸಲಾಗುತ್ತಿದೆ. ನೂತನ ಸೇತುವೆ ಮೇಲೆ ವಿದ್ಯುತ್ ದೀಪ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ. ಆಯಕಟ್ಟಿನ ಸ್ಥಳಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಕೋಟಿ ರೂ. ವೆಚ್ಚದಲ್ಲಿ ಮಾಂಸ ಮಾರಾಟಗಾರರಿಗಾಗಿ ನಿರ್ಮಿಸಿರುವ ಮಳಿಗೆಗೆ ನೀರಿನ ವ್ಯವಸ್ಥೆ ಕಲ್ಪಿಸಿ ಮಾಂಸ ಮಾರಾಟಗಾರರನ್ನು ಅಲ್ಲಿಗೆ ಸ್ಥಳಾಂತರಿಸಲಾಗುವುದು. ಫುಟ್‌ಪಾತ್ ತೆರವುಗೊಳಿಸುವ ಸಂಬಂಧ ಕೆಲವು ಜನಪ್ರತಿನಿಧಿಗಳಿಂದಲೇ ವಿರೋಧವಿರುವ ಹಿನ್ನೆಲೆಯಲ್ಲಿ ಎಲ್ಲ ಜನಪ್ರತಿನಿಧಿಗಳು ತೆರವುಗೊಳಿಸುವ ವೇಳೆ ಸಹಕಾರ ನೀಡುವಂತೆ ಮನವಿ ಮಾಡಿದರು.

ಸಮಾಜಮುಖಿ ಕಾರ್ಯಗಳ ಮೂಲಕ ಅಪ್ಪು ಜೀವಂತ

ಮಾಜಿ ಶಾಸಕ ಕಳಲೆ ಕೇಶವಮೂರ್ತಿ



ನಂಜನಗೂಡಲ್ಲಿ ಪುನೀತ್‌ರಾಜ್‌ಕುಮಾರ್ ಹುಟ್ಟುಹಬ್ಬ ಆಚರಿಸಲಾಯಿತು.

ನಂಜನಗೂಡು, ಮಾ.17– ಕರ್ನಾಟಕ ರತ್ನ ಡಾ.ಪುನೀತ್ ರಾಜಕುಮಾರ್ ಭೌತಿಕವಾಗಿ ಮರೆಯಾಗಿದ್ದರೂ, ತಮ್ಮ ಸಮಾಜಮುಖಿ ಸೇವಾ ಕಾರ್ಯಗಳ ಮೂಲಕ ಜನರ ಮನಸ್ಸಿನಲ್ಲಿ ಉಳಿದಿದ್ದಾರೆ ಎಂದು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ತಿಳಿಸಿದರು.

ನಗರದ ಖಾಸಗಿ ಬಸ್ ನಿಲ್ದಾಣದ ಬಳಿ ಪುನೀತ್ ರಾಜಕುಮಾರ್ ಅಭಿಮಾನಿಗಳಿಂದ ಆಯೋಜಿಸಿದ್ದ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ ಹಾಗೂ ಗೀತ ಗಾಯನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮೇರು ವ್ಯಕ್ತಿತ್ವ ಹೊಂದಿದ್ದ ನಟ ಪುನೀತ್ ರಾಜಕುಮಾರ್ ಸಾಮಾಜಿಕ ಕಳಕಳಿಯುಳ್ಳ ಚಲನಚಿತ್ರಗಳಲ್ಲಿ ನಟಿಸುವ ಜೊತೆಗೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದರು. ವಿಶೇಷವಾಗಿ ಸಮಾಜದ ದುರ್ಬಲ ವರ್ಗದವರಿಗೆ ನೆರವಾಗುವ ಜೊತೆಗೆ ನೇತ್ರದಾನದ ಬಗ್ಗೆ ಜನರಿಗೆ ಜಾಗೃತಿ ಮೂಡಿಸಿದ್ದರು. ತಮ್ಮ ತಂದೆ ರಾಜಕುಮಾರ್ ಅವರಂತೆ ಸರಳತೆ ರೂಢಿಸಿಕೊಂಡು ತಮ್ಮ ನಡೆನುಡಿ ಮೂಲಕ ಜನರ ಮೆಚ್ಚುಗೆಗೆ ಪಾತ್ರರಾಗಿದ್ದರು. ಅವರ ಹುಟ್ಟುಹಬ್ಬವನ್ನು ರಾಜ್ಯಾದ್ಯಂತ ವಿವಿಧ ಸೇವಾ ಕಾರ್ಯಗಳ ಮೂಲಕ ಆಚರಿಸಲಾಗುತ್ತಿದ್ದು, ನಂಜನಗೂಡಿನಲ್ಲಿಯೂ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರದ ಮೂಲಕ ಆಚರಿಸುತ್ತಿರುವುದು ಪ್ರಶಂಸಾರ್ಹ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ವೇಳೆ ಜನ ಶಿಕ್ಷಣ ಆರೋಗ್ಯ ಸಂಸ್ಥೆ ವೈದ್ಯರ ತಂಡ ನೂರಾರು ಸಾರ್ವಜನಿಕರಿಗೆ ಆರೋಗ್ಯ ತಪಾಸಣೆ ನಡೆಸಿದರು. ಯೂನಿವರ್ಸಲ್ ವೆಲ್ಫೇರ್ ಬ್ಲಡ್ ಸೆಂಟರ್ ಸಂಸ್ಥೆ ನೇತೃತ್ವದಲ್ಲಿ ನಡೆದ ಸ್ವಯಂ ಪ್ರೇರಿತ ರಕ್ತದಾನ ಶಿಬಿರದಲ್ಲಿ 40ಕ್ಕೂ ಹೆಚ್ಚು ಮಂದಿ ರಕ್ತದಾನ ಮಾಡಿದರು. ಬೆಟ್ಟದ ಹೂವು ಪುನೀತ್ ರಾಜ್ ಕುಮಾರ್ ಅಭಿಮಾನಿ ಬಳಗದ ಕಲಾವಿದರು ಅಪ್ಪು ಗೀತೆ ಗಾಯನದ ಮೂಲಕ ವೀಕ್ಷಕರನ್ನು ರಂಜಿಸಿದರು. ಬಳಿಕ ನಡೆದ ಅನ್ನ ಸಂತರ್ಪಣೆಯಲ್ಲಿ ಸಾವಿರಾರು ಮಂದಿ ಭಾಗಿಯಾಗಿದ್ದರು.

ಈ ವೇಳೆ ಪುನೀತ್ ರಾಜಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ನಾರಾಯಣ್, ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗ ರಾಜ್ಯ ಕಾರ್ಯದರ್ಶಿ ಎನ್.ಟಿ. ಗಿರೀಶ್, ತಾಲೂಕು ಈಡಿಗರ ಸಂಘದ ಉಪಾಧ್ಯಕ್ಷ ಜಿ.ಕೆ.ಮಂಜುನಾಥ್, ಸ್ಕಂದ ವೆಂಕಟ್, ಜನ ಶಿಕ್ಷಣ ಆರೋಗ್ಯ ಸಂಸ್ಥೆ ಡಾ.ಪ್ರಕಾಶ್, ಮಂಜುನಾಥ್‌ಗೌಡ, ಸಿದ್ದರಾಜು, ನಂಜನಗೂಡು ಕೇಶವಮೂರ್ತಿ, ರವಿ, ಶಿವಣ್ಣ, ಶಂಕರ್, ಚಾಮರಾಜನಗರ ನಂಜಪ್ಪ, ಅಶೋಕಪುರಂ ಶಂಕರ್, ಚಂದ್ರು ಮತ್ತಿತರರು ಭಾಗವಹಿಸಿದ್ದರು.

ಕಾಡಂಚಿನ ಜನರಿಗಾಗಿ ಆರೋಗ್ಯ ತಪಾಸಣಾ ಶಿಬಿರ

ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್



ಎನ್.ಬೇಗೂರಲ್ಲಿ ಬೃಹತ್ ಆರೋಗ್ಯ ತಪಾಸಣೆ ಶಿಬಿರ ನಡೆಯಿತು.

ಹೆಚ್.ಡಿ.ಕೋಟೆ, ಮಾ.17– ಕಾಡಂಚಿನ ಗ್ರಾಮೀಣ ಜನರ ಅನುಕೂಲಕ್ಕಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ತಿಳಿಸಿದರು.

ತಾಲೂಕಿನ ಎನ್.ಬೇಗೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿ ಮೈಸೂರು, ಜಿಲ್ಲಾ ಅಸಾಂಕ್ರಾಮಿಕ ರೋಗಗಳ ನಿಯಂತ್ರಣಾಧಿಕಾರಿ ಕಚೇರಿ ಮೈಸೂರು, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಹೆಚ್.ಡಿ. ಕೋಟೆ, ಪ್ರಾಥಮಿಕ ಆರೋಗ್ಯ ಕೇಂದ್ರ ಎನ್.ಬೇಗೂರು ಸಹಯೋಗದಲ್ಲಿ ಆಯೋಜಿಸಿದ್ದ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಕಾಡಂಚಿನ ಎನ್.ಬೇಗೂರು ಗ್ರಾಪಂ ವ್ಯಾಪ್ತಿಯಲ್ಲಿ ಸಾಕಷ್ಟು ಬಡ ಕುಟುಂಬಗಳು ವಾಸವಿದ್ದು, ಅದರಲ್ಲೂ ಆದಿವಾಸಿಗಳು ವಾಸವಾಗಿದ್ದಾರೆ. ಅವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದರು.

ಶಿಬಿರದಲ್ಲಿ 250ಕ್ಕೂ ಹೆಚ್ಚು ಮಂದಿ ತಪಾಸಣೆಗೆ ಒಳಪಟ್ಟರು. ಈ ವೇಳೆ ಫಿಜಿಷಿಯನ್ ಡಾ.ವಿಜಯ್ ಕುಮಾರ್, ಮನೋರೋಗ ತಜ್ಞೆ ಡಾ.ಮಂಜುಶ್ರೀ, ವೈದ್ಯಾಧಿಕಾರಿ ಡಾ.ಶಾಲಿನಿ, ಕಣ್ಣಿನ ತಜ್ಞ ಡಾ.ರಾಜಶೇಖರ್, ಡಾ.ಅರ್ಚನಾ, ಫ್ಲೋರೋಸಿಸ್ ತಜ್ಞರಾದ ಯಾಕುತ್ ನವೀನ್, ಗ್ರಾಪಂ ಸದಸ್ಯರಾದ ಪ್ರಭಾಕರ್, ಪಿಡಿಓ ಕೆಂಪರಾಜು, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಪುನೀತ್, ಮುಖಂಡರಾದ ಸುರೇಂದ್ರ, ಭೈರೇಗೌಡ, ವಿಜಯ್ ಕುಮಾರ್, ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಚೇರಿ ಸಿಬ್ಬಂದಿ ಇದ್ದರು.

ತಂಬಾಕು ಬೆಳೆಗಾರರ ಸಂಕಷ್ಟ ನಿವಾರಣೆಗೆ ಕ್ರಮ ಕೈಗೊಳ್ಳಿ

ರಾಜ್ಯ ಸರ್ಕಾರಕ್ಕೆ ಶಾಸಕ ಜಿ.ಡಿ.ಹರೀಶ್‌ಗೌಡ ಒತ್ತಾಯ



ಹುಣಸೂರು, ಮಾ.17– ರಾಜ್ಯದ ತಂಬಾಕು ಬೆಳೆಗಾರರು ಎದುರಿಸುತ್ತಿರುವ ತೀವ್ರ ಸಂಕಷ್ಟ ಮತ್ತು ಬೆಲೆ ಕುಸಿತದಿಂದ ಉಂಟಾಗಿರುವ ಅನ್ಯಾಯ ಸರಿಪಡಿಸುವಂತೆ ಶಾಸಕ ಜಿ.ಡಿ.ಹರೀಶ್ ಗೌಡ ಸರ್ಕಾರವನ್ನು ಒತ್ತಾಯಿಸಿದರು.

ವಿಧಾನಸಭಾ ಅಧಿವೇಶನದಲ್ಲಿ ಮಾತನಾಡಿದ ಅವರು, ಪ್ರಸಕ್ತ ಸಾಲಿನಲ್ಲಿ ತಂಬಾಕು ಬೆಳೆ ತೀವ್ರ ಕುಸಿತ ಕಂಡಿದ್ದು, ರೈತರು ಆರ್ಥಿಕವಾಗಿ ಕಂಗಾಲಾಗಿದ್ದಾರೆ. ತಂಬಾಕು ಬೆಳೆಗೆ ಬೆಂಬಲ ಬೆಲೆ ನೀಡುವ ಜೊತೆಗೆ ಪ್ರಧಾನಮಂತ್ರಿ ಫಸಲ್ ಬೀಮಾ ಯೋಜನೆಗೆ ಸೇರಿಸುವಂತೆ ಕೃಷಿ ಸಚಿವರ ಗಮನಕ್ಕೆ ತರಲಾಗಿದೆ ಎಂದರು.

ರಾಜ್ಯದಲ್ಲಿ 50 ಸಾವಿರ ರೈತ ಕುಟುಂಬಗಳು ತಂಬಾಕು ಬೆಳೆಯುತ್ತಿದ್ದು, ಪಿರಿಯಾಪಟ್ಟಣ, ಹುಣಸೂರು, ಹೆಚ್.ಡಿ.ಕೋಟೆ, ಕೆ.ಆರ್.ನಗರ, ಅರಕಲಗೂಡು ಭಾಗಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತಂಬಾಕು ಬೆಳೆಯಲಾಗುತ್ತಿದೆ. ಗುಣಮಟ್ಟದ ಬೆಳೆ ಇದ್ದರೂ, ಬೆಲೆ ತೀವ್ರವಾಗಿ ಕುಸಿದಿರುವುದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹುಣಸೂರು ತಾಲೂಕಿನ ಹಿರಿಕ್ಯಾತನಹಳ್ಳಿಯ ಮಹದೇವ ಎಂಬ ರೈತ ಆತ್ಮಹತ್ಯೆಗೆ ಯತ್ನಿಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಘಟನೆ ಪರಿಸ್ಥಿತಿಯ ಗಂಭೀರತೆಯನ್ನು ತೋರಿಸುತ್ತದೆ ಎಂದು ಅವರು ವಿಷಾದ ವ್ಯಕ್ತಪಡಿಸಿದರು.

ಜನವರಿಯಲ್ಲಿ ಪ್ರತಿ ಕೆಜಿ ತಂಬಾಕಿಗೆ 278 ರೂ. ಇದ್ದ ಬೆಲೆ, ಫೆಬ್ರವರಿಯಲ್ಲಿ 262 ರೂ. ಮತ್ತು ಮಾರ್ಚ್‌ನಲ್ಲಿ 243 ರೂ.ಗಳಿಗೆ ಇಳಿದಿದ್ದು, ಕೇವಲ 2 ತಿಂಗಳಲ್ಲಿ 35 ರೂ. ಕುಸಿತವಾಗಿದೆ. ಪ್ರಸ್ತುತ 45 ರೂ.ವರೆಗೆ ಬೆಲೆ ಇಳಿಕೆಯಾಗಿದೆ. ಆದರೆ ಒಬ್ಬ ರೈತ ಪ್ರತಿ ಕೆಜಿ ತಂಬಾಕು ಬೆಳೆಯಲು ಕನಿಷ್ಠ 185 ರೂ. ವೆಚ್ಚವಾಗುತ್ತಿದೆ ಎಂದು ಹೇಳಿದರು.

ಕೇಂದ್ರ ಸರ್ಕಾರ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನೀಡುತ್ತಿದ್ದರೂ, ತಂಬಾಕು ಬೆಳೆ ಅದರಲ್ಲಿ ಸೇರಿಲ್ಲ ಎಂದು ಕೃಷಿ ಸಚಿವರು ತಿಳಿಸಿದ್ದಾರೆ. ಆದರೆ 14 ಮುಂಗಾರು ಮತ್ತು 6 ಹಿಂಗಾರು ಬೆಳೆಗಳಿಗೆ ಬೆಂಬಲ ಬೆಲೆ ಘೋಷಿಸಿರುವುದನ್ನು ಅವರು ಉಲ್ಲೇಖಿಸಿದರು. 2015ರಲ್ಲಿ ಆಂಧ್ರ ಪ್ರದೇಶದಲ್ಲಿ ಇದೇ ರೀತಿ ಪರಿಸ್ಥಿತಿ ಉಂಟಾದಾಗ, ಅಲ್ಲಿನ ರಾಜ್ಯ ಸರ್ಕಾರ ಕೇಂದ್ರದ ಸಹಯೋಗ ದಲ್ಲಿ ಪ್ರತಿ ಕೆಜಿ ತಂಬಾಕಿಗೆ 5 ರೂ. ಪರಿಹಾರ ನೀಡಿದ ಉದಾಹರಣೆ ನೀಡಿದ ಅವರು, ಈ ಬಾರಿ ರಾಜ್ಯದಲ್ಲಿ 85 ಮಿಲಿಯನ್ ಕೆಜಿ ತಂಬಾಕು ಉತ್ಪಾದನೆಯಾಗಿರುವ ಹಿನ್ನೆಲೆ, ಆಂಧ್ರ ಪ್ರದೇಶ ಮಾದರಿ ಪ್ರತಿ ಕೆಜಿಗೆ 25 ರಿಂದ 35 ರೂ. ವರೆಗೆ ಪರಿಹಾರ ನೀಡಿ ಖರೀದಿ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಿದರು.

ಎಲ್ಲಾ ವಿಷಯಗಳಿಗೂ ಕೇಂದ್ರ ಸರ್ಕಾರವನ್ನೇ ನಿರೀಕ್ಷಿಸದೆ, ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು. ಈ ಸಂಬಂಧ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಕೇಂದ್ರ ಸರ್ಕಾರದ ಗಮನಕ್ಕೂ ವಿಷಯ ತಂದಿರುವುದಾಗಿ ಹೇಳಿದ ಅವರು, ರಾಜ್ಯ ಸರ್ಕಾರ ತಂಬಾಕು ಖರೀದಿಸಲು ಸಾಧ್ಯವಾಗದಿದ್ದಲ್ಲಿ, ಕನಿಷ್ಠ ರೈತರ ಸಾಲ ಮನ್ನಾ ಮಾಡುವಂತೆ ಆಗ್ರಹಿಸಿದ ಅವರು, ಬೆಳೆ ವಿಮೆ ಮಾಡಿಸುವುದರ ಬಗ್ಗೆಯೂ ಕ್ರಮವಹಿಸುವಂತೆ ಮನವಿ ಮಾಡಿದರು.

ಲಕ್ಷ್ಮಿ ವೆಂಕಟೇಶ್ವರ ದೇವಾಲಯ ಉದ್ಘಾಟನೆ



ಕಂಪಲಾಪುರ, ಮಾ.17– ಇಲ್ಲಿಗೆ ಸಮೀಪದ ಬೋರೆಹೊಸಹಳ್ಳಿ ಗೇಟ್ ಬಳಿ ನೂತನ ಲಕ್ಷ್ಮಿ ವೆಂಕಟೇಶ್ವರ ದೇವಾಲಯ ಲೋಕಾರ್ಪಣೆಗೊಳಿಸಲಾಯಿತು.

ಮೈಸೂರು ಒಂಟಿಕೊಪ್ಪಲಿನ ವೆಂಕಟೇಶ್ವರ ದೇವಾಲಯದ ಪ್ರಧಾನ ಅರ್ಚಕ ಸತ್ಯನಾರಾಯಣ ಮತ್ತು ತಂಡದಿಂದ ಪೂಜಾ ವಿಧಿ ವಿಧಾನಗಳು ನೆರವೇರಿದವು. ಭಾನುವಾರ ವಿಗ್ರಹಗಳ ಪ್ರತಿಷ್ಠಾಪನೆ ನಂತರ ಅನ್ನ ಸಂತರ್ಪಣೆ ನೆರವೇರಿತು. ಸೋಮವಾರ ಸಂಜೆ ವಿದ್ಯುತ್ ದೀಪಾಲಂಕಾರದ ಮಂಟಪದಲ್ಲಿ ಲಕ್ಷ್ಮಿ ದೇವಿ ಹಾಗೂ ವೆಂಕಟೇಶ್ವರಮೂರ್ತಿಗಳನ್ನು ಚಿಲ್ಕುಂದ ಮುಖ್ಯ ರಸ್ತೆ ಹಾಗೂ ಕಂಪ್ಲಾಪುರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಶಿಲ್ಪಿ ತಮಿಳುನಾಡಿನ ರಾಜಕುಮಾರ್ ಅವರನ್ನು ದೇವಾಲಯದಿಂದ ಸನ್ಮಾನಿಸಲಾಯಿತು. ಭಕ್ತರು ದೇವರಿಗೆ ಪೂಜೆ ಸಲ್ಲಿಸಿ ಪುನೀತರಾದರು. ಈ ವೇಳೆ ಗುಡ್ಡಪ್ಪ ವಿನಯ್, ಜಯರಾಮ್, ಶ್ರೀನಿವಾಸ್ ಇತರರಿದ್ದರು.

ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ: ಸಿದ್ಧತೆ ಪೂರ್ಣ

ಕೆ.ಆರ್.ನಗರ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಕೃಷ್ಣಪ್ಪ ಮಾಹಿತಿ



ಎಸ್‌ಎಸ್‌ಎಲ್‌ಸಿ ಪರೀಕ್ಷೆ ಕೇಂದ್ರಗಳಿಗೆ ಬಿಇಓ ಆರ್.ಕೃಷ್ಣಪ್ಪ ಭೇಟಿ ನೀಡಿ ಪರಿಶೀಲಿಸಿದರು.

ಕೆ.ಆರ್.ನಗರ, ಮಾ.17– ಇಂದಿನಿಂದ (ಬುಧವಾರ) ಆರಂಭವಾಗುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಕಲ ಸಿದ್ಧತೆ ಕೈಗೊಳ್ಳಲಾಗಿದ್ದು, ಎಲ್ಲಾ ಮುಂಜಾಗ್ರತಾ ಕ್ರಮ ವಹಿಸಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಕೃಷ್ಣಪ್ಪ ತಿಳಿಸಿದರು.

ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಪರೀಕ್ಷಾಪೂರ್ವ ಸಿದ್ಧತೆ ಸಂಬಂಧ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿ ಶಿಕ್ಷಕರಿಗೆ ಸಲಹೆ ಸೂಚನೆ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ ಪರೀಕ್ಷೆಯನ್ನು ಸುಗಮ ಹಾಗೂ ನಿಯಮಾನುಸಾರವಾಗಿ ನಡೆಸಲು ಅಗತ್ಯ ಎಲ್ಲಾ ಪೂರ್ವ ಸಿದ್ಧತೆ ಕೈಗೊಳ್ಳಲಾಗಿದೆ. ಪ್ರಸಕ್ತ ಸಾಲಿನಲ್ಲಿ ತಾಲೂಕಿನಲ್ಲಿ 35 ಸರ್ಕಾರಿ, 6 ವಸತಿ ಶಾಲೆ, 13 ಅನುದಾನಿತ ಶಾಲೆ, 18 ಅನುದಾನರಹಿತ ಒಟ್ಟು 72 ಪ್ರೌಢ ಶಾಲೆಗಳಿದ್ದು, 11 ಪರೀಕ್ಷಾ ಕೇಂದ್ರಗಳು, 130 ಕೊಠಡಿಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯಲಿವೆ. ಒಟ್ಟು 2979 ಮಕ್ಕಳು ಪರೀಕ್ಷೆ ಬರೆಯಲಿದ್ದಾರೆ. ಇದರಲ್ಲಿ ಹೊಸದಾಗಿ ಪರೀಕ್ಷೆ ಬರೆಯುವ ಬಾಲಕರು 1348, ಬಾಲಕಿಯರು 1340, ಇನ್ನೂ ಪುನರಾವರ್ತಿತ ಬಾಲಕರು 161, ಬಾಲಕಿಯರು 130 ಮಂದಿ ಇದ್ದಾರೆ. 220 ಕೊಠಡಿ ಮೇಲ್ವಿಚಾರಕರು, 75 ಸಿಬ್ಬಂದಿ ವರ್ಗದವರನ್ನು ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾಗಿದೆ ಎಂದರು.

ತಾಲೂಕಿನ ಎಲ್ಲಾ ಪರೀಕ್ಷಾ ಕೇಂದ್ರಗಳನ್ನು ಪರಿಶೀಲಿಸಿ ಪರೀಕ್ಷೆಗೆ ಅಗತ್ಯವಾದ ಮೇಜು–ಕುರ್ಚಿ, ಕುಡಿಯುವ ನೀರು, ಗಾಳಿ ಬೆಳಕು ಹಾಗೂ ಶೌಚಾಲಯ ವ್ಯವಸ್ಥೆ ಕಲ್ಪಿಸಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ, ಭದ್ರತಾ ವ್ಯವಸ್ಥೆ ಮತ್ತು ಶಿಸ್ತು ಕಾಪಾಡುವ ಕ್ರಮ ಕೈಗೊಳ್ಳಲಾಗಿದೆ. ಪರೀಕ್ಷೆ ನಿರ್ವಹಣೆಗೆ ಸಂಬಂಧಿಸಿದಂತೆ ಮುಖ್ಯ ಅಧೀಕ್ಷಕರು, ಕೊಠಡಿ ಮೇಲ್ವಿಚಾರಕರು ಹಾಗೂ ಸಿಬ್ಬಂದಿಗೆ ಮಾರ್ಗದರ್ಶನ ಸಭೆ ನಡೆಸಿ ಅಗತ್ಯ ಸೂಚನೆಗಳನ್ನು ನೀಡಲಾಗಿದೆ. ವಿದ್ಯಾರ್ಥಿಗಳಿಗೆ ಪರೀಕ್ಷಾ ದಿನಗಳಲ್ಲಿ ಯಾವುದೇ ತೊಂದರೆ ಆಗದಂತೆ ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಚೆಸ್ಕಾಂ, ಕೆಎಸ್‌ಆರ್‌ಟಿಸಿ ಇಲಾಖೆಗಳ ಸಮನ್ವಯ ಮಾಡಲಾಗಿದೆ ಎಂದು ತಿಳಿಸಿದರು.

ಉತ್ತಮ ಫಲಿತಾಂಶ ಪಡೆಯುವ ನಿಟ್ಟಿನಲ್ಲಿ ಎಲ್ಲಾ ಪ್ರೌಢಶಾಲೆಗಳ ಮುಖ್ಯ ಶಿಕ್ಷಕರು ಮತ್ತು ವಿಷಯ ಶಿಕ್ಷಕರೊಂದಿಗೆ ಸಭೆ, ಕಾರ್ಯಾಗಾರಗಳನ್ನು ನಡೆಸಿ ಅಗತ್ಯ ಮಾರ್ಗದರ್ಶನ ನೀಡಲಾಗಿದೆ. ವಿದ್ಯಾರ್ಥಿಗಳ ಕಲಿಕೆ ಮಟ್ಟವನ್ನು ಗಮನದಲ್ಲಿಟ್ಟುಕೊಂಡು ಪುನರಾವರ್ತನಾ ತರಗತಿಗಳು, ವಿಶೇಷ ತರಗತಿಗಳನ್ನು ನಡೆಸಲಾಗಿದೆ. ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ಪ್ರೇರಣಾ ಕಾರ್ಯಕ್ರಮಗಳು, ಸಲಹಾ ಕಾರ್ಯಕ್ರಮ ನಡೆಸಲಾಗಿದೆ. ಪರೀಕ್ಷೆ ಸಮಯದಲ್ಲಿ ವಿದ್ಯಾರ್ಥಿಗಳು ಒತ್ತಡಕ್ಕೆ ಒಳಗಾಗದಂತೆ ಹಾಗೂ ವಿಷಯವಾರು ಸಂದೇಹಗಳನ್ನು ನಿವಾರಿಸಲು ಮಾನ್ಯ ಉಪನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ ಇವರಿಂದ ಮಕ್ಕಳ ಸಹಾಯವಾಣಿ ಆರಂಭಿಸಲಾಗಿದೆ. ಈ ಎಲ್ಲಾ ಕ್ರಮಗಳ ಮೂಲಕ ತಾಲೂಕಿನ ಫಲಿತಾಂಶ ಜಿಲ್ಲೆಗೆ ಮೊದಲ ಮೂರು ಸ್ಥಾನದೊಳಗೆ ಪಡೆಯುವ ನಿರೀಕ್ಷೆ ಹೊಂದಿದ್ದೇವೆ ಎಂದು ಮಾಹಿತಿ ನೀಡಿದರು.

> "ತಾಲೂಕಿನಲ್ಲಿ 11 ಪರೀಕ್ಷಾ ಕೇಂದ್ರಗಳಿದ್ದು, ಸಿಸಿಟಿವಿ ಮತ್ತು ವೆಬ್‌ಕ್ಯಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದೆ. ಪರೀಕ್ಷೆಗಳು ಸುಸೂತ್ರವಾಗಿ ನಡೆಯಲು 11 ಮಂದಿ ಮುಖ್ಯ ಅಧೀಕ್ಷಕರು, 11 ಮಂದಿ ಪ್ರಶ್ನೆಪತ್ರಿಕೆ ಮತ್ತು ಉತ್ತರ ಪತ್ರಿಕೆ ಅಭಿರಕ್ಷಕರ ಸ್ಥಾನಿಕ ಜಾಗೃತದಳ ಸಿಬ್ಬಂದಿ, ಅಗತ್ಯಕ್ಕೆ ತಕ್ಕಂತೆ ಸ್ವಾಧೀನಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಪ್ರಶ್ನೆ ಪತ್ರಿಕೆಗಳನ್ನು ಉಪಖಜಾನೆಯಿಂದ ಪರೀಕ್ಷಾ ಕೇಂದ್ರಗಳಿಗೆ ಸಕಾಲದಲ್ಲಿ ಭದ್ರತೆಯಿಂದ ರವಾನಿಸಲು ಹಾಗೂ ಉತ್ತರ ಪತ್ರಿಕೆಗಳನ್ನು ಹಿಂಪಡೆಯಲು ಮಾರ್ಗಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. – ಆರ್.ಕೃಷ್ಣಪ್ಪ, ಬಿಇಓ.

ವಿಜೃಂಭಣೆಯ ಕಟ್ಟೆ ಮಾರಮ್ಮ ಜಾತ್ರಾ ಮಹೋತ್ಸವ



ಸರಗೂರಿನ ಹಂಚೀಪುರ ಗ್ರಾಮದಲ್ಲಿ ಕಟ್ಟೆ ಮಾರಮ್ಮನವರ ಜಾತ್ರೆ ಮಹೋತ್ಸವ ನಡೆಯಿತು.

ಸರಗೂರು, ಮಾ.17– ತಾಲೂಕಿನ ಹಂಚೀಪುರದಲ್ಲಿ ಗ್ರಾಮದೇವತೆ ಕಟ್ಟೆ ಮಾರಮ್ಮನವರ ಜಾತ್ರಾ ಮಹೋತ್ಸವ ಮಂಗಳವಾರ ವಿಜೃಂಭಣೆಯಿಂದ ನಡೆಯಿತು.

ಜಾತ್ರಾ ಮಹೋತ್ಸವ ಅಂಗವಾಗಿ ಅಮ್ಮನವರಿಗೆ ವಿವಿಧ ಬಗೆಯ ಹೂವಿನಿಂದ ಅಲಂಕಾರ ಮಾಡಲಾಗಿತ್ತು. ದೇವರ ಗುಡಿಯನ್ನು ಹಸಿರು ತೋರಣದಿಂದ ಮಧುವಣಗಿತ್ತಿಯಂತೆ ಸಿಂಗರಿಸಲಾಗಿತ್ತು.

ದೇವಿ ಉತ್ಸವಮೂರ್ತಿಯನ್ನು ಗುಡಿಯಲ್ಲಿ ಪ್ರತಿಷ್ಠಾಪಿಸಿ ವಿಶೇಷ ಪೂಜೆ ನೆರವೇರಿಸಲಾಯಿತು. ಭಕ್ತರು ಈರುಳ್ಳಿ ಸರವನ್ನು ಹೊತ್ತು ತಂದು ಹರಕೆ ತೀರಿಸಿದರು. ನಂತರ ಮಹಾ ಮಂಗಳಾರತಿ ಮಾಡಲಾಯಿತು. ಗ್ರಾಮದ ಶ್ರೀಸಿದ್ದ ಮಲ್ಲೇಶ್ವರ ಪಟ್ಟದ ಮಠದಿಂದ ಅಮ್ಮನವರ ಹೂವಿನ ಪಲ್ಲಕ್ಕಿ ಉತ್ಸವವನ್ನು ಬಸವನೊಂದಿಗೆ ನಡೆಸಲಾಯಿತು.

ನಂದಿ ಧ್ವಜ, ವೀರಗಾಸೆ ನೃತ್ಯ, ಸತ್ತಿಗೆ, ಮಂಗಳವಾದ್ಯ, ನಗಾರಿ ಇನ್ನಿತರ ಜಾನಪದ ಕಲಾ ಪ್ರಕಾರಗಳು ಉತ್ಸವಕ್ಕೆ ಮೆರಗು ನೀಡಿದವು. ಶ್ರೀಸಿದ್ದ ಮಲ್ಲೇಶ್ವರ ಮಠದ ಚನ್ನಬಸವ ಸ್ವಾಮೀಜಿ, ಕಿರಿಯ ತೋಂಟದಾರ್ಯ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಹಂಚೀಪುರದ ಗೌಡಿಕೆ, ಯಜಮಾನರು, ಮುಖಂಡರು ಸೇರಿದಂತೆ ಅಕ್ಕಪಕ್ಕದ ಗ್ರಾಮಸ್ಥರು ಹಾಗೂ ಸಾವಿರಾರು ಭಕ್ತರು ಹಾಜರಿದ್ದರು.

ಮೈಸೂರು ಮಿತ್ರ

ಇರಾನ್ ಮೇಲಿನ ಇಸ್ರೇಲ್-ಅಮೆರಿಕಾ ಯುದ್ಧ ಒಂದು ರೀತಿ ಭಯೋತ್ಪಾದನೆ!

▶ಇಂತಹ ಯುದ್ಧಕೋರತನ ಪ್ರತಿಯೊಬ್ಬರು ವಿರೋಧಿಸಬೇಕು

▶ಇರಾನ್‌ನ ಕಂದಮ್ಮಗಳ ಬಲಿ ಪಡೆದದ್ದು ಅಮಾನವೀಯ ಕೃತ್ಯ

ಚಿಂತಕ ಪ್ರೊ. ಬಂಜಗೆರೆ ಜಯಪ್ರಕಾಶ್ ಅಭಿಮತ



ಮಾನಸಗಂಗೋತ್ರಿಯ ಸಮಾಜ ಕಾರ್ಯ ಅಧ್ಯಯನ ವಿಭಾಗದಲ್ಲಿ ಅಂತರರಾಷ್ಟ್ರೀಯ ಸಮಾಜ ಕಾರ್ಯ ದಿನಾಚರಣೆ ಅಂಗವಾಗಿ ಪ್ರೊ.ಸಿ.ಪಾರ್ವತಮ್ಮ ನೆನಪಿನ ಉಪನ್ಯಾಸ ಕಾರ್ಯಕ್ರಮಕ್ಕೆ ಚಿಂತಕ ಪ್ರೊ.ಬಂಜಗೆರೆ ಜಯಪ್ರಕಾಶ ಚಾಲನೆ ನೀಡಿದರು.

ಮೈಸೂರು, ಮಾ.17(ಎಂಟಿವೈ)- ಅಮಾನವೀಯವಾಗಿರುವ ಯುದ್ಧ ಕೋರತನ ಜಗತ್ತಿಗೆ ಅಪಾಯಕಾರಿಯಾಗಿದ್ದು, ಸೀಮಾತೀತವಾಗಿ ಯುದ್ಧವನ್ನು ಎಲ್ಲರೂ ವಿರೋಧಿಸಬೇಕಾದ ಅನಿವಾರ್ಯತೆ ಇದೆ ಎಂದು ಚಿಂತಕ ಪ್ರೊ.ಬಂಜಗೆರೆ ಜಯಪ್ರಕಾಶ ಅಭಿಪ್ರಾಯಪಟ್ಟಿದ್ದಾರೆ.

ಮಾನಸಗಂಗೋತ್ರಿಯ ಸಮಾಜ ಕಾರ್ಯ ಅಧ್ಯಯನ ವಿಭಾಗದಲ್ಲಿ ಬೋಧಿವೃಕ್ಷ ಅಭಿವೃದ್ಧಿ ಸಂಸ್ಥೆ ಅಂತರರಾಷ್ಟ್ರೀಯ ಸಮಾಜಕಾರ್ಯ ದಿನಾಚರಣೆ ಅಂಗವಾಗಿ ಮಂಗಳವಾರ ಆಯೋಜಿಸಿದ್ದ ಪ್ರೊ.ಸಿ.ಪಾರ್ವತಮ್ಮ ನೆನಪಿನ ಉಪನ್ಯಾಸದಲ್ಲಿ ಮಾತನಾಡಿದ ಅವರು, ಇರಾನ್ ಶಾಲೆಯ ಮೇಲೆ ಬಾಂಬ್ ಹಾಕಿ ಮುಗ್ಧ ಕಂದಮ್ಮಗಳನ್ನು ಕೊಂದ ಇಸ್ರೇಲ್ ಮತ್ತು ಅಮೆರಿಕ ಕ್ರೂರಿಯೇ, ಅದು ಭಯೋತ್ಪಾದನೆಯೇ ಆಗಿದೆ. ಯುದ್ಧೋನ್ಮಾದ ಮೂಡಿಸುತ್ತಿರುವ, ಮಾರುಕಟ್ಟೆ- ಹಣದ ಪಿಪಾಸಿನ ಬಂಡವಾಳ ಶಾಹಿ ದಾಳಿಕೋರ ದೇಶಗಳ ವಿರುದ್ಧ ಭಾರತವು ತನ್ನ ಆಲಿಪ್ತ ವಿದೇಶಾಂಗ ನೀತಿ ಪ್ರದರ್ಶಿಸಬೇಕು. ಯುದ್ಧ ನಿಲ್ಲಿಸಬೇಕೆಂಬ ವಿವೇಕದ ಮಾತನ್ನು ಹೇಳಬೇಕು ಎಂದು ಒತ್ತಾಯಿಸಿದರು.

ದ್ವೇಷಪೂರಿತವಾದ ಯುದ್ಧವಾಗಲಿ, ಚಳವಳಿಯಾಗಲಿ ಸಮಾಜವನ್ನು ಎಂದಿಗೂ ಒಗ್ಗೂಡಿಸಲು ಸಾಧ್ಯವಿಲ್ಲ. ಬುದ್ಧನ ಪ್ರಜ್ಞೆ, ಕರುಣೆ ಮತ್ತು ಮೈತ್ರಿ ಮಾತ್ರವೇ ಪ್ರಪಂಚವನ್ನು ಒಗ್ಗೂಡಿಸುತ್ತದೆ. ಮಾನವೀಯತೆ, ಕಾರುಣ್ಯವನ್ನು ಮನುಷ್ಯ ಸಮಾಜದ ಎದೆಯೊಳಗೆ ನೆಲೆಗೊಳಿಸಬೇಕು. ನೊಂದವರಿಗೆ ಕರುಣಾ ಪ್ರಜ್ಞೆ, ಸಹಾನುಭೂತಿ ಪ್ರಕಟಿಸಬೇಕು. ಆಗ, ಸಮಾಜದಲ್ಲಿ ಸಹಜವಾಗಿ ಸಂತೋಷದಾಯಕ ವಾತಾವರಣ ನೆಲೆಗೊಂಡು ನೆಮ್ಮದಿ ತರುತ್ತದೆ. ಬುದ್ಧ ಭಾರತದ ಮೊದಲ ವೃತ್ತಿಪರ ಸಮಾಜಕಾರ್ಯ ಪ್ರವರ್ತಕ. ಧರ್ಮ ಸ್ಥಾಪಿಸಲಿಲ್ಲ. ಬಿಕ್ಕು ಸಂಘಗಳನ್ನು ಸ್ಥಾಪಿಸುವ ಮೂಲಕ ಸಮಾಜ ಸೇವಾ ಕಾರ್ಯ ಆರಂಭಿಸಿದನು. ಯುದ್ಧವೇ ಬೇಕಿರುವ, ಹಣದ ಪಿಪಾಸುಗಳ ನಡುವೆ ಹಾಡು ಹೇಳುವ ಕಲಾವಿದರು, ಮಕ್ಕಳನ್ನು ಆರೈಕೆ ಮಾಡುತ್ತಿರುವ ಮಹಿಳೆಯರು, ಶಾಲೆಯಲ್ಲಿ ಕನಸು ಕಾಣುತ್ತಿರುವ ಕಂದಮ್ಮಗಳ ಪರವಾಗಿ ವಿಶ್ವವು ನಿಲ್ಲಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಬೋಧಿವೃಕ್ಷ ಸಂಸ್ಥೆಯ ಅಧ್ಯಕ್ಷ ಎಂ.ಎಸ್.ಚಂದ್ರ ಮಾತನಾಡಿ, ಪ್ರೀತಿ ಮತ್ತು ಕರುಣೆ ಮಾತ್ರವೇ ಮಾನವ ಸಮಾಜವನ್ನು ಒಗ್ಗೂಡಿಸಬಲ್ಲದು. ಸಮಾಜ ಸೇವೆಯ ಅಡಿಪಾಯ ಇದರ ಮೇಲೆ ನಿಂತಿದೆ ಎಂದರು.


ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಮಾತನಾಡಿ, ಶಿಕ್ಷಣ ಪಡೆದವರು ತಮ್ಮ ಗ್ರಾಮಗಳಿಗೆ ತೆರಳಿ ಅಲ್ಲಿರುವ ಸಣ್ಣ ಸಣ್ಣ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ಮಾಡಬೇಕು. ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಅಸ್ಪೃಶ್ಯತೆ ಜೀವಂತವಾಗಿದೆ. ಮಹಿಳೆಯರ ಮೇಲಿನ ಶೋಷಣೆ ನಿಂತಿಲ್ಲ. ರೈತರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಭೂ ಸಮಸ್ಯೆಗಳು ಬಗೆಹರಿದಿಲ್ಲ. ಯುವ ಜನರು ಉದ್ಯೋಗಕ್ಕಾಗಿ ಹೋರಾಟ ಮಾಡಬೇಕಾದ ಪರಿಸ್ಥಿತಿಯಲ್ಲಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥ ಪ್ರೊ.ಆರ್. ಶಿವಪ್ಪ, ಪ್ರೊ.ಚಂದ್ರಮೌಳಿ, ಡೀಡ್ ಸಂಸ್ಥೆಯ ನಿರ್ದೇಶಕ ಶ್ರೀಕಾಂತ್, ಪ್ರೊ.ಹೆಚ್.ಪಿ. ಜ್ಯೋತಿ, ಪ್ರೊ.ಕಾಳಚನ್ನೇಗೌಡ, ಪ್ರೊ.ವನಜಾ, ಪ್ರೊ.ಸುಧಾ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಫಜನಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಆಕಾಶ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾಂಚನಾ-2 (ತೆ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ಭಾರತ ಮಹಾಸಾಯುಲಕು ವಿಘ್ನಪತಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು

ಮಾ. 19ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ಯುಗಾದಿ, ಅಲ್ಲಮಪ್ರಭು ಜಯಂತಿ; ಪಂಚಾಂಗ ಪಠಣ



ಮೈಸೂರು, ಮಾ. 17- ಸುತ್ತೂರು ಶ್ರೀ ಕ್ಷೇತ್ರದಲ್ಲಿ ಮಾರ್ಚ್ 19ರಂದು ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಪಠಣ ಕಾರ್ಯಕ್ರಮಗಳನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದೆ.

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆಯಲ್ಲಿ ಪ್ರಾತಃಕಾಲ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಬೆಳ್ಳಿರಥ ಪ್ರಾಕಾರೋತ್ಸವ ನೆರವೇರುತ್ತದೆ.

ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಂಜುಂಡೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿಯೂ ವಿಶೇಷ ಪೂಜೆ ನಡೆಯುತ್ತದೆ.

ಬೆಳಗ್ಗೆ 8.00ಕ್ಕೆ ಶ್ರೀಮಠದ ಹಾಗೂ ಗ್ರಾಮದ ಹೊನ್ನೇರು ಬಂಡಿಗಳು ಮಂಗಳವಾದ್ಯ ಹಾಗೂ ಕಲಾತಂಡಗಳೊಂದಿಗೆ ಶ್ರೀಮಠದಿಂದ ಹೊರಟು, ಭೂಮಿತಾಯಿಗೆ ಪೂಜೆ ಸಲ್ಲಿಸಿ, ಹೊಸ ವರ್ಷದ ಕೃಷಿ ಕಾಯಕಕ್ಕೆ ಚಾಲನೆ ನೀಡಿ, ಕರ್ತೃಗದ್ದುಗೆಯನ್ನು ಸಂದರ್ಶಿಸಿ ಶ್ರೀಮಠಕ್ಕೆ ಹಿಂದಿರುಗಲಿವೆ.

ಬೆಳಗ್ಗೆ 9.30ಕ್ಕೆ ಜೆಎಸ್‌ಎಸ್ ವಸತಿ ಶಾಲೆಯ ಸಂಗೀತ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಂದ ಭಕ್ತಿ ಗೀತೆಗಳ ಕಾರ್ಯಕ್ರಮವಿದೆ. 10.30ಕ್ಕೆ ಹೊಳಲ್ಕೆರೆಯ ಕೊಟ್ರೆ ನಂಜಪ್ಪ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಡಾ. ಜಿ.ವಿ. ಮಂಜುನಾಥರವರು ಅಲ್ಲಮಪ್ರಭು ಜೀವನ ಮತ್ತು ವಚನ ವೈಭವ ವಿಷಯ ಕುರಿತು ಉಪನ್ಯಾಸ ನೀಡುವರು. ಮೈಸೂರಿನ ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದಿಂದ ಪ್ರಕಟವಾಗಿರುವ ಶ್ರೀ ಪರಾಭವ ನಾಮ ಸಂವತ್ಸರದ ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗವನ್ನು ಪಂಚಾಂಗಕರ್ತರಾದ ಸಿದ್ಧಾಂತಿ ಡಾ. ಕೆ.ಜಿ. ಪುಟ್ಟಹೊನ್ನಯ್ಯನವರು ಪಠಣ ಮಾಡಿ, ಸಂವಾದ ನಡೆಸಲಿದ್ದಾರೆ.

ಮೈಸೂರು ಎಂಐಟಿ ಕಾಲೇಜಿನ ಮೊದಲ ಘಟಿಕೋತ್ಸವ



ಮೈಸೂರು, ಮಾ. 17- ಮೈಸೂರಿನ ಎಂಐಟಿ ಎಂಬಿಎ, ಎಂಸಿಎ, ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಷನ್ ಎಂಜಿನಿಯರಿಂಗ್ ಮತ್ತು ಕಂಪ್ಯೂಟರ್ ಸೈನ್ಸ್ & ಎಂಜಿನಿಯರಿಂಗ್ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮೊದಲ ಘಟಿಕೋತ್ಸವ ಆಚರಿಸಲಾಯಿತು.

ಎಂಐಟಿ ಮೈಸೂರಿನ ಪರೀಕ್ಷಾ ನಿಯಂತ್ರಕ ಡಾ. ಶರತ್ ಕುಮಾರ್ ವೈ. ಹೆಚ್. ಕಾರ್ಯಕ್ರಮ ಉದ್ಘಾಟಿಸಿದರು. ಅಲಹಾಬಾದ್‌ನ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯ ಮಾಜಿ ನಿರ್ದೇಶಕ ಮತ್ತು ಗುಂಟೂರಿನ ವಿಜ್ಞಾನ್ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ. ನಾಗಭೂಷಣ್ ಪಿ. ಅವರು ಘಟಿಕೋತ್ಸವ ಭಾಷಣ ಮಾಡಿದರು. ಅವರು ತಮ್ಮ ಭಾಷಣದಲ್ಲಿ, ವೃತ್ತಿಪರ ಜೀವನದಲ್ಲಿ ನಾವೀನ್ಯತೆ, ನಿರಂತರ ಕಲಿಕೆ ಮತ್ತು ನೈತಿಕ ಮೌಲ್ಯಗಳ ಮಹತ್ವವನ್ನು ಒತ್ತಿ ಹೇಳಿದರು. ವಿದ್ಯಾರ್ಥಿಗಳು ತಮ್ಮ ಜ್ಞಾನ ಮತ್ತು ಕೌಶಲ್ಯಗಳ ಮೂಲಕ ಸಮಾಜ ಮತ್ತು ರಾಷ್ಟ್ರಕ್ಕೆ ಅರ್ಥಪೂರ್ಣವಾಗಿ ಕೊಡುಗೆ ನೀಡಬೇಕೆಂದು ಪ್ರೋತ್ಸಾಹಿಸಿದರು.

ಎಂಐಟಿ ಮೈಸೂರಿನ ಆಡಳಿತಾಧಿಕಾರಿ ಅನಿರುದ್ಧ ಎ.ಎಂ. ಅವರು ಪದವಿ ಪಡೆದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ಔಪಚಾರಿಕವಾಗಿ ಪ್ರದಾನ ಮಾಡಿದರು. ಮತ್ತು ರ್‍ಯಾಂಕ್ ಪಡೆದವರನ್ನು ಅವರ ಶೈಕ್ಷಣಿಕ ಶ್ರೇಷ್ಠತೆಗಾಗಿ ಸನ್ಮಾನಿಸಲಾಯಿತು. ಸಂಸ್ಥೆಯ ಶೈಕ್ಷಣಿಕ ಡೀನ್ ಡಾ. ಮೊಹಮ್ಮದ್ ಖೈಸರ್ ಪದವಿ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಬೋಧಿಸಿದರು.

ಮಹಾರಾಜ ಎಜುಕೇಷನ್ ಟ್ರಸ್ಟ್ ಮೈಸೂರಿನ ಅಧ್ಯಕ್ಷ ಡಾ. ಬಿ.ಜಿ. ನರೇಶ್ ಕುಮಾರ್, ಉಪಾಧ್ಯಕ್ಷ ಡಾ. ಹೇಮಂತ ಕುಮಾರ್ ಜಿ., ಕಾರ್ಯದರ್ಶಿ ಡಾ. ವೈ ಟಿ. ಕೃಷ್ಣೇಗೌಡ, ಜಂಟಿ ಕಾರ್ಯದರ್ಶಿ ಡಾ. ಎಚ್. ಕೆ. ಚೇತನ್, ಖಜಾಂಚಿ ಡಾ. ಡಿ. ಎಸ್. ಗುರು, ಟ್ರಸ್ಟಿ ಡಾ. ವಾಸುದೇವ್ ಟಿ., ಶೈಕ್ಷಣಿಕ ಮಂಡಳಿಯ ಸದಸ್ಯರು, ಕಾಲೇಜು ಮಂಡಳಿ, ಅಧ್ಯಾಪಕ ಸದಸ್ಯರು, ವಿದ್ಯಾರ್ಥಿಗಳು ಮತ್ತು ಪೋಷಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದಿಂದ ಪುನೀತ್ ಹುಟ್ಟು ಹಬ್ಬ



ನಮನ ಕಲಾಮಂಟಪದಲ್ಲಿ ನಟ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ ಆಚರಿಸಲಾಯಿತು.

ಮೈಸೂರು, ಮಾ.17(ಜಿಎ)-ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನಟ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ ಆಚರಿಸಲಾಯಿತು.


ಕಾರ್ಯಕ್ರಮದಲ್ಲಿ ಸಂಧ್ಯಾ ಸುರಕ್ಷ ಟ್ರಸ್ಟ್ ಅಧ್ಯಕ್ಷ ಡಾ.ಬಿ.ಆರ್.ನಟರಾಜ ಜೋಯಿಸ್, ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ, ಚಿನ್ನ ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಹಕಾರ ಸಂಘದ ಅಧ್ಯಕ್ಷ ಗೋಲ್ಡನ್ ಸುರೇಶ್, ವಕೀಲೆ ತನುಜಾ ಮಹೇಶ್ ಮತ್ತಿತರರು ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಈ ವೇಳೆ ನಟರಾಜ ಜೋಯಿಸ್ ಮಾತನಾಡಿ, ಸಮಾಜಮುಖಿ ಕಾರ್ಯಗಳ ಮಾಡಿದರೆ ಜನರ ಮನದಲ್ಲಿ ಉಳಿಯುತ್ತೇವೆ ಎಂಬುದಕ್ಕೆ ಪುನೀತ್ ಸಾಕ್ಷಿಯಾಗಿದ್ದಾರೆ. ಅವರು ಕಾಲವಾದ ನಂತರ ಜನರು ಅವರ ನಟನೆ ಮೂಲಕ ಯಾರು ನೆನಪು ಮಾಡಿಕೊಳ್ಳಲಿಲ್ಲ ಬದಲಾಗಿ ಅವರ ದಯೆ, ಸಾಮಾಜಿಕ ಕಾರ್ಯಗಳ ಮೂಲಕ ನೆನಪು ಮಾಡಿಕೊಂಡರು. ಯಾರು ಭೂಮಿ ಮೇಲೆ ಇಷ್ಟು ವರ್ಷ ಇರಲೇಬೇಕು ಎಂದು ಬರೆದುಕೊಂಡು ಬರಲು ಸಾಧ್ಯವಿಲ್ಲ. ಕರ್ಮಾನುಸಾರ ಮರಳಬೇಕು. ಹಾಗೇ ಪುನೀತ್ ಸಣ್ಣ ವಯಸಿನಲ್ಲಿಯೇ ಉತ್ತಮ ಸೇವೆಗಳ ಮೂಲಕವೇ ಜನರ ಮನಸಿನಲ್ಲಿ ಉಳಿಕೊಂಡು ಅಜರಾಮರರಾಗಿ ಉಳಿದುಕೊಂಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಎನ್.ರಾಜು, ಎಸ್.ಶಿವಮ್ಮ ಉಪಸ್ಥಿತರಿದ್ದರು.

ಹುಟ್ಟುಹಬ್ಬ-ಅಭಿನಂದನೆ







ಮೈಸೂರಿನ ತ್ಯಾಗು ಸ್ಟೀಲ್ ಅಂಡ್ ಸಿಮೆಂಟ್ ಮಾಲೀಕರೂ ಆದ ಕಾಂಗ್ರೆಸ್ ಮುಖಂಡ ಪೈಲ್ವಾನ್ ಎಸ್.ತ್ಯಾಗರಾಜ್(ಬೋಗಾದಿ) ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಬೋಗಾದಿ ಗ್ರಾಮಸ್ಥರು, ತ್ಯಾಗರಾಜು ಗೆಳೆಯರ ಬಳಗ, ಪಕ್ಷದ ಕಾರ್ಯಕರ್ತರು, ಬೆಂಬಲಿಗರು ಸೇರಿದಂತೆ ನೂರಾರು ಮಂದಿ ಅಭಿನಂದಿಸಿ ಶುಭಾಶಯ ಕೋರಿದರು. ಇದೇ ವೇಳೆ ಬೀದಿಬದಿ ವ್ಯಾಪಾರಿಗಳಿಗೆ ತಳ್ಳುಗಾಡಿ, ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು.

ಏ. 14 ರಿಂದ 'ರಜಾ-ಮಜಾ' ಬೇಸಿಗೆ ಶಿಬಿರ

ಮೈಸೂರು, ಮಾ. 17-ಮೈಸೂರಿನ ನಟನ ರಂಗಶಾಲೆಯು ಏ. 14 ರಿಂದ ಮೇ 9 ರವರೆಗೆ ಮೈಸೂರಿನ ಕೃಷ್ಣಮೂರ್ತಿಪುರಂನ ಬಿ.ಎಸ್.ಎಸ್.ವಿದ್ಯೋದಯ (ಭಗಿನಿ ಸೇವಾ ಸಮಾಜ) ಶಾಲೆಯ ಆವರಣದಲ್ಲಿ ರಜಾ-ಮಜಾ ಬೇಸಿಗೆ ಶಿಬಿರ ಆಯೋಜಿಸಲಾಗಿದೆ. ಈ ಶಿಬಿರದಲ್ಲಿ ಸತತ 26 ದಿನಗಳ ಕಾಲ ನಾಟಕಕಲೆಯನ್ನು ಕೇಂದ್ರವಾಗಿರಿಸಿಕೊಂಡು ಕರ್ನಾಟಕದ ದೇಸಿ ಜಾನಪದ ಕಲಾ ಪ್ರಕಾರಗಳು, ಹಾಡುಗಾರಿಕೆ, ಕರಕುಶಲ ಕಲೆ, ಸಂವಹನ ಕೌಶಲ, ಅಭಿನಯ, ಸಾಧಕರೊಂದಿಗೆ ಸಂವಾದ, ಕಂಪೆನಿ ಮತ್ತು ಆಧುನಿಕ ನಾಟಕಗಳ ಕುರಿತು ಮಕ್ಕಳಿಗೆ ಸಂಪೂರ್ಣ ಮನೋರಂಜನೆಯೊಂದಿಗೆ ವಿಶಿಷ್ಟ ಪ್ರಾತ್ಯಕ್ಷಿಕೆಗಳ ಮೂಲಕ ರಂಗಭೂಮಿಯಲ್ಲಿ ಪ್ರಖ್ಯಾತರಾದ ಸಾಧಕರನೇಕರು ಮಕ್ಕಳನ್ನು ತರಬೇತಿಗೊಳಿಸಲಿದ್ದಾರೆ.

ಮಾರ್ಚ್ 29ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 01.30ರ ವರೆಗೆ ರಾಮಕೃಷ್ಣ ನಗರದಲ್ಲಿರುವ ನಟನ ರಂಗಶಾಲೆಯಲ್ಲಿ ರಜಾ ಮಜಾದ ಅರ್ಜಿ ವಿತರಣೆ ಮತ್ತು ಪ್ರವೇಶ ಪ್ರಕ್ರಿಯೆ ನಡೆಯಲಿದ್ದು, ತಡವಾಗಿ ಬಂದವರಿಗೆ ಯಾವುದೇ ಕಾರಣಕ್ಕೂ ಅವಕಾಶವಿರುವುದಿಲ್ಲ ಕಡ್ಡಾಯವಾಗಿ 8ವರ್ಷದಿಂದ 14ವರ್ಷದ ಮಕ್ಕಳಿಗೆ ಮಾತ್ರ ಪ್ರವೇಶವಿದ್ದು, ಮಾರ್ಚ್ 29ರಂದು ಪ್ರವೇಶಾತಿಗೆ ಬರುವಾಗ ಪೋಷಕರು ಮಗುವಿನ ಭಾವಚಿತ್ರದೊಂದಿಗೆ ಜನನ ಪ್ರಮಾಣ ಪತ್ರ ಅಥವಾ ಆಧಾರ್ ಕಾರ್ಡ್ ಪ್ರತಿಯನ್ನು ತರತಕ್ಕದ್ದು. ಮೊದಲು ಬಂದವರಿಗೆ ಆದ್ಯತೆ. ಹೆಚ್ಚಿನ ವಿವರಗಳಿಗೆ 7259537777, 9480468327 ಸಂಪರ್ಕಿಸಬಹುದು.

ಎಲ್‌ಪಿಜಿ ಸಿಲಿಂಡರ್ ವ್ಯತ್ಯಯದ ಪರಿಣಾಮ ಸೌದೆಗೆ ಭಾರೀ ಬೇಡಿಕೆ

ಸೌದೆ ಬೆಲೆ ದಿಢೀರ್ ಏರಿಕೆ; ದುಬಾರಿಯಾದರೂ ಖರೀದಿಸುತ್ತಿರುವ ಹೋಟೆಲ್‌ಗಳು



ಮೈಸೂರು, ಮಾ.17(ಬಿಎಲ್‌ಯು)- ಎಲ್‌ಪಿಜಿ ಸಿಲಿಂಡರ್‌ಗಳ ವ್ಯತ್ಯಯದ ಪರಿಣಾಮ ಸೌದೆಗೆ ಬೇಡಿಕೆ ಹೆಚ್ಚಾಗಿದ್ದು, ಬೆಲೆ ದುಬಾರಿಯಾಗಿದೆ.

ಎಲ್‌ಪಿಜಿ ಸಿಲಿಂಡರ್, ಇಂಡಕ್ಷನ್ ಸ್ಟೌವ್, ಗೀಜರ್ ಪರಿಚಯವಾದ ನಂತರ ಜನರು ಸೌದೆ ಬಳಸಲು ಮೂಗು ಮುರಿಯುತ್ತಿದ್ದರು. ಸೌದೆ ಬಳಸುವ ಜನರು ತೀರಾ ಬಡವರು ಎಂದು ಕೀಳಾಗಿ ಕಾಣುವ ಪರಿಸ್ಥಿತಿ ಇತ್ತು.

ಆದರೆ ಈಗ ಅನಿವಾರ್ಯವಾಗಿ ಸೌದೆ ಬಳಸುವ ಪರಿಸ್ಥಿತಿ ಎದುರಾಗಿದೆ. ವಾಣಿಜ್ಯ ಸಿಲಿಂಡರ್‌ಗಳ ಪೂರೈಕೆ ಸಂಪೂರ್ಣ ಸ್ಥಗಿತಗೊಂಡಿರುವ ಕಾರಣ ಹೋಟೆಲ್‌ನವರು ಸೌದೆ ಒಲೆಯಲ್ಲಿ ಆಹಾರ ತಯಾರಿಸಲು ಆರಂಭಿಸಿದ್ದಾರೆ.

ಬೇಡಿಕೆ ಹೆಚ್ಚಾಗಿರುವ ಕಾರಣ ಸಹಜವಾಗಿಯೇ ಸೌದೆ ಬೆಲೆ ದುಬಾರಿಯಾಗಿದೆ. ಒಂದು ಟನ್ ಸೌದೆ 12 ಸಾವಿರ ರೂಪಾಯಿ ಇರುವುದು, ಈಗ 15 ಸಾವಿರ ರೂಪಾಯಿಗೆ ಏರಿಕೆಯಾಗಿದೆ.

ವಾಣಿಜ್ಯ ಸಿಲಿಂಡರ್ ದೊರೆಯದ ಕಾರಣ ಹೋಟೆಲ್‌ನವರು ದುಬಾರಿ ಬೆಲೆ ತೆತ್ತು ಸೌದೆ ಖರೀದಿ ಮಾಡುತ್ತಿದ್ದಾರೆ. ಸೌದೆ ಡಿಪೋಗಳತ್ತ ಮುಖ ಮಾಡದ ಜನರು ಈಗ ಸೌದೆ ಡಿಪೋಗಳು ಎಲ್ಲಿದೆ ಎಂದು ಹುಡುಕುವ ಪರಿಸ್ಥಿತಿ ಎದುರಾಗಿದೆ.

ಮೈಸೂರಿನಲ್ಲಿ 500ಕ್ಕೂ ಹೆಚ್ಚು ಹೋಟೆಲ್‌ಗಳು ಬಂದ್

ಮೈಸೂರು ನಗರಕ್ಕೆ ಒಂದು ದಿನಕ್ಕೆ ಕನಿಷ್ಠ 4 ಸಾವಿರ ವಾಣಿಜ್ಯ ಸಿಲಿಂಡರ್ ಅವಶ್ಯಕತೆ ಇದೆ. ಆದರೆ ಈಗ ಒಂದೇ ಒಂದು ಸಿಲಿಂಡರ್ ದೊರೆಯುತ್ತಿಲ್ಲ. ಕಳೆದ ಒಂದು ವಾರದಿಂದ ಗೋಡೌನ್‌ನಲ್ಲಿದ್ದ ಸಿಲಿಂಡರ್‌ಗಳನ್ನು, ಗ್ಯಾಸ್ ಏಜೆನ್ಸಿಯವರು ಕಾಳಸಂತೆಯಲ್ಲಿ ದುಬಾರಿ ಬೆಲೆಗೆ ಮಾರಾಟ ಮಾಡಿದ್ದರು. ಈಗ ಗೋಡೌನ್‌ನಲ್ಲಿರುವ ಸಿಲಿಂಡರ್ ಪೂರ್ಣವಾಗಿ ಖಾಲಿಯಾಗಿದೆ.

ಬಹುತೇಕ ಹೋಟೆಲ್ ಗಳಲ್ಲಿ ಸೌದೆ ಒಲೆ ವ್ಯವಸ್ಥೆ ಇಲ್ಲ. ಇದರಿಂದ ನೂರಾರು ಹೋಟೆಲ್‌ಗಳು ಬಾಗಿಲು ಮುಚ್ಚಿವೆ. ಕಳೆದ ಎರಡು ದಿನಗಳ ಹಿಂದೆ ಮೈಸೂರಿನಲ್ಲಿ ಸುಮಾರು 150ಕ್ಕೂ ಹೆಚ್ಚು ಹೋಟೆಲ್‌ಗಳು ಬಂದ್ ಆಗಿತ್ತು. ಆದರೆ ಈಗ ಸುಮಾರು 500ಕ್ಕೂ ಹೆಚ್ಚು ಹೋಟೆಲ್‌ಗಳು ಬಾಗಿಲು ಹಾಕಿವೆ. ಫಾಸ್ಟ್ ಫುಡ್‌ಗಳ ವ್ಯಾಪಾರವಂತೂ ಸಂಪೂರ್ಣವಾಗಿ ಸ್ಥಗಿತವಾಗಿದೆ.

ದೊಡ್ಡ ದೊಡ್ಡ ಹೋಟೆಲ್‌ಗಳಲ್ಲಿ ಹಿಂದಿನಿಂದಲೂ ಎಲ್‌ಪಿಜಿ ಸಿಲಿಂಡರ್ ಜೊತೆಗೆ ಪರ್ಯಾಯವಾಗಿ ಇಂಡಕ್ಷನ್ ಸ್ಟೌವ್ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಇದರಿಂದ ಆ ಹೋಟೆಲ್‌ಗಳಿಗೆ ಸಿಲಿಂಡರ್ ಅಭಾವ ಎದುರಾಗಿಲ್ಲ.

ಕಾಲೇಜು ಹಾಗೂ ಕೆಲಸಕ್ಕೆ ಹೋಗುವ ಬಹಳಷ್ಟು ಮಂದಿ ರೂಂ ಮಾಡಿಕೊಂಡು ಹೋಟೆಲ್‌ನಲ್ಲಿ ಊಟ, ತಿಂಡಿ ಮಾಡುತ್ತಿದ್ದರು. ಆದರೆ ಈಗ ಹೋಟೆಲ್‌ಗಳು ಬಂದ್ ಆಗಿರುವ ಕಾರಣ, ಕೆಲವು ಹೋಟೆಲ್‌ಗಳಲ್ಲಿ ತಿಂಡಿ ತಿನಿಸುಗಳ ಬೆಲೆ ದುಬಾರಿಯಾಗಿವೆ. ಹಾಗಾಗಿ ಅವರು ಕೂಡ ಹೊಸ ಇಂಡಕ್ಷನ್ ಸ್ಟೌವ್ ಹಾಗೂ ಪಾತ್ರೆಗಳನ್ನು ಖರೀದಿ ಮಾಡಿ ತಾವೇ ಆಹಾರ ತಯಾರಿಸಿಕೊಳ್ಳಲು ಆರಂಭಿಸಿದ್ದಾರೆ.

ಮಧ್ಯ ಪ್ರಾಚ್ಯ ಯುದ್ಧದ ಬಿಕ್ಕಟ್ಟು ಮತ್ತಷ್ಟು ಜಟಿಲವಾಗಿ ಸಮರ್ಪಕ ಎಲ್‌ಪಿಜಿ ಸಿಲಿಂಡರ್ ಸರಬರಾಜು ಆಗದಿದ್ದರೆ ಮುಂದಿನ ದಿನಗಳಲ್ಲಿ ಬಹಳಷ್ಟು ತೊಂದರೆ ಅನುಭವಿಸಬೇಕಾಗುತ್ತದೆ. ಇದರಿಂದ ಬಡ ಹಾಗೂ ಮಧ್ಯಮ ವರ್ಗದವರು ಮತ್ತಷ್ಟು ಆರ್ಥಿಕ ಸಂದಿಗ್ದತೆಗೆ ಸಿಲುಕುವ ಆತಂಕವಿದೆ.

ಹಿಂದೂ-ಮುಸ್ಲಿಂ ಸ್ನೇಹಿತರಿಂದ ನಟ ಪುನೀತ್ ಸ್ಮರಣೆ; ಮಜ್ಜಿಗೆ ವಿತರಣೆ



ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿ ಕಾಂಗ್ರೆಸ್ ಮುಖಂಡ ಶ್ರೀನಾಥ್ ಬಾಬು ನೇತೃತ್ವದಲ್ಲಿ ಹಿಂದೂ-ಮುಸ್ಲಿಂ ಸ್ನೇಹಿತರು ನಟ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬವನ್ನು ಆಚರಿಸಿ, ಸಾರ್ವಜನಿಕರಿಗೆ ಮಜ್ಜಿಗೆ ವಿತರಿಸಿದರು.

ಮೈಸೂರು, ಮಾ.17- ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ, ಯುಗಾದಿ ಮತ್ತು ರಂಜಾನ್ ಹಬ್ಬದ ಹಿನ್ನೆಲೆಯಲ್ಲಿ ನಗರದ ಚಾಮರಾಜ ಜೋಡಿ ರಸ್ತೆಯಲ್ಲಿ ಮಯೂರ ಕನ್ನಡ ಯುವಕರ ಬಳಗದ ವತಿಯಿಂದ ಮಜ್ಜಿಗೆ ವಿತರಿಸಲಾಯಿತು.

ಹಿಂದೂ ಹಾಗೂ ಮುಸ್ಲಿಂ ಸ್ನೇಹಿತರು ಪುನೀತ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದ ನಂತರ ಮಜ್ಜಿಗೆ ವಿತರಿಸಿ, ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡು ಸಾಮರಸ್ಯದ ಸಂದೇಶ ಸಾರಿದರು.

ಈ ವೇಳೆ ಕಾಂಗ್ರೆಸ್ ಮುಖಂಡ ಜಿ. ಶ್ರೀನಾಥ್ ಬಾಬು ಮಾತನಾಡಿ, ಪುನೀತ್ ಅವರು ಚಿಕ್ಕ ವಯಸ್ಸಿನಲ್ಲೇ ಅಗಲಿದರು. ಅವರ ಜೀವಿತಾವಧಿಯಲ್ಲಿ ಮಾಡಿದ ಸೇವಾಕಾರ್ಯಗಳು ಅವರ ಮರಣಾನಂತರ ಬೆಳಕಿಗೆ ಬಂದವು. ಅಲ್ಲಿಯವರೆಗೂ ಯಾರಿಗೂ ತಿಳಿದಿರಲಿಲ್ಲ. ಬಲಗೈಯಲ್ಲಿ ಮಾಡಿದ ದಾನ ಎಡಗೈಗೆ ತಿಳಿಯಬಾರದು ಎಂಬ ರೀತಿಯಲ್ಲಿ ಅಸಹಾಯಕರ ನೆರವಿಗೆ ನಿಂತಿದ್ದರು. ಅವರು ನಟಿಸಿರುವ ಚಿತ್ರಗಳು ಸಮಾಜಕ್ಕೆ ಉತ್ತಮ ಸಂದೇಶ ಸಾರುವಂತಿವೆ ಎಂದು ಸ್ಮರಿಸಿಕೊಂಡರು.

ನಮ್ಮ ದೇಶದಲ್ಲಿ ವರ್ಷವಿಡೀ ಹಲವು ಹಬ್ಬಗಳನ್ನು ಆಚರಿಸುತ್ತೇವೆ. ಈ ಬಾರಿ ಯುಗಾದಿ ಹಾಗೂ ರಂಜಾನ್ ಹಬ್ಬ ಒಂದೇ ಸಂದರ್ಭದಲ್ಲಿ ಬಂದಿವೆ. ಉಭಯ ಧರ್ಮಗಳ ಬಾಂಧವರು ಶಾಂತಿಯುತವಾಗಿ ಅತ್ಯಂತ ಸಂಭ್ರಮದಿಂದ ಆಚರಿಸಿ, ಸೌಹಾರ್ದತೆಯಿಂದ ಬಾಳುವಂತೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಕಿಶೋರ್ ಕುಮಾರ್, ಜಿ.ರಾಘವೇಂದ್ರ, ನಜರ್‌ಬಾದ್ ನಟರಾಜ್, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿರ್ದೇಶಕ ಮಾದಾಪುರ ಲೋಕೇಶ್ ಕುಮಾರ್, ಸೋಯಾಬ್, ನಾಜೀರ್, ಹುಸೇನ್, ಇಮ್ರಾನ್, ಅಹಮದ್, ಗುಲ್ಶನ್, ಸಾಧಿಕ್, ಲಕ್ಷ್ಮಣ, ಮೇಷ್ಟ್ರು ಮಂಜು, ಮಾಯಣ್ಣ, ಷಣ್ಮುಗ, ಮಂಜೇಶ್, ಅರುಣ, ಚಂದ್ರು, ನಾಗರಾಜ್, ಸಂತೋಷ್ ಮತ್ತಿತರರು ಉಪಸ್ಥಿತರಿದ್ದರು.

ಹಣದಿಂದ ಎಲ್ಲವನ್ನೂ ಕೊಳ್ಳಬಹುದು; ಆದರೆ ಆರೋಗ್ಯ ಒಂದನ್ನು ಬಿಟ್ಟು!

ನಯನ ಕುಮಾರ್ಸ್ ಆಸ್ಪತ್ರೆಯಲ್ಲಿ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬದಲ್ಲಿ ಉಚಿತ ಆರೋಗ್ಯ ತಪಾಸಣೆಗೆ ಚಾಲನೆ ನೀಡಿ ಪ್ರೊ.ಭಾಷ್ಯಂ ಸ್ವಾಮೀಜಿ ಹಿತನುಡಿ



ಮೈಸೂರಿನ ದಟ್ಟಗಳ್ಳಿಯ ನಯನ ಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಪವರ್ ಸ್ಟಾರ್ ದಿವಂಗತ ಪುನೀತ್ ರಾಜ್‌ಕುಮಾರ್ ಹುಟ್ಟು ಹಬ್ಬದ ಅಂಗವಾಗಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ನಾಡೋಜ ಪ್ರೊ.ಭಾಷ್ಯಂ ಸ್ವಾಮೀಜಿ ಚಾಲನೆ ನೀಡಿದರು.

ಮೈಸೂರು, ಮಾ.17–ಆರೋಗ್ಯವೇ ಭಾಗ್ಯ ಎಂಬುದು ಅಕ್ಷರಶಃ ಸತ್ಯ. ದೈಹಿಕ ಮತ್ತು ಮಾನಸಿಕ ಆರೋಗ್ಯವು ಸಂತೋಷ, ಉತ್ಪಾದಕತೆ ಮತ್ತು ಜೀವನದ ಒಟ್ಟಾರೆ ಯೋಗಕ್ಷೇಮಕ್ಕೆ ಅತ್ಯಗತ್ಯ ಎಂದು ವಿಜಯ ನಗರದ ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ನಾಡೋಜ ಪ್ರೊ.ಭಾಷ್ಯಂ ಸ್ವಾಮೀಜಿ ಇಂದಿಲ್ಲಿ ಅಭಿಪ್ರಾಯಪಟ್ಟರು.

ನಟ ಪುನೀತ್ ರಾಜ್‌ಕುಮಾರ್ ಹುಟ್ಟು ಹಬ್ಬದ ಅಂಗವಾಗಿ ಮೈಸೂರಿನ ದಟ್ಟಗಳ್ಳಿಯ ನಯನಕುಮಾರ್ಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಆಯೋಜಿಸಲಾಗಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹಣ ಅಥವಾ ಆಸ್ತಿಯಿಂದ ಭೌತಿಕ ವಸ್ತುಗಳನ್ನು ಕೊಳ್ಳಬಹುದು. ಆದರೆ ಆರೋಗ್ಯವನ್ನು ಕೊಳ್ಳಲು ಸಾಧ್ಯವಿಲ್ಲ. ಉತ್ತಮ ಆರೋಗ್ಯವೇ ನೈಜ ಸಂಪತ್ತು ಮತ್ತು ಜೀವನದ ಅತಿದೊಡ್ಡ ಆಸ್ತಿಯಾಗಿದೆ ಎಂದ ಅವರು, ಆರೋಗ್ಯವಿದ್ದರೆ ಮಾತ್ರ ಜೀವನದ ಸಂತೋಷವನ್ನು ಅನುಭವಿಸಲು ಸಾಧ್ಯ. ಆದ್ದರಿಂದ, ಆರೋಗ್ಯವನ್ನು ಕಾಪಾಡಿಕೊಳ್ಳುವುದು ನಮ್ಮ ಮೊದಲ ಆದ್ಯತೆಯಾಗಿರಬೇಕು ಎಂದು ಸಲಹೆ ನೀಡಿದರು.

ಈ ಆಸ್ಪತ್ರೆಯ ಉದ್ಘಾಟನೆಯನ್ನು ನಟ ಪುನೀತ್‌ರಾಜ್‌ಕುಮಾರ್ ಅವರ ಅಮೃತ ಹಸ್ತದೊಂದಿಗೆ ನೆರವೇರಿಸಬೇಕು ಎಂಬುದು ನಮ್ಮ ಕನಸಾಗಿತ್ತು. ಆದರೆ ದುರದೃಷ್ಟವಶಾತ್ ಪುನೀತ್ ಅವರು ನಿಧನರಾದರು. ಇದು ನಿಜಕ್ಕೂ ಅತ್ಯಂತ ವಿಷಾದಕರ ಎಂದು ಬೇಸರ ವ್ಯಕ್ತಪಡಿಸಿದರು.

ನಮ್ಮ ಮನವಿಗೆ ಒಗೊಟ್ಟು ನಟ ಶಿವರಾಜ್‌ಕುಮಾರ್ ಅವರು ಆಸ್ಪತ್ರೆಯನ್ನು ಜನಸೇವೆಗೆ ಲೋಕಾರ್ಪಣೆಗೊಳಿಸಿದರು. ಅಂದಿನಿಂದ ಇಂದಿನವರೆಗೂ ಕಡು ಬಡವರಿಂದ ಹಿಡಿದು ಎಲ್ಲರಿಗೂ ಅತ್ಯುತ್ತಮ, ಗುಣಮಟ್ಟದ ಚಿಕಿತ್ಸೆಯನ್ನು ನೀಡಲಾಗುತ್ತಿದ್ದು, ಇವರ ಸೇವೆ ಹೀಗೆ ಮುಂದುವರೆಯಲಿ ಎಂದು ಆಶೀರ್ವದಿಸಿದರಲ್ಲದೇ, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ನಾವು ಅನಾರೋಗ್ಯಕ್ಕೆ ಒಳಗಾದರೆ, ನಮ್ಮ ಅಮೂಲ್ಯ ಸಮಯ ಕಳೆದು ಹೋಗುತ್ತದೆ ಮತ್ತು ಅದು ನಮ್ಮ ಕುಟುಂಬ ಮತ್ತು ಅಧ್ಯಯನದ ಮೇಲೆ ಪರಿಣಾಮ ಬೀರುತ್ತದೆ. ಗಳಿಸಬಹುದಾದ ಮತ್ತು ಮರಳಿ ಪಡೆಯಬಹುದಾದ ಹಣಕ್ಕಿಂತ ಭಿನ್ನವಾಗಿ, ಕಳೆದು ಹೋದ ಆರೋಗ್ಯವನ್ನು ಮರಳಿ ಪಡೆಯುವುದು ಕಷ್ಟ, ಆದ್ದರಿಂದ, ಎಲ್ಲರೂ ಆರೋಗ್ಯದತ್ತ ಗಮನಹರಿಸಿ, ಕಾಲ ಕಾಲಕ್ಕೆ ತಪಾಸಣೆ ಮಾಡಿಸಿಕೊಂಡು ಸೂಕ್ತ ಔಷಧಿ ಪಡೆದುಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಯೋಗಾನರಸಿಂಹಸ್ವಾಮಿ ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್, ಡಾ. ತೇಜಸ್, ಡಾ.ಶಾಲಿನಿ, ಡಾ.ಪ್ರಕಾಶ್, ಡಾ.ದೇವಾನಂದ್, ಡಾ. ಶಿವಾನಂದ್, ಡಾ.ಅಪೂರ್ವ, ಡಾ.ಪೂರ್ಣಿಮ ಮತ್ತಿತರರು ಉಪಸ್ಥಿತರಿದ್ದರು.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಮೈಸೂರು ಸಿಟಿ, ಸರಸ್ವತಿಪುರಂ, 14ನೇ ಮುಖ್ಯ ರಸ್ತೆ, ಮನೆ ನಂ.373/ಬಿ ರಲ್ಲಿ ವಾಸವಾಗಿರುವ ಮಹದೇವಯ್ಯ ಬಿ. ರವರ ಮಗನಾದ ನವೀನ್ ಬಾಬು ರವರ ಇರಾದೆ ಮೇರೆಗೆ ನೀಡುತ್ತಿರುವ ಸಾರ್ವಜನಿಕ ಪ್ರಕಟಣೆ ಕ್ರಮವೇನೆಂದರೆ, ಷೆಡ್ಯೂಲ್ ನಲ್ಲಿ ನಮೂದಿಸಿರುವ ಸ್ವತ್ತನ್ನು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಮೈಸೂರು ಸಿಟಿ, ಗೌರಿಶಂಕರ ನಗರ, ಊಟಿ ರಸ್ತೆ, ಮನೆ ನಂ.36 ರಲ್ಲಿ ವಾಸವಾಗಿರುವ ಬಿ.ಸಿ.ಪ್ರಸನ್ನ ರವರ ಮಗನಾದ ಶ್ರೀ. ಎಂ.ಪಿ. ನಕುಲ್ ಗೌಡ ರವರಿಂದ ಕ್ರಯಕ್ಕೆ ಪಡೆಯಲು ತೀರ್ಮಾನಿಸಿರುತ್ತಾರೆ. ಆದ್ದರಿಂದ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಬೇರೆ ಯಾರಿಗಾದರು ಯಾವುದೇ ರೀತಿಯ, ಹಕ್ಕು, ಆಸಕ್ತಿ, ಸ್ವಾಮ್ಯ ಅಥವಾ ಯಾವುದೇ ರೀತಿಯ ಹಿತಾಸಕ್ತಿ, ಭಾಗಾಂಶವುಳ್ಳವರು ಯಾರಾದರು ಇದ್ದಲ್ಲಿ, ಈ ಸಾರ್ವಜನಿಕ ಪ್ರಕಟಣೆಯಾದ ಹದಿನೈದು (15) ದಿನದೊಳಗೆ ತಮ್ಮ ತಕರಾರನ್ನು ಲಿಖಿತವಾಗಿ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು ಇಲ್ಲದಿದ್ದ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಯಾವುದೇ ತಂಟೆ ತಕರಾರು ಇಲ್ಲವೆಂದು ಪರಿಗಣಿಸಿ ಖರೀದಿಸುತ್ತಾರೆ. ನಂತರ ಬಂದ ಯಾವುದೇ ತಕರಾರುಗಳು ನನ್ನ ಕಕ್ಷಿದಾರರಿಗೆ ಬಾಧ್ಯವಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಏಚಗಳ್ಳಿ ಗ್ರಾಮ, ಸರ್ವೆ ನಂ. 104/*/1 ರಲ್ಲಿನ ಒಟ್ಟು ವಿಸ್ತೀರ್ಣ 1.2.12.00 ಎಕರೆ/ಗುಂಟೆ ವಿಸ್ತೀರ್ಣದಲ್ಲಿ 1.2.12.00 ಎಕರೆ/ಗುಂಟೆ ವಿಸ್ತೀರ್ಣದ ಭೂ ಪರಿವರ್ತಿತ (ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಆದೇಶ ಸಂಖ್ಯೆ: 583762 ದಿನಾಂಕ: 29–02–2024) ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ :ಸರ್ವೆ ನಂ. 104/4, ಪಶ್ಚಿಮಕ್ಕೆ :ಸರ್ವೆ ನಂ. 101, ಉತ್ತರಕ್ಕೆ : ಸರ್ವೆ ನಂ.103, ದಕ್ಷಿಣಕ್ಕೆ : ಸರ್ವೆ ನಂ.104/5.

Sd/- B.C Renuka Prasad
B.Sc., LL.B
KAR 1787 / 2009.No. 816,
10th Cross, Ramanuja Road,
Mysuru-570004. Mob: 9448906137
Date: 17-03-2026